# ಹಿಸ್ನುಲ್ ಮುಸ್ಲಿಮ್

## ಮಿನ್ ಅದ್ಕಾರಿಲ್ ಕಿತಾಬಿ ವಸ್ಸುನ್ನಃ

## ಮುಸ್ಲಿಮನ ರಕ್ಷಣಾ ಕೋಟೆ

### ಕುರ್‌ಆನ್ ಮತ್ತು ಸುನ್ನತ್‌ನಲ್ಲಿರುವ ಕೆಲವು ದಿಕ್ರ್‌ಗಳು

حصن المسلم من أذكار الكتاب والسنة

[ Kannada – ಕನ್ನಡ – الكنادي ]

ಅಶ್ಶೈಖ್ ಸಈದ್ ಇಬ್ನ್ ಅಲೀ ಇಬ್ನ್ ವಹ್ಫ್
ಅಲ್‌ಕಹ್ತಾನೀ

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ಪರಿಶೀಲನೆ: ಅಬೂ ಬಕರ್ ನಝೀರ್ ಸಲಫಿ

# حصن المسلم

## من أذكار الكتاب والسنة

للشيخ سعيد بن علي بن وهف القحطاني

ترجمة: محمد حمزة البتوري

مراجعة: أبو بكر نذير السلفي

# ಪ್ರಸ್ತಾವನೆ

ಖಂಡಿತವಾಗಿಯೂ ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು. ನಾವು ಅವನನ್ನು ಸ್ತುತಿಸುತ್ತೇವೆ, ಅವನೊಂದಿಗೆ ಸಹಾಯವನ್ನು ಯಾಚಿಸುತ್ತೇವೆ ಮತ್ತು ಅವನೊಂದಿಗೆ ಪಾಪಮುಕ್ತಿಯನ್ನು ಬೇಡುತ್ತೇವೆ. ನಮ್ಮ ಶರೀರಗಳ ಕೆಡುಕುಗಳಿಂದ ಮತ್ತು ನಮ್ಮ ಕರ್ಮಗಳ ಕೆಡುಕುಗಳಿಂದ ನಾವು ಅವನೊಂದಿಗೆ ರಕ್ಷೆಯನ್ನು ಬೇಡುತ್ತೇವೆ. ಅಲ್ಲಾಹು ಯಾರನ್ನಾದರೂ ಸನ್ಮಾರ್ಗದಲ್ಲಿ ಮಾಡಿದರೆ ಅವನನ್ನು ದುರ್ಮಾರ್ಗದಲ್ಲಿ ಮಾಡುವವರಾರೂ ಇಲ್ಲ ಮತ್ತು ಅವನು ಯಾರನ್ನಾದರೂ ದುರ್ಮಾರ್ಗದಲ್ಲಿ ಮಾಡಿದರೆ ಅವನನ್ನು ಸನ್ಮಾರ್ಗದಲ್ಲಿ ಮಾಡುವವರಾರೂ ಇಲ್ಲ. ಅಲ್ಲಾಹನ ಹೊರತು ಬೇರೆ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನಾಗಿದ್ದಾನೆ ಮತ್ತು ಅವನಿಗೆ ಯಾವುದೇ ಸಹಭಾಗಿಗಳಿಲ್ಲವೆಂದು ನಾನು ಸಾಕ್ಷಿ ನುಡಿಯುತ್ತೇನೆ. ಮತ್ತು ಮುಹಮ್ಮದ್(ﷺ)ರವರು ಅವನ ದಾಸರೂ ಸಂದೇಶವಾಹಕರೂ ಆಗಿದ್ದಾರೆಂದು ನಾನು ಸಾಕ್ಷಿ ನುಡಿಯುತ್ತೇನೆ. ಅವರ ಮೇಲೆ, ಅವರ ಕುಟುಂಬದ ಮೇಲೆ ಮತ್ತು ಪ್ರತಿಫಲ ದಿನದ ತನಕ ಅವರನ್ನು ಅತ್ಯುತ್ತಮವಾಗಿ ಅನುಸರಿಸಿದವರೆಲ್ಲರ ಮೇಲೂ ಅಲ್ಲಾಹನ ಸಲಾತ್ ಮತ್ತು ಅತ್ಯಧಿಕವಾದ ಸಲಾಮ್ ಇರಲಿ.

ಮುಂದುವರಿದು ಹೇಳುವುದೇನೆಂದರೆ, ಈ ಕೃತಿಯು ನಾನು ನನ್ನ **‘ಅದ್ದಿಕ್ರು ವದ್ದುಆಉ ವಲ್ ಇಲಾಜು ಬಿರ್ರುಕಾ ಮಿನಲ್ ಕಿತಾಬಿ ವಸ್ಸುನ್ನಃ’** (ಕುರ್‌ಆನ್ ಮತ್ತು ಸುನ್ನತ್‌ನಲ್ಲಿರುವ ದಿಕ್ರ್, ದುಆ ಮತ್ತು ಮಂತ್ರದ ಮೂಲಕವಿರುವ ಚಿಕಿತ್ಸೆ) ಎಂಬ ಗ್ರಂಥವನ್ನು ಸಂಕ್ಷಿಪ್ತಗೊಳಿಸಿ ರಚಿಸಿದ

ಸಂಕ್ಷಿಪ್ತ ಕೃತಿ. [1] ಪ್ರಯಾಣದ ಸಂದರ್ಭದಲ್ಲಿ ಈ ಪುಸ್ತಕವನ್ನು ಒಯ್ಯಲು ಸುಲಭವಾಗುವುದಕ್ಕಾಗಿ ನಾನು ಇದರಲ್ಲಿ (ಮೂಲ ಗ್ರಂಥದಲ್ಲಿದ್ದ) ದಿಕ್ರ್‌ಗಳನ್ನು ಮಾತ್ರ ನೀಡಿ ಸಂಕ್ಷಿಪ್ತ ಗೊಳಿಸಿದ್ದೇನೆ.

ನಾನು ಇದರಲ್ಲಿ ದಿಕ್ರ್‌ಗಳನ್ನು ಮಾತ್ರ ನೀಡುವ ಮೂಲಕ ಸಂಕ್ಷಿಪ್ತಗೊಳಿಸಿದ್ದೇನೆ. ಪ್ರತಿಯೊಂದು ಹದೀಸ್‌ಗಳ ತಖ್ರೀಜ್‌ನಲ್ಲಿ ಮೂಲಗ್ರಂಥದಲ್ಲಿ ಕಂಡು ಬರುವಂತಹ ಒಂದು ಅಥವಾ ಎರಡು ಮೂಲಗಳನ್ನು ಮಾತ್ರ ಪ್ರಸ್ತಾಪಿಸಿದ್ದೇನೆ. ಯಾರಿಗಾದರೂ ಹದೀಸ್‌ಗಳನ್ನು ವರದಿ ಮಾಡಿದ ಸಹಾಬಿಯ ಬಗ್ಗೆ ಅರಿಯಬೇಕೆಂದಿದ್ದರೆ, ಅಥವಾ ತಖ್ರೀಜ್‌ನ ಬಗ್ಗೆ ಹೆಚ್ಚು ಮಾಹಿತಿ ಬೇಕೆಂದಿದ್ದರೆ ಅವರು ಈ ಕೃತಿಯ ಮೂಲಗ್ರಂಥವನ್ನು ಪರಾಮರ್ಶಿಸಲಿ.

ಅಲ್ಲಾಹು –ಅಝ್ಝ ವಜಲ್ಲ್– ಈ ಕೃತಿಯನ್ನು, ಅವನ ಗೌರವಾನ್ವಿತ ಮುಖವನ್ನು ಮಾತ್ರ ಆಶಿಸಿ ರಚಿಸಿದಂತಹ ಒಂದು ಕೃತಿಯನ್ನಾಗಿ ಮಾಡಲಿ, ಇದರ ಮೂಲಕ ನನಗೆ ನನ್ನ ಇಹಲೋಕ ಜೀವನದಲ್ಲೂ ಪರಲೋಕ ಜೀವನದಲ್ಲೂ ಪ್ರಯೋಜನವನ್ನು ನೀಡಲಿ ಮತ್ತು ಇದನ್ನು ಓದಿದವರಿಗೆ ಅಥವಾ ಇದನ್ನು ಮುದ್ರಿಸಿದವರಿಗೆ ಅಥವಾ ಇದರ ಪ್ರಕಟಣೆಗೆ ಕಾರಣರಾದವರಿಗೆ ಇದರ ಮೂಲಕ ಪ್ರಯೋಜನ ನೀಡಲಿ ಎಂದು ನಾನು ಅಲ್ಲಾಹನ ಅತಿ ಸುಂದರವಾದ ನಾಮಗಳನ್ನು ಮತ್ತು ಅವನ ಅತ್ಯುನ್ನತವಾದ ವಿಶೇಷಣಗಳನ್ನು ಮುಂದಿಟ್ಟುಕೊಂಡು ಅವನೊಂದಿಗೆ ಬೇಡುತ್ತಿದ್ದೇನೆ. ಖಂಡಿತವಾಗಿಯೂ ಅವನು, –ಸರ್ವ ನ್ಯೂನತೆಗಳಿಂದ ಪರಿಶುದ್ಧನಾಗಿರುವ ಅಲ್ಲಾಹು–, ಅದರ ರಕ್ಷಕನೂ ಅದನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದವನೂ ಆಗಿದ್ದಾನೆ. ಅಲ್ಲಾಹನ ಸಲಾತ್ ಮತ್ತು ಸಲಾಮ್ ನಮ್ಮ ಪ್ರವಾದಿಯಾದ

[1] ಇದರ ಮೂಲಗ್ರಂಥವು ಸುದೀರ್ಘವಾದ ತಖ್ರೀಜ್‌ಗಳೊಂದಿಗೆ ನಾಲ್ಕು ಭಾಗಗಳಲ್ಲಿ ಮುದ್ರಿಸಲ್ಪಟ್ಟಿದೆ. ಅಲ್ಲಾಹನಿಗೆ ಸರ್ವಸ್ತುತಿ. ಹಿಸ್ನುಲ್ ಮುಸ್ಲಿಮ್ ಅದರ ಮೊದಲ ಮತ್ತು ಎರಡನೆಯ ಭಾಗದಲ್ಲಿ ಸೇರಿದ್ದು.

ಮುಹಮ್ಮದ್(ﷺ)ರವರ ಮೇಲೆ, ಅವರ ಕುಟುಂಬದ ಮೇಲೆ, ಅವರ ಸಹಾಬಾಗಳ ಮೇಲೆ ಮತ್ತು ಪ್ರತಿಫಲ ದಿನದ ತನಕ ಅವರನ್ನು ಅತ್ಯುತ್ತಮವಾಗಿ ಅನುಸರಿಸಿದವರ ಮೇಲೆ ಇರಲಿ.

**ಗ್ರಂಥಕರ್ತರು**

**ಸಫರ್ 1409 ಹಿ.**

# ದಿಕ್ರ್‌ನ ಶ್ರೇಷ್ಠತೆ

ಅಲ್ಲಾಹು ತಆಲಾ ಹೇಳುತ್ತಾನೆ:

﴿ فَٱذۡكُرُونِيٓ أَذۡكُرۡكُمۡ وَٱشۡكُرُواْ لِي وَلَا تَكۡفُرُونِ ١٥٢ ﴾ [البقرة: 152].

“ಆದ್ದರಿಂದ ನೀವು ನನ್ನನ್ನು ಸ್ಮರಿಸಿರಿ; ನಾನೂ ನಿಮ್ಮನ್ನು ಸ್ಮರಿಸುವೆನು. ನನಗೆ ಕೃತಜ್ಞತೆ ಸಲ್ಲಿಸಿರಿ ಮತ್ತು ನನ್ನೊಂದಿಗೆ ಕೃತಘ್ನತೆ ತೋರದಿರಿ.” [2]

﴿ يَـٰٓأَيُّهَا ٱلَّذِينَ ءَامَنُواْ ٱذۡكُرُواْ ٱللَّهَ ذِكۡرٗا كَثِيرٗا ٤١ ﴾ [الأحزاب: 41].

“ಓ ವಿಶ್ವಾಸವಿಟ್ಟವರೇ! ನೀವು ಅಲ್ಲಾಹುವನ್ನು ಹೇರಳವಾಗಿ ಸ್ಮರಿಸಿರಿ.” [3]

﴿ وَٱلذَّـٰكِرِينَ ٱللَّهَ كَثِيرٗا وَٱلذَّـٰكِرَٰتِ أَعَدَّ ٱللَّهُ لَهُم مَّغۡفِرَةٗ وَأَجۡرًا عَظِيمٗا ٣٥ ﴾ [الأحزاب: 35].

“ಅಲ್ಲಾಹನನ್ನು ಹೇರಳವಾಗಿ ಸ್ಮರಿಸುವ ಪುರುಷರು ಮತ್ತು ಸ್ತ್ರೀಯರು. ಇವರಿಗೆ ಅಲ್ಲಾಹು ಪಾಪಮುಕ್ತಿಯನ್ನು ಮತ್ತು ಮಹಾ ಪ್ರತಿಫಲವನ್ನು ಸಿದ್ಧಗೊಳಿಸಿರುವನು.” [4]

---

[2] ಸೂರಃ ಅಲ್‌ಬಕರಃ 152

[3] ಸೂರಃ ಅಲ್‌ಅಹ್‌ಝಾಬ್ 41

[4] ಸೂರಃ ಅಲ್‌ಅಹ್‌ಝಾಬ್ 35

﴿ وَٱذۡكُر رَّبَّكَ فِي نَفۡسِكَ تَضَرُّعٗا وَخِيفَةٗ وَدُونَ ٱلۡجَهۡرِ مِنَ ٱلۡقَوۡلِ بِٱلۡغُدُوِّ وَٱلۡأٓصَالِ وَلَا تَكُن مِّنَ ٱلۡغَٰفِلِينَ ٢٠٥ ﴾ [الأعراف: 205]

.

“ವಿನಯದೊಂದಿಗೆ ಮತ್ತು ಭಯದೊಂದಿಗೆ ಧ್ವನಿಯನ್ನು ಏರಿಸದೆ ಮುಂಜಾನೆ ಮತ್ತು ಸಂಜೆ ತಾವು ತಮ್ಮ ರಬ್ಬ್‌ನನ್ನು ತಮ್ಮ ಮನಸ್ಸಿನಲ್ಲಿ ಸ್ಮರಿಸಿರಿ. ತಾವು ಅಲಕ್ಷ್ಯರಾಗಿರುವವರ ಪೈಕಿ ಸೇರದಿರಿ.” [5]

ಪ್ರವಾದಿ(ﷺ)ರವರು ಹೇಳಿದರು:

« مَثَلُ الَّذِي يَذْكُرُ رَبَّهُ وَالَّذِي لَا يَذْكُرُ رَبَّهُ مَثَلُ الْحَيِّ وَالْمَيِّتِ »

“ತನ್ನ ರಬ್ಬ್‌ನನ್ನು ಸ್ಮರಿಸುವವನ ಮತ್ತು ತನ್ನ ರಬ್ಬ್‌ನನ್ನು ಸ್ಮರಿಸದವನ ಉದಾಹರಣೆಯು ಬದುಕಿರುವವನ ಮತ್ತು ಮೃತಪಟ್ಟವನ ಉದಾಹರಣೆಯಂತೆ.” [6]

ಪ್ರವಾದಿ(ﷺ)ರವರು ಹೇಳಿದರು:

« أَلَا أُنَبِّئُكُمْ بِخَيْرِ أَعْمَالِكُمْ، وَأَزْكَاهَا عِنْدَ مَلِيكِكُمْ، وَأَرْفَعِهَا فِي دَرَجَاتِكُمْ وَخَيْرٌ لَكُمْ مِنْ إِنْفَاقِ الذَّهَبِ وَالْوَرِقِ، وَخَيْرٌ لَكُمْ مِنْ أَنْ

---

[5] ಸೂರಃ ಅಲ್‌ಅಅ್‌ರಾಫ್ 205

[6] ಅಲ್‌ಬುಖಾರೀ (ಫತ್‌ಹುಲ್ ಬಾರಿ) 11/208 ಹದೀಸ್ ಸಂಖ್ಯೆ: 6407; ಮುಸ್ಲಿಮ್ 1/539 ಹದೀಸ್ ಸಂಖ್ಯೆ: 779. ಮುಸ್ಲಿಮ್‌ರ ವರದಿಯಲ್ಲಿರುವ ಪದಗಳು ಹೀಗಿವೆ: “ಅಲ್ಲಾಹನನ್ನು ಸ್ಮರಿಸುವ ಮನೆಯ ಮತ್ತು ಅಲ್ಲಾಹನನ್ನು ಸ್ಮರಿಸದ ಮನೆಯ ಉದಾಹರಣೆಯು ಬದುಕಿರುವವನ ಮತ್ತು ಮೃತಪಟ್ಟವನ ಉದಾಹರಣೆಯಂತೆ.”

تَلْقَوْا عَدُوَّكُمْ فَتَضْرِبُوا أَعْنَاقَهُمْ وَيَضْرِبُوا أَعْنَاقَكُمْ؟» قَالُوا: بَلَى، قَالَ: «ذِكْرُ اللَّهِ تَعَالَى »

“ನಿಮ್ಮ ಕರ್ಮಗಳಲ್ಲಿ ಉತ್ತಮವಾದುದು, ನಿಮ್ಮ ರಬ್ಬ್‌ನ ಬಳಿ ಶುದ್ಧವಾದುದು, ನಿಮ್ಮ ದರ್ಜೆಗಳಲ್ಲಿ ಉನ್ನತವಾದುದು, ಚಿನ್ನ ಮತ್ತು ಬೆಳ್ಳಿಯನ್ನು ವ್ಯಯಿಸುವುದಕ್ಕಿಂತಲೂ ಉತ್ತಮವಾದುದು, ನೀವು ನಿಮ್ಮ ಶತ್ರುಗಳನ್ನು ಎದುರುಗೊಂಡಾಗ ನೀವು ಅವರನ್ನು ಸಂಹರಿಸುವು ದಕ್ಕಿಂತಲೂ ಮತ್ತು ಅವರು ನಿಮ್ಮನ್ನು ಸಂಹರಿಸುವುದಕ್ಕಿಂತಲೂ ಉತ್ತಮವಾದುದು ಯಾವುದೆಂದು ನಾನು ನಿಮಗೆ ತಿಳಿಸಿಕೊಡಲೇ?’ ಸಹಾಬಾಗಳು ಹೇಳಿದರು: ‘ತಿಳಿಸಿಕೊಡಿ’. ಪ್ರವಾದಿ(ﷺ)ರವರು ಹೇಳಿದರು: ‘ಅದು ಅಲ್ಲಾಹನ ದಿಕ್ರ್ (ಸ್ಮರಣೆ)’.” [7]

ಪ್ರವಾದಿ(ﷺ)ರವರು ಹೇಳಿದರು:

« يَقُولُ اللَّهُ تَعَالَى: أَنَا عِنْدَ ظَنِّ عَبْدِي بِي، وَأَنَا مَعَهُ إِذَا ذَكَرَنِي، فَإِنْ ذَكَرَنِي فِي نَفْسِهِ، ذَكَرْتُهُ فِي نَفْسِي، وَإِنْ ذَكَرَنِي فِي مَلَأٍ، ذَكَرْتُهُ فِي مَلَأٍ خَيْرٍ مِنْهُمْ، وَإِنْ تَقَرَّبَ إِلَيَّ شِبْرًا، تَقَرَّبْتُ إِلَيْهِ ذِرَاعًا، وَإِنْ تَقَرَّبَ إِلَيَّ ذِرَاعًا، تَقَرَّبْتُ إِلَيْهِ بَاعًا، وَإِنْ أَتَانِي يَمْشِي أَتَيْتُهُ هَرْوَلَةً »

“ಅಲ್ಲಾಹು ಹೇಳುತ್ತಾನೆ: ‘ನನ್ನ ದಾಸನು ನನ್ನ ಬಗ್ಗೆ ಯೋಚಿಸುವಾಗ ನಾನು ಅವನೊಂದಿಗಿರುವೆನು. ಅವನು ನನ್ನನ್ನು

[7] ಅತ್ತಿರ್ಮಿದೀ 5/459 ಹದೀಸ್ ಸಂಖ್ಯೆ: 3377; ಇಬ್ನ್ ಮಾಜ 2/1246 ಹದೀಸ್ ಸಂಖ್ಯೆ: 3790. ನೋಡಿ: ಸಹೀಹ್ ಇಬ್ನ್ ಮಾಜ 2/316; ಸಹೀಹು ತ್ತಿರ್ಮಿದೀ 3/139.

ಸ್ಮರಿಸುವಾಗ ನಾನು ಅವನೊಂದಿಗಿರುವೆನು. ಅವನು ನನ್ನನ್ನು ಅವನ ಮನಸ್ಸಿನಲ್ಲಿ ಸ್ಮರಿಸಿದರೆ ನಾನು ಅವನನ್ನು ನನ್ನ ಮನಸ್ಸಿನಲ್ಲಿ ಸ್ಮರಿಸುವೆನು. ಅವನು ನನ್ನನ್ನು ಒಂದು ಸಭೆಯಲ್ಲಿ ಸ್ಮರಿಸಿದರೆ ನಾನು ಅವನನ್ನು ಆ ಸಭೆಯಲ್ಲಿರುವವರಿಗಿಂತಲೂ ಮಿಗಿಲಾದವರು ಇರುವಂತಹ ಒಂದು ಸಭೆಯಲ್ಲಿ ಸ್ಮರಿಸುವೆನು. ಅವನು ಒಂದು ಗೇಣಿನಷ್ಟು ನನಗೆ ಹತ್ತಿರವಾದರೆ ನಾನು ಒಂದು ಮೊಳದಷ್ಟು ಅವನಿಗೆ ಹತ್ತಿರವಾಗುವೆನು. ಅವನು ಒಂದು ಮೊಳದಷ್ಟು ನನಗೆ ಹತ್ತಿರವಾದರೆ ನಾನು ಒಂದು ಮಾರಿನಷ್ಟು ಅವನಿಗೆ ಹತ್ತಿರವಾಗುವೆನು. ಅವನು ನನ್ನೆಡೆಗೆ ನಡೆಯುತ್ತಾ ಬಂದರೆ ನಾನು ಅವನೆಡೆಗೆ ಓಡೋಡಿ ಧಾವಿಸುವೆನು'." [8]

عَنْ عَبْدِ اللَّهِ بْنِ بُسْرٍ رَضِيَ اللَّهُ عَنْهُ أَنَّ رَجُلًا قَالَ: يَا رَسُولَ اللَّهِ إِنَّ شَرَائِعَ الْإِسْلَامِ قَدْ كَثُرَتْ عَلَيَّ فَأَخْبِرْنِي بِشَيْءٍ أَتَشَبَّثُ بِهِ قَالَ: «لَا يَزَالُ لِسَانُكَ رَطْبًا مِنْ ذِكْرِ اللَّهِ»

"ಅಬ್ದುಲ್ಲಾಹ್ ಇಬ್ನ್ ಬುಸ್ರ್(ﷺ)ರಿಂದ: ಓರ್ವ ವ್ಯಕ್ತಿ ಹೇಳಿದರು: 'ಓ ಅಲ್ಲಾಹನ ಸಂದೇಶವಾಹಕರೇ! ಇಸ್ಲಾಮಿನ ಶರೀಅತ್ತ್‌ಗಳು ನನ್ನ ಮೇಲೆ ಅಧಿಕಗೊಂಡಿವೆ. ಆದ್ದರಿಂದ ನಾನು ಬಿಗಿಯಾಗಿ ಹಿಡಿಯುವಂತಹ ಒಂದು ವಿಷಯವನ್ನು ನನಗೆ ತಿಳಿಸಿಕೊಡಿ'. ಪ್ರವಾದಿ(ﷺ)ರವರು ಹೇಳಿದರು: 'ತಮ್ಮ ನಾಲಗೆಯು ಅಲ್ಲಾಹನ ದಿಕ್ರ್‌ನಿಂದಾಗಿ ಸದಾ ಒದ್ದೆಯಾಗಿರಲಿ'." [9]

---

[8] ಅಲ್‌ಬುಖಾರೀ 8/171 ಹದೀಸ್ ಸಂಖ್ಯೆ: 7405; ಮುಸ್ಲಿಮ್ 4/2061 ಹದೀಸ್ ಸಂಖ್ಯೆ: 2675. ಇದು ಅಲ್‌ಬುಖಾರೀಯ ಪದಗಳು.

[9] ಅತ್ತಿರ್ಮಿದೀ 5/458 ಹದೀಸ್ ಸಂಖ್ಯೆ: 3375; ಇಬ್ನ್ ಮಾಜ 2/1246, 3793. ಇದನ್ನು ಅಲ್‌ಅಲ್ಬಾನೀ ತಮ್ಮ ಸಹೀಹು ತ್ತಿರ್ಮಿದೀಯಲ್ಲಿ (3/139) ಮತ್ತು ಸಹೀಹ್ ಇಬ್ನ್ ಮಾಜದಲ್ಲಿ (2/317) ಸಹೀಹ್ ಎಂದಿದ್ದಾರೆ.

ಪ್ರವಾದಿ(ﷺ)ರವರು ಹೇಳಿದರು:

«مَنْ قَرَأَ حَرْفًا مِنْ كِتَابِ اللَّهِ فَلَهُ بِهِ حَسَنَةٌ، وَالْحَسَنَةُ بِعَشْرِ أَمْثَالِهَا، لَا أَقُولُ الم حَرْفٌ، وَلَكِنْ أَلِفٌ حَرْفٌ، وَلَامٌ حَرْفٌ، وَمِيمٌ حَرْفٌ»

"ಯಾರಾದರೂ ಅಲ್ಲಾಹನ ಗ್ರಂಥದಿಂದ ಒಂದು ಅಕ್ಷರವನ್ನು ಓದಿದರೆ ಅವನಿಗೆ ಅದರಲ್ಲಿ ಒಂದು ಪುಣ್ಯವಿದೆ. ಮತ್ತು ಒಂದು ಪುಣ್ಯವು ಅದರ ಹತ್ತು ಪಟ್ಟು ಇದೆ. ಅಲಿಫ್ ಲಾಮ್ ಮೀಮ್ ಒಂದೇ ಅಕ್ಷರವೆಂದು ನಾನು ಹೇಳುವುದಿಲ್ಲ. ಆದರೆ ಅಲಿಫ್ ಒಂದು ಅಕ್ಷರ, ಲಾಮ್ ಒಂದು ಅಕ್ಷರ ಮತ್ತು ಮೀಮ್ ಒಂದು ಅಕ್ಷರ." [10]

وَعَنْ عُقْبَةَ بْنِ عَامِرٍ رَضِيَ اللَّهُ عَنْهُ قَالَ: خَرَجَ رَسُولُ اللَّهِ صَلَّى اللَّهُ عَلَيْهِ وَسَلَّمَ وَنَحْنُ فِي الصُّفَّةِ، فَقَالَ: «أَيُّكُمْ يُحِبُّ أَنْ يَغْدُوَ كُلَّ يَوْمٍ إِلَى بُطْحَانَ، أَوْ إِلَى الْعَقِيقِ، فَيَأْتِيَ مِنْهُ بِنَاقَتَيْنِ كَوْمَاوَيْنِ فِي غَيْرِ إِثْمٍ وَلَا قَطِيعَةِ رَحِمٍ»؟ فَقُلْنَا: يَا رَسُولَ اللَّهِ نُحِبُّ ذَلِكَ. قَالَ: «أَفَلَا يَغْدُو أَحَدُكُمْ إِلَى الْمَسْجِدِ فَيَعْلَمَ، أَوْ يَقْرَأَ آيَتَيْنِ مِنْ كِتَابِ اللَّهِ عَزَّ وَجَلَّ خَيْرٌ لَهُ مِنْ نَاقَتَيْنِ، وَثَلَاثٌ خَيْرٌ لَهُ مِنْ ثَلَاثٍ، وَأَرْبَعٌ خَيْرٌ لَهُ مِنْ أَرْبَعٍ، وَمِنْ أَعْدَادِهِنَّ مِنَ الْإِبِلِ».

[10] ಅತ್ತಿರ್ಮಿದೀ 5/175 ಹದೀಸ್ ಸಂಖ್ಯೆ: 2910. ಇದನ್ನು ಅಲ್‌ಅಲ್ಬಾನೀ ತಮ್ಮ ಸಹೀಹು ತ್ತಿರ್ಮಿದೀಯಲ್ಲಿ (9/3) ಮತ್ತು ಸಹೀಹುಲ್ ಜಾಮಿಇ ಸ್ಸಗೀರ್‌ನಲ್ಲಿ (5/340) ಸಹೀಹ್ ಎಂದಿದ್ದಾರೆ.

“ಉಕ್ಬಃ ಇಬ್ನ್ ಆಮಿರ್(ﷺ)ರಿಂದ: ಅವರು ಹೇಳುತ್ತಾರೆ: ನಾವು ಸುಫ್ಫದಲ್ಲಿ ಕುಳಿತಿರುವಾಗ ಪ್ರವಾದಿ(ﷺ)ರವರು ತಮ್ಮ ಮನೆಯಿಂದ ಹೊರಬಂದು ಹೇಳಿದರು: ಪ್ರತಿದಿನವೂ ಬುತ್‌ಹಾನ್ ಕಣಿವೆಗೆ ಅಥವಾ ಅಲ್‌ಅಕೀಕ್ ಕಣಿವೆಗೆ ಹೋಗಿ, ಯಾವುದೇ ಪಾಪಕೃತ್ಯವನ್ನು ಮಾಡದೆ ಮತ್ತು ಯಾವುದೇ ಕುಟುಂಬ ಸಂಬಂಧವನ್ನು ಕಡಿಯದೆ ಎರಡು ದೊಡ್ಡ ಹೆಣ್ಣು ಒಂಟೆಗಳೊಂದಿಗೆ ಬರಲು ನಿಮ್ಮಲ್ಲಿ ಯಾರು ಇಷ್ಟಪಡುತ್ತಾರೆ? ನಾವು ಹೇಳಿದೆವು: ಓ ಅಲ್ಲಾಹನ ಸಂದೇಶವಾಹಕರೇ, ನಾವು ಅದನ್ನು ಇಷ್ಟಪಡುತ್ತೇವೆ. ಪ್ರವಾದಿ(ﷺ)ರವರು ಹೇಳಿದರು: ನಿಮ್ಮಲ್ಲೊಬ್ಬನು ಮಸೀದಿಗೆ ಹೋಗಿ ಅಲ್ಲಿ ಅಲ್ಲಾಹನ –ಅಝ್ಝ ವಜಲ್ಲ್– ಗ್ರಂಥದಿಂದ ಎರಡು ಆಯತ್‌ಗಳನ್ನು ಕಲಿಯುವುದನ್ನು ಅಥವಾ ಪಾರಾಯಣ ಮಾಡುವುದನ್ನು ಮಾಡಬಾರದೇ? ಅದು ಎರಡು ಹೆಣ್ಣು ಒಂಟೆಗಳನ್ನು ಪಡೆಯುವುದಕ್ಕಿಂತಲೂ ಉತ್ತಮವಾಗಿದೆ. ಮೂರು ಆಯತ್‌ಗಳನ್ನು ಕಲಿಯುವುದು ಅಥವಾ ಪಾರಾಯಣ ಮಾಡುವುದು ಮೂರು ಹೆಣ್ಣು ಒಂಟೆಗಳನ್ನು ಪಡೆಯುವುದಕ್ಕಿಂತಲೂ ಉತ್ತಮವಾಗಿದೆ. ನಾಲ್ಕು ಆಯತ್‌ಗಳನ್ನು ಕಲಿಯುವುದು ಅಥವಾ ಪಾರಾಯಣ ಮಾಡುವುದು ನಾಲ್ಕು ಹೆಣ್ಣು ಒಂಟೆಗಳನ್ನು ಪಡೆಯುವುದಕ್ಕಿಂತಲೂ ಉತ್ತಮವಾಗಿದೆ. ಹೀಗೆ ಎಷ್ಟು ಹೆಣ್ಣು ಒಂಟೆಗಳನ್ನು ಪಡೆಯಲು ಇಷ್ಟಪಡುತ್ತೀರೋ ಅದಕ್ಕಿಂತಲೂ ಅಷ್ಟೇ ಸಂಖ್ಯೆಯ ಆಯತ್‌ಗಳನ್ನು ಕಲಿಯುವುದು ಅಥವಾ ಪಾರಾಯಣ ಮಾಡುವುದು ಉತ್ತಮವಾಗಿದೆ.” **11**

ಪ್ರವಾದಿ(ﷺ)ರವರು ಹೇಳಿದರು:

[11] ಮುಸ್ಲಿಮ್ 1/553 ಹದೀಸ್ ಸಂಖ್ಯೆ: 803

« مَنْ قَعَدَ مَقْعَدًا لَمْ يَذْكُرِ اللَّهَ فِيهِ كَانَتْ عَلَيْهِ مِنَ اللَّهِ تِرَةٌ وَمَنِ اضْطَجَعَ مَضْجَعًا لَا يَذْكُرُ اللَّهَ فِيهِ كَانَتْ عَلَيْهِ مِنَ اللَّهِ تِرَةٌ »

“ಯಾರಾದರೂ ಕುಳಿತುಕೊಳ್ಳುವಾಗ ಅದರಲ್ಲಿ ಅಲ್ಲಾಹನನ್ನು ಸ್ಮರಿಸದಿದ್ದರೆ ಅವನ ಮೇಲೆ ಅಲ್ಲಾಹನಿಂದ ಒಂದು ನಷ್ಟವುಂಟಾಗುವುದು. ಯಾರಾದರೂ ಮಲಗುವಾಗ ಅದರಲ್ಲಿ ಅಲ್ಲಾಹನನ್ನು ಸ್ಮರಿಸದಿದ್ದರೆ ಅವನ ಮೇಲೆ ಅಲ್ಲಾಹನಿಂದ ಒಂದು ನಷ್ಟವುಂಟಾಗುವುದು.” [12]

«مَا جَلَسَ قَوْمٌ مَجْلِسًا لَمْ يَذْكُرُوا اللَّهَ فِيهِ وَلَمْ يُصَلُّوا عَلَى نَبِيِّهِمْ إِلَّا كَانَ عَلَيْهِمْ تِرَةً فَإِنْ شَاءَ عَذَّبَهُمْ وَإِنْ شَاءَ غَفَرَ لَهُمْ»

“ಒಂದು ಜನತೆಯು ಅಲ್ಲಾಹನನ್ನು ಸ್ಮರಿಸದೆ, ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳದೆ ಒಂದು ಸಭೆಯಲ್ಲಿ ಕುಳಿತುಕೊಳ್ಳಲಾರರು, ಅವರ ಮೇಲೆ ಒಂದು ನಷ್ಟವು ಉಂಟಾಗದ ಹೊರತು. ಆಗ ಅವನು (ಅಲ್ಲಾಹು) ಇಚ್ಛಿಸಿದರೆ ಅವರನ್ನು ಶಿಕ್ಷಿಸುವನು ಮತ್ತು ಅವನು ಇಚ್ಛಿಸಿದರೆ ಅವರನ್ನು ಕ್ಷಮಿಸುವನು.” [13]

ಪ್ರವಾದಿ(ﷺ)ರವರು ಹೇಳಿದರು:

---

[12] ಅಬೂ ದಾವೂದ್ 4/264 ಹದೀಸ್ ಸಂಖ್ಯೆ: 4856 ಹಾಗೂ ಮತ್ತಿತರರು. ನೋಡಿ: ಸಹೀಹುಲ್ ಜಾಮಿಅ್ 5/342.

[13] ಅತ್ತಿರ್ಮಿದೀ 5/461 ಹದೀಸ್ ಸಂಖ್ಯೆ: 3380. ನೋಡಿ: ಸಹೀಹು ತ್ತಿರ್ಮಿದೀ 3/140.

«مَا مِنْ قَوْمٍ يَقُومُونَ مِنْ مَجْلِسٍ لَا يَذْكُرُونَ اللَّهَ فِيهِ إِلَّا قَامُوا عَنْ مِثْلِ جِيفَةِ حِمَارٍ وَكَانَ لَهُمْ حَسْرَةً»

“ಒಂದು ಜನತೆಯು ಅಲ್ಲಾಹನನ್ನು ಸ್ಮರಿಸದೆ ಒಂದು ಸಭೆಯಿಂದ ಎದ್ದೇಳಲಾರದು, ಕತ್ತೆಯ ಶವದಂತಿರುವುದರ ಬಳಿಯಿಂದ ಎದ್ದೇಳುವವರಾಗಿಯೇ ಹೊರತು. ಅದು ಅವರಿಗೆ ದುಃಖಕ್ಕೆ ಹೇತುವಾಗುವುದು.” [14]

[14] ಅಬೂ ದಾವೂದ್ 4/264 ಹದೀಸ್ ಸಂಖ್ಯೆ: 4855; ಅಹ್ಮದ್ 2/389 ಹದೀಸ್ ಸಂಖ್ಯೆ: 10680. ನೋಡಿ: ಸಹೀಹುಲ್ ಜಾಮಿಅ್ 5/176.

# 1. ನಿದ್ದೆಯಿಂದ ಎದ್ದೇಳುವಾಗ ಹೇಳುವ ದಿಕ್ರ್‌ಗಳು

1- «الْحَمْدُ لِلَّهِ الَّذِي أَحْيَانَا بَعْدَ مَا أَمَاتَنَا، وَإِلَيْهِ النُّشُورُ»

1. (ಅಲ್‌ಹಮ್ದುಲಿಲ್ಲಾಹಿಲ್ಲದೀ ಅಹ್ಯಾನಾ ಬಅ್‌ದ ಮಾ ಅಮಾತನಾ, ವಇಲೈಹಿ ನ್ನುಶೂರ್)

“ಮೃತಗೊಳಿಸಿದ ಬಳಿಕ ನಮಗೆ ಜೀವವನ್ನು ನೀಡಿದ ಅಲ್ಲಾಹನಿಗೆ ಸ್ತುತಿ ಮತ್ತು ಪುನರುತ್ಥಾನವು ಅವನ ಬಳಿಗೇ ಆಗಿದೆ.”[15]

2- «لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ، سُبْحَانَ اللَّهِ، وَالْحَمْدُ لِلَّهِ، وَلَا إِلَهَ إِلَّا اللَّهُ، وَاللَّهُ أَكْبَرُ، وَلَا حَوْلَ وَلَا قُوَّةَ إِلَّا بِاللَّهِ الْعَلِيِّ الْعَظِيمِ، رَبِّ اغْفِرْ لِي»

2. (ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು, ವಹುವ ಅಲಾ ಕುಲ್ಲಿ ಶೈಇನ್ ಕದೀರ್, ಸುಬ್‌ಹಾನಲ್ಲಾಹಿ, ವಲ್‌ಹಮ್ದುಲಿಲ್ಲಾಹಿ, ವಲಾಇಲಾಹ ಇಲ್ಲಲ್ಲಾಹು, ವಲ್ಲಾಹು ಅಕ್ಬರ್, ವಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹಿಲ್ ಅಲಿಯ್ಯಿಲ್ ಅಝೀಮ್, ರಬ್ಬಿಗ್‌ಫಿರ್ ಲೀ)

[15] ಅಲ್‌ಬುಖಾರೀ (ಫತ್‌ಹುಲ್ ಬಾರಿ) 11/113 ಹದೀಸ್ ಸಂಖ್ಯೆ: 6312; ಮುಸ್ಲಿಮ್ 4/2083 ಹದೀಸ್ ಸಂಖ್ಯೆ: 2711.

"ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನು ಮತ್ತು ಅವನಿಗೆ ಯಾವುದೇ ಸಹಭಾಗಿಯಿಲ್ಲ, ಆಧಿಪತ್ಯವು ಅವನದ್ದು ಮತ್ತು ಸರ್ವಸ್ತುತಿಯು ಅವನಿಗೆ, ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು. ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ, ಅಲ್ಲಾಹನಿಗೆ ಸ್ತುತಿ, ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅಲ್ಲಾಹು ಮಹಾನನು, ಅಲ್ಲಾಹನ ಹೊರತು ಶಕ್ತಿಯಾಗಲಿ ಸಾಮರ್ಥ್ಯವಾಗಲಿ ಇಲ್ಲ, ಅವನು ಅತ್ಯುನ್ನತನೂ, ಮಹೋನ್ನತನೂ ಆಗಿದ್ದಾನೆ, ಓ ರಬ್ಬೇ! ನನಗೆ ಕ್ಷಮೆ ನೀಡು." [16]

## 3– «الْحَمْدُ لِلَّهِ الَّذِي عَافَانِي فِي جَسَدِي، وَرَدَّ عَلَيَّ رُوحِي، وَأَذِنَ لِي بِذِكْرِهِ»

3. (ಅಲ್‌ಹಮ್ದುಲಿಲ್ಲಾಹಿಲ್ಲದೀ ಆಫಾನೀ ಫೀ ಜಸದೀ, ವರದ್ದ ಅಲಯ್ಯ ರೂಹೀ, ವಅದಿನ ಲೀ ಬಿದಿಕ್ರಿಹೀ)

"ನನ್ನ ದೇಹದಲ್ಲಿ ನನಗೆ ಸೌಖ್ಯವನ್ನು ನೀಡಿದ, ನನ್ನ ಆತ್ಮವನ್ನು ನನಗೆ ಮರಳಿಸಿಕೊಟ್ಟ, ತನ್ನ ಸ್ಮರಣೆಗಾಗಿ ನನಗೆ ಅನುಮತಿ ನೀಡಿದ ಅಲ್ಲಾಹನಿಗೆ ಸರ್ವಸ್ತುತಿ." [17]

---

[16] ಯಾರು ಇದನ್ನು ಹೇಳುತ್ತಾನೋ ಅವನಿಗೆ ಪಾಪಮುಕ್ತಿ ನೀಡಲಾಗುವುದು, ಯಾರು ಇದರ ನಂತರ ಪ್ರಾರ್ಥಿಸುತ್ತಾನೋ ಅವನಿಗೆ ಉತ್ತರ ನೀಡಲಾಗುವುದು ಮತ್ತು ಯಾರು ಇದರ ನಂತರ ವುದೂ ಮಾಡಿ ನಮಾಝ್ ನಿರ್ವಹಿಸುತ್ತಾನೋ ಅವನ ನಮಾಝ್ ಸ್ವೀಕರಿಸಲ್ಪಡುವುದು. ಅಲ್‌ಬುಖಾರೀ (ಫತ್‌ಹುಲ್ ಬಾರಿ) 3/39 ಹದೀಸ್ ಸಂಖ್ಯೆ: 1154 ಹಾಗೂ ಮತ್ತಿತರರು. ಇದು ಇಬ್ನ್ ಮಾಜರವರ ಪದಗಳಾಗಿವೆ. ನೋಡಿ: ಸಹೀಹ್ ಇಬ್ನ್ ಮಾಜ 2/335.

[17] ಅತ್ತಿರ್ಮಿದೀ 5/473 ಹದೀಸ್ ಸಂಖ್ಯೆ 3401. ನೋಡಿ: ಸಹೀಹು ತ್ತಿರ್ಮಿದೀ 3/144

4- ﴿إِنَّ فِي خَلۡقِ ٱلسَّمَٰوَٰتِ وَٱلۡأَرۡضِ وَٱخۡتِلَٰفِ ٱلَّيۡلِ وَٱلنَّهَارِ
لَأٓيَٰتٖ لِّأُوْلِي ٱلۡأَلۡبَٰبِ ١٩٠ ٱلَّذِينَ يَذۡكُرُونَ ٱللَّهَ قِيَٰمٗا وَقُعُودٗا وَعَلَىٰ
جُنُوبِهِمۡ وَيَتَفَكَّرُونَ فِي خَلۡقِ ٱلسَّمَٰوَٰتِ وَٱلۡأَرۡضِ رَبَّنَا مَا خَلَقۡتَ هَٰذَا
بَٰطِلٗا سُبۡحَٰنَكَ فَقِنَا عَذَابَ ٱلنَّارِ ١٩١ رَبَّنَآ إِنَّكَ مَن تُدۡخِلِ ٱلنَّارَ فَقَدۡ
أَخۡزَيۡتَهُۥۖ وَمَا لِلظَّٰلِمِينَ مِنۡ أَنصَارٖ ١٩٢ رَّبَّنَآ إِنَّنَا سَمِعۡنَا مُنَادِيٗا يُنَادِي
لِلۡإِيمَٰنِ أَنۡ ءَامِنُواْ بِرَبِّكُمۡ فَـَٔامَنَّاۚ رَبَّنَا فَٱغۡفِرۡ لَنَا ذُنُوبَنَا وَكَفِّرۡ عَنَّا
سَيِّـَٔاتِنَا وَتَوَفَّنَا مَعَ ٱلۡأَبۡرَارِ ١٩٣ رَبَّنَا وَءَاتِنَا مَا وَعَدتَّنَا عَلَىٰ رُسُلِكَ وَلَا
تُخۡزِنَا يَوۡمَ ٱلۡقِيَٰمَةِۖ إِنَّكَ لَا تُخۡلِفُ ٱلۡمِيعَادَ ١٩٤ فَٱسۡتَجَابَ لَهُمۡ رَبُّهُمۡ أَنِّي
لَآ أُضِيعُ عَمَلَ عَٰمِلٖ مِّنكُم مِّن ذَكَرٍ أَوۡ أُنثَىٰۖ بَعۡضُكُم مِّنۢ بَعۡضٖۖ
فَٱلَّذِينَ هَاجَرُواْ وَأُخۡرِجُواْ مِن دِيَٰرِهِمۡ وَأُوذُواْ فِي سَبِيلِي وَقَٰتَلُواْ وَقُتِلُواْ
لَأُكَفِّرَنَّ عَنۡهُمۡ سَيِّـَٔاتِهِمۡ وَلَأُدۡخِلَنَّهُمۡ جَنَّٰتٖ تَجۡرِي مِن تَحۡتِهَا ٱلۡأَنۡهَٰرُ
ثَوَابٗا مِّنۡ عِندِ ٱللَّهِۚ وَٱللَّهُ عِندَهُۥ حُسۡنُ ٱلثَّوَابِ ١٩٥ لَا يَغُرَّنَّكَ تَقَلُّبُ
ٱلَّذِينَ كَفَرُواْ فِي ٱلۡبِلَٰدِ ١٩٦ مَتَٰعٞ قَلِيلٞ ثُمَّ مَأۡوَىٰهُمۡ جَهَنَّمُۖ وَبِئۡسَ
ٱلۡمِهَادُ ١٩٧ لَٰكِنِ ٱلَّذِينَ ٱتَّقَوۡاْ رَبَّهُمۡ لَهُمۡ جَنَّٰتٞ تَجۡرِي مِن تَحۡتِهَا ٱلۡأَنۡهَٰرُ
خَٰلِدِينَ فِيهَا نُزُلٗا مِّنۡ عِندِ ٱللَّهِۗ وَمَا عِندَ ٱللَّهِ خَيۡرٞ لِّلۡأَبۡرَارِ ١٩٨ وَإِنَّ
مِنۡ أَهۡلِ ٱلۡكِتَٰبِ لَمَن يُؤۡمِنُ بِٱللَّهِ وَمَآ أُنزِلَ إِلَيۡكُمۡ وَمَآ أُنزِلَ إِلَيۡهِمۡ
خَٰشِعِينَ لِلَّهِ لَا يَشۡتَرُونَ بِـَٔايَٰتِ ٱللَّهِ ثَمَنٗا قَلِيلًاۗ أُوْلَٰٓئِكَ لَهُمۡ أَجۡرُهُمۡ

عِندَ رَبِّهِمۡۗ إِنَّ ٱللَّهَ سَرِيعُ ٱلۡحِسَابِ ﴿١٩٩﴾ يَـٰٓأَيُّهَا ٱلَّذِينَ ءَامَنُواْ ٱصۡبِرُواْ وَصَابِرُواْ وَرَابِطُواْ وَٱتَّقُواْ ٱللَّهَ لَعَلَّكُمۡ تُفۡلِحُونَ ﴿٢٠٠﴾ ﴾ [الأعراف: 205] .

4. "ಖಂಡಿತವಾಗಿಯೂ ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲಿ, ರಾತ್ರಿ ಮತ್ತು ಹಗಲಿನ ಬದಲಾವಣೆಯಲ್ಲಿ ಬುದ್ಧಿವಂತ ಜನರಿಗೆ ದೃಷ್ಟಾಂತಗಳಿವೆ. ಅಂದರೆ ನಿಂತು, ಕುಳಿತು ಮತ್ತು ಪಾರ್ಶ್ವಕ್ಕೆ ಮಲಗಿ ಅಲ್ಲಾಹನನ್ನು ಸ್ಮರಿಸುವವರು ಮತ್ತು ಆಕಾಶಗಳ ಹಾಗೂ ಭೂಮಿಯ ಸೃಷ್ಟಿಯ ಬಗ್ಗೆ ಚಿಂತಿಸುವವರು. (ಅವರು ಹೇಳುವರು): ಓ ನಮ್ಮ ರಬ್ಬೇ, ನೀನು ಇದನ್ನು ಮಿಥ್ಯವಾಗಿ ಸೃಷ್ಟಿಸಿಲ್ಲ; ನೀನು ಪರಮಪಾವನನು! ಆದ್ದರಿಂದ ನರಕ ಶಿಕ್ಷೆಯಿಂದ ನಮ್ಮನ್ನು ರಕ್ಷಿಸು. ಓ ನಮ್ಮ ರಬ್ಬೇ, ನೀನು ಯಾರನ್ನಾದರೂ ನರಕಕ್ಕೆ ಪ್ರವೇಶ ಮಾಡಿಸಿದರೆ, ಖಂಡಿತವಾಗಿಯೂ ನೀನು ಅವನನ್ನು ಅಪಮಾನಗೊಳಿಸಿರುವೆ. ಅಕ್ರಮಿಗಳಿಗೆ ಯಾವುದೇ ಸಹಾಯಕರು ಇರಲಾರರು. ಓ ನಮ್ಮ ರಬ್ಬೇ, ನಿಮ್ಮ ರಬ್ಬ್‌ನಲ್ಲಿ ವಿಶ್ವಾಸವಿಡಿರಿ ಎನ್ನುತ್ತಾ ವಿಶ್ವಾಸದೆಡೆಗೆ ಕರೆ ನೀಡುವ ಒಬ್ಬ ಕರೆಗಾರನನ್ನು ನಾವು ಆಲಿಸಿದ್ದೇವೆ. ಆದ್ದರಿಂದ ನಾವು ವಿಶ್ವಾಸವಿಟ್ಟಿದ್ದೇವೆ. ಆದ್ದರಿಂದ ನಮಗೆ ನಮ್ಮ ಪಾಪಗಳನ್ನು ಕ್ಷಮಿಸು ಮತ್ತು ನಮ್ಮ ಕೆಡುಕುಗಳನ್ನು ಅಳಿಸು ಮತ್ತು ಸಜ್ಜನರೊಂದಿಗೆ ನಮ್ಮನ್ನು ಮೃತಪಡಿಸು. ಓ ನಮ್ಮ ರಬ್ಬೇ, ನಿನ್ನ ರಸೂಲ್‌ಗಳ ಮೂಲಕ ನೀನು ನಮಗೆ ವಾಗ್ದಾನ ಮಾಡಿರುವುದನ್ನು ನಮಗೆ ನೀಡು. ಪುನರುತ್ಥಾನ ದಿನದಂದು ನಮ್ಮನ್ನು ಅಪಮಾನಗೊಳಿಸದಿರು. ಖಂಡಿತವಾಗಿಯೂ ನೀನು ವಾಗ್ದಾನಗಳನ್ನು ಉಲ್ಲಂಘಿಸುವುದಿಲ್ಲ. ಆಗ ಅವರ ರಬ್ಬ್ ಅವರಿಗೆ ಉತ್ತರಿಸಿದನು: 'ಪುರುಷನಾಗಿರಲಿ ಸ್ತ್ರೀಯಾಗಿರಲಿ ನಿಮ್ಮ ಪೈಕಿ ಕರ್ಮವೆಸಗುವ ಯಾರ ಕರ್ಮವನ್ನೂ ನಾನು ನಿಷ್ಫಲಗೊಳಿಸಲಾರೆನು. ನಿಮ್ಮಲ್ಲಿ ಪ್ರತಿಯೊಬ್ಬರೂ ಇನ್ನೊಬ್ಬರಿಂದ ಉದ್ಭವಿಸಿದವರಾಗಿರುವಿರಿ. ಆದ್ದರಿಂದ ತಮ್ಮ ಊರನ್ನು ತೊರೆದವರು, ಸ್ವಂತ ಮನೆಗಳಿಂದ

ಹೊರದಬ್ಬಲಾದವರು, ನನ್ನ ಮಾರ್ಗದಲ್ಲಿ ಹಿಂಸೆಗೊಳಗಾದವರು, ಯುದ್ಧ ಮಾಡಿದವರು ಮತ್ತು ಹತರಾದವರು ಯಾರೋ ಅವರ ಪಾಪಗಳನ್ನು ನಾನು ಅಳಿಸುವೆನು ಮತ್ತು ತಳಭಾಗದಿಂದ ನದಿಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಲ್ಲಿ ಅವರನ್ನು ಪ್ರವೇಶ ಮಾಡಿಸುವೆನು. ಇದು ಅಲ್ಲಾಹನ ವತಿಯ ಪ್ರತಿಫಲವಾಗಿದೆ. ಅಲ್ಲಾಹನ ಬಳಿ ಅತ್ಯುತ್ತಮವಾದ ಪ್ರತಿಫಲವಿದೆ. ನಾಡುಗಳಲ್ಲಿ ಸತ್ಯನಿಷೇಧಿಗಳ ಸ್ವಚ್ಛಂದ ವಿಹಾರವು ತಮ್ಮನ್ನು ವಂಚಿಸದಿರಲಿ. ಅದು ಕ್ಷಣಿಕವಾದ ಒಂದು ಸುಖಾನುಭೂತಿಯಾಗಿದೆ. ತರುವಾಯ ಅವರಿಗಿರುವ ವಾಸಸ್ಥಳವು ನರಕಾಗ್ನಿಯಾಗಿದೆ. ಆ ವಾಸಸ್ಥಳ ಎಷ್ಟು ನಿಕೃಷ್ಟವಾದುದು! ಆದರೆ ತಮ್ಮ ರಬ್ಬನ್ನು ಭಯಪಟ್ಟು ಜೀವಿಸಿದವರು ಯಾರೋ ಅವರಿಗೆ ತಳಭಾಗದಿಂದ ನದಿಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಿವೆ. ಅವರು ಅದರಲ್ಲಿ ಶಾಶ್ವತವಾಗಿ ವಾಸಿಸುವರು. ಅದು ಅಲ್ಲಾಹನ ವತಿಯ ಸತ್ಕಾರವಾಗಿದೆ. ಸಜ್ಜನರಿಗೆ ಅಲ್ಲಾಹನ ಬಳಿಯಿರುವುದೇ ಅತ್ಯುತ್ತಮವಾಗಿದೆ. ಖಂಡಿತವಾಗಿಯೂ ಗ್ರಂಥದವರ ಪೈಕಿ ಅಲ್ಲಾಹನಲ್ಲಿಯೂ, ನಿಮಗೆ ಅವತೀರ್ಣಗೊಂಡಿರುವುದರಲ್ಲಿಯೂ ಅವರಿಗೆ ಅವತೀರ್ಣಗೊಂಡಿರುವುದರಲ್ಲಿಯೂ ವಿಶ್ವಾಸವಿಡುವವರಿರು ವರು. (ಅವರು) ಅಲ್ಲಾಹನೊಂದಿಗೆ ವಿನಮ್ರತೆಯುಳ್ಳವರೂ, ಅಲ್ಲಾಹನ ವಚನಗಳನ್ನು ಮಾರಿ ತುಚ್ಛವಾದ ಬೆಲೆಯನ್ನು ಪಡೆಯದವರೂ ಆಗಿರುವರು. ಅಂತಹವರಿಗೆ ಅವರ ರಬ್ಬಿನ ಬಳಿ ಅರ್ಹ ಪ್ರತಿಫಲವಿದೆ. ಖಂಡಿತವಾಗಿಯೂ ಅಲ್ಲಾಹು ಅತಿಶೀಘ್ರವಾಗಿ ವಿಚಾರಣೆ ಮಾಡುವವನಾಗಿರುವನು. ಓ ಸತ್ಯವಿಶ್ವಾಸಿಗಳೇ! ತಾಳ್ಮೆ ವಹಿಸಿರಿ, ಸ್ಥೈರ್ಯವಂತರಾಗಿರಿ ಮತ್ತು ಪ್ರತಿರೋಧ ಸನ್ನದ್ಧರಾಗಿರಿ. ಅಲ್ಲಾಹನನ್ನು ಭಯಪಟ್ಟು ಜೀವಿಸಿರಿ. ನೀವು ಯಶಸ್ವಿಯಾಗಲೂ ಬಹುದು.” [18]

[18] ಕುರ್‌ಆನ್ 3:190–200; ಅಲ್‌ಬುಖಾರಿ (ನೋಡಿ: ಫತ್‌ಹುಲ್ ಬಾರಿ 8/237), ಮುಸ್ಲಿಮ್ 1/530

## 2. ಉಡುಪು ಧರಿಸುವಾಗ ಹೇಳುವುದು

**5- «الْحَمْدُ لِلَّهِ الَّذِي كَسَانِي هَذَا الثَّوْبَ وَرَزَقَنِيهِ مِنْ غَيْرِ حَوْلٍ مِنِّي وَلَا قُوَّةٍ»**

5. (ಅಲ್‌ಹಮ್ದುಲಿಲ್ಲಾಹಿಲ್ಲದೀ ಕಸಾನೀ ಹಾದ ಸ್ಸೌಬ ವರಝಕನೀಹಿ ಮಿನ್ ಗೈರಿ ಹೌಲಿನ್ ಮಿನ್ನೀ ವಲಾ ಕುವ್ವಃ)

"ಸ್ವಶಕ್ತಿಯಾಗಲಿ, ಸ್ವಸಾಮರ್ಥ್ಯವಾಗಲಿ ಇಲ್ಲದ ನನಗೆ ಈ ಉಡುಪನ್ನು ಉಡಿಸಿದ ಮತ್ತು ಇದನ್ನು ನನಗೆ ಒದಗಿಸಿದ ಅಲ್ಲಾಹನಿಗೆ ಸರ್ವಸ್ತುತಿ." [19]

## 3. ಹೊಸ ಉಡುಪು ಧರಿಸುವಾಗ

**6- «اللَّهُمَّ لَكَ الْحَمْدُ أَنْتَ كَسَوْتَنِيهِ، أَسْأَلُكَ مِنْ خَيْرِهِ وَخَيْرِ مَا صُنِعَ لَهُ، وَأَعُوذُ بِكَ مِنْ شَرِّهِ وَشَرِّ مَا صُنِعَ لَهُ»**

6. (ಅಲ್ಲಾಹುಮ್ಮ ಲಕಲ್ ಹಮ್ದು ಅನ್ತ ಕಸೌತನೀಹಿ, ಅಸ್‌ಅಲುಕ ಮಿನ್ ಖೈರಿಹೀ ವಖೈರಿ ಮಾ ಸುನಿಅ ಲಹೂ, ವಅಊದು ಬಿಕ ಮಿನ್ ಶರ್ರಿಹೀ ವಶರ್ರಿ ಮಾ ಸುನಿಅ ಲಹೂ)

"ಓ ಅಲ್ಲಾಹ್! ನಿನಗೆ ಸ್ತುತಿ, ಈ ಉಡುಪನ್ನು ನೀನು ನನಗೆ ಉಡಿಸಿರುವೆ, ಇದರ ಒಳಿತನ್ನು ಮತ್ತು ಇದು ನಿರ್ಮಿಸಲ್ಪಟ್ಟುದರ

[19] ಅಬೂ ದಾವೂದ್, ಅತ್ತಿರ್ಮಿದಿ, ಇಬ್ನ್ ಮಾಜ. ನೋಡಿ: ಇರ್ವಾಉಲ್ ಗಲೀಲ್ 7/47

ಒಳಿತನ್ನು ನಾನು ನಿನ್ನೊಂದಿಗೆ ಬೇಡುತ್ತೇನೆ, ಮತ್ತು ಇದರ ಕೆಡುಕಿನಿಂದ ಮತ್ತು ಇದು ನಿರ್ಮಿಸಲ್ಪಟ್ಟುದರ ಕೆಡುಕಿನಿಂದ ನಾನು ನಿನ್ನೊಂದಿಗೆ ರಕ್ಷೆ ಬೇಡುತ್ತೇನೆ.” [20]

## 4. ಇತರರು ಹೊಸ ಉಡುಪು ಧರಿಸಿರುವುದನ್ನು ಕಂಡಾಗ

**7– «تُبْلِي وَيُخْلِفُ اللَّهُ تَعَالَى»**

7. (ತುಬ್ಲೀ ವಯುಖ್ಲಿಫುಲ್ಲಾಹು ತಆಲಾ)

“ಧರಿಸು ಮತ್ತು ಅಲ್ಲಾಹು ನಿನಗೆ ಇದರ ನಂತರ (ಬೇರೊಂದನ್ನು) ನೀಡುವನು.” [21]

**8– «الْبَسْ جَدِيدًا، وَعِشْ حَمِيدًا، وَمُتْ شَهِيدًا»**

8. (ಇಲ್ಬಸ್ ಜದೀದನ್, ವಇಶ್ ಹಮೀದನ್, ವಮುತ್ ಶಹೀದನ್)

“ಹೊಸದನ್ನು ಧರಿಸು, ಸ್ತುತ್ಯರ್ಹನಾಗಿ ಜೀವಿಸು ಮತ್ತು ಹುತಾತ್ಮನಾಗಿ ಮೃತನಾಗು.” [22]

## 5. ಉಡುಪನ್ನು ಕಳಚುವಾಗ

[20] ಅಬೂ ದಾವೂದ್, ಅತ್ತಿರ್ಮಿದಿ, ಅಲ್‌ಬಗವೀ. ನೋಡಿ: ಮುಖ್ತಸರು ಶಮಾಇಲಿ ತ್ತಿರ್ಮಿದಿ ಪುಟ 47.

[21] ಅಬೂ ದಾವೂದ್ 4/41, ನೋಡಿ: ಸಹೀಹ್ ಅಬೀ ದಾವೂದ್ 2/760

[22] ಇಬ್ನ್ ಮಾಜ 2/1178, ಅಲ್‌ಬಗವೀ 12/41. ನೋಡಿ: ಸಹೀಹ್ ಇಬ್ನ್ ಮಾಜ 2/275

9- «بِسْمِ اللَّهِ»

9. (ಬಿಸ್ಮಿಲ್ಲಾಹ್)

“ಅಲ್ಲಾಹನ ನಾಮದಿಂದ” [23]

## 6. ಮಲಮೂತ್ರ ವಿಸರ್ಜನಾ ಸ್ಥಳವನ್ನು ಪ್ರವೇಶಿಸುವಾಗ

10- «[بِسْمِ اللَّهِ] اللَّهُمَّ إِنِّي أَعُوذُ بِكَ مِنَ الْخُبُثِ وَالْخَبَائِثِ»

10. (ಬಿಸ್ಮಿಲ್ಲಾಹಿ, ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಖುಬುಸಿ ವಲ್ ಖಬಾಇಸ್)

“ಅಲ್ಲಾಹನ ನಾಮದಿಂದ, ಓ ಅಲ್ಲಾಹ್! ನಾನು ಗಂಡು ಶೈತಾನರಿಂದ ಮತ್ತು ಹೆಣ್ಣು ಶೈತಾನರಿಂದ ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ.” [24]

## 7. ಮಲಮೂತ್ರ ವಿಸರ್ಜನಾ ಸ್ಥಳದಿಂದ ಹೊರಬರುವಾಗ

---

[23] ಅತ್ತಿರ್ಮಿದಿ 2/505 ಮತ್ತಿತರರು. ನೋಡಿ: ಅಲ್ಇರ್ವಾಅ್ 50 ಮತ್ತು ಸಹೀಹುಲ್ ಜಾಮಿಅ್ 3/203

[24] ಅಲ್‌ಬುಖಾರಿ 1/45, ಮುಸ್ಲಿಮ್ 1/283. ಬಿಸ್ಮಿಲ್ಲಾಹಿ ಎಂಬ ಹೆಚ್ಚುವರಿಯನ್ನು ಸಈದ್ ಇಬ್ನ್ ಮನ್ಸೂರ್ ವರದಿ ಮಾಡಿದ್ದಾರೆ. ನೋಡಿ: ಫತ್‌ಹುಲ್ ಬಾರಿ 1/244

**11- «غُفْرَانَكَ»**

11. (ಗುಫ್ರಾನಕ್)

"(ಓ ಅಲ್ಲಾಹ್) ನಿನ್ನೊಂದಿಗೆ ಕ್ಷಮೆಯನ್ನು ಬೇಡುತ್ತಿದ್ದೇನೆ" [25]

# 8. ವುದೂ ಮಾಡಲು ಪ್ರಾರಂಭಿಸುವಾಗ

**12- «بِسْمِ اللَّهِ»**

12. (ಬಿಸ್ಮಿಲ್ಲಾಹ್)

"ಅಲ್ಲಾಹನ ನಾಮದಿಂದ" [26]

# 9. ವುದೂ ಪೂರ್ತೀಕರಿಸಿದ ನಂತರ

**13- «أَشْهَدُ أَنْ لَا إِلَهُ إِلَّا اللَّهُ وَحْدَهُ لَا شَرِيكَ لَهُ، وَأَشْهَدُ أَنَّ مُحَمَّدًا عَبْدُهُ وَرَسُولُهُ»**

13. (ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ವಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹೂ)

[25] ಅಬೂದಾವೂದ್, ಅತ್ತಿರ್ಮಿದಿ, ಇಬ್ನ್ ಮಾಜ. ಅನ್ನಸಾಈ ಅಮಲುಲ್ ಯೌಮಿ ವಲ್ಲೈಲಃದಲ್ಲಿ. ನೋಡಿ: ಝಾದುಲ್ ಮಆದ್ 2/387

[26] ಅಬೂ ದಾವೂದ್, ಇಬ್ನ್ ಮಾಜ, ಅಹ್ಮದ್. ನೋಡಿ: ಇರ್ವಾಉಲ್ ಗಲೀಲ್ 1/122

“ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲವೆಂದೂ ಅವನು ಏಕೈಕನೂ ಸಹಭಾಗಿರಹಿತನೂ ಆಗಿದ್ದಾನೆಂದೂ ನಾನು ಸಾಕ್ಷ್ಯವಹಿಸುತ್ತೇನೆ. ಮುಹಮ್ಮದ್ ಅವನ ದಾಸರೂ ಸಂದೇಶವಾಹಕರೂ ಆಗಿದ್ದಾರೆಂದೂ ನಾನು ಸಾಕ್ಷ್ಯವಹಿಸುತ್ತೇನೆ.” [27]

**14- «اللَّهُمَّ اجْعَلْنِي مِنَ التَّوَّابِينَ، وَاجْعَلْنِي مِنَ الْمُتَطَهِّرِينَ»**

14. (ಅಲ್ಲಾಹುಮ್ಮಜ್‌ಅಲ್‌ನೀ ಮಿನ ತ್ತವ್ವಾಬೀನ ವಜ್‌ಅಲ್‌ನೀ ಮಿನಲ್ ಮುತತಹ್ಹಿರೀನ್)

“ಓ ಅಲ್ಲಾಹ್! ನಿರಂತರವಾಗಿ ಕ್ಷಮೆಯಾಚಿಸುವವರೊಡನೆ ನನ್ನನ್ನು ಸೇರಿಸು ಮತ್ತು ಸದಾ ಶುಚಿಯಾಗಿರುವವರೊಡನೆ ನನ್ನನ್ನು ಸೇರಿಸು.” [28]

**15- «سُبْحَانَكَ اللَّهُمَّ وَبِحَمْدِكَ أَشْهَدُ أَنْ لَا إِلَهَ إِلَّا أَنْتَ أَسْتَغْفِرُكَ وَأَتُوبُ إِلَيْكَ»**

15. (ಸುಬ್‌ಹಾನಕಲ್ಲಾಹುಮ್ಮ ವಬಿಹಮ್ದಿಕ ಅಶ್‌ಹದು ಅನ್ ಲಾ ಇಲಾಹ ಇಲ್ಲಾ ಅನ್ತ ಅಸ್ತಗ್ಫಿರುಕ ವಅತೂಬು ಇಲೈಕ್)

“ನಿನ್ನ ಪರಿಪಾವನತೆಯನ್ನು ನಾನು ಕೊಂಡಾಡುತ್ತೇನೆ. ಓ ಅಲ್ಲಾಹ್! ನಿನ್ನ ಸ್ತುತಿಯೊಂದಿಗೆ, ನಿನ್ನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ. ನಾನು ನಿನ್ನೊಂದಿಗೆ

27 ಮುಸ್ಲಿಮ್ 1/209

28 ಅತ್ತಿರ್ಮಿದಿ 1/78. ನೋಡಿ: ಸಹೀಹು ತ್ತಿರ್ಮಿದಿ 1/18

ಕ್ಷಮೆಯನ್ನು ಬೇಡುತ್ತೇನೆ ಮತ್ತು ಪಶ್ಚಾತ್ತಾಪದೊಂದಿಗೆ ನಿನ್ನೆಡೆಗೆ ಮರಳುತ್ತೇನೆ." [29]

## 10. ಮನೆಯಿಂದ ಹೊರಡುವಾಗ

16– «بِسْمِ اللَّهِ تَوَكَّلْتُ عَلَى اللَّهِ، لَا حَوْلَ وَلَا قُوَّةَ إِلَّا بِاللَّهِ»

16. (ಬಿಸ್ಮಿಲ್ಲಾಹಿ ತವಕ್ಕಲ್ತು ಅಲಲ್ಲಾಹಿ, ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್)

"ಅಲ್ಲಾಹನ ನಾಮದೊಂದಿಗೆ, ನಾನು ಅಲ್ಲಾಹನ ಮೇಲೆ ಭರವಸೆಯನ್ನಿಟ್ಟಿರುವೆನು, ಅಲ್ಲಾಹನ ಹೊರತು ಶಕ್ತಿಯಾಗಲಿ, ಸಾಮರ್ಥ್ಯವಾಗಲಿ ಇಲ್ಲ." [30]

17– «اللَّهُمَّ إِنِّي أَعُوذُ بِكَ أَنْ أَضِلَّ أَوْ أُضَلَّ، أَوْ أَزِلَّ أَوْ أُزَلَّ، أَوْ أَظْلِمَ أَوْ أُظْلَمَ، أَوْ أَجْهَلَ أَوْ يُجْهَلَ عَلَيَّ»

17. (ಅಲ್ಲಾಹುಮ್ಮ ಇನ್ನೀ ಅಊದು ಬಿಕ ಅನ್ ಅದಿಲ್ಲ ಅವ್ ಉದಲ್ಲ, ಅವ್ ಅಝಿಲ್ಲ ಅವ್ ಉಝಲ್ಲ, ಅವ್ ಅದ್ಲಿಮ ಅವ್ ಉದ್ಲಮ, ಅವ್ ಅಜ್‌ಹಲ ಅವ್ ಯುಜ್‌ಹಲ ಅಲಯ್ಯ)

"ಓ ಅಲ್ಲಾಹ್! ನಾನು ದಾರಿಗೆಡುವುದರಿಂದ ಮತ್ತು ಇತರರು ನನ್ನನ್ನು ದಾರಿಗೆಡಿಸುವುದರಿಂದ, ನಾನು ಪಥಭ್ರಷ್ಟನಾಗುವುದರಿಂದ

[29] ಅನ್ನಸಾಈ ಅಮಲುಲ್ ಯೌಮಿ ವಲ್ಲೈಲಃದಲ್ಲಿ ಪುಟ 173, ನೋಡಿ: ಇರ್ವಾಉಲ್ ಗಲೀಲ್ 1/135, 2/94.

[30] ಅಬೂ ದಾವೂದ್ 4/325, ಅತ್ತಿರ್ಮಿದಿ 5/490. ನೋಡಿ: ಸಹೀಹು ತ್ತಿರ್ಮಿದಿ 3/151.

ಮತ್ತು ಇತರರು ನನ್ನನ್ನು ಪಥಭ್ರಷ್ಟಗೊಳಿಸುವುದರಿಂದ, ನಾನು ಅನ್ಯಾಯವೆಸಗುವುದರಿಂದ ಮತ್ತು ಇತರರಿಂದ ಅನ್ಯಾಯಕ್ಕೊಳಗಾಗುವುದರಿಂದ, ನಾನು ಮೂರ್ಖನಂತೆ ವರ್ತಿಸುವುದರಿಂದ ಮತ್ತು ಇತರರು ನನ್ನನ್ನು ಮೂರ್ಖನಂತೆ ನಡೆಸಿಕೊಳ್ಳುವುದರಿಂದ ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ.” [31]

## 11. ಮನೆಯನ್ನು ಪ್ರವೇಶಿಸುವಾಗ

**18– «بِسْمِ اللَّهِ وَلَجْنَا، وَبِسْمِ اللَّهِ خَرَجْنَا، وَعَلَى اللَّهِ رَبِّنَا تَوَكَّلْنَا»**

18. (ಬಿಸ್ಮಿಲ್ಲಾಹಿ ವಲಜ್‍ನಾ, ವಬಿಸ್ಮಿಲ್ಲಾಹಿ ಖರಜ್‍ನಾ, ವಅಲಲ್ಲಾಹಿ ರಬ್ಬಿನಾ ತವಕ್ಕಲ್‍ನಾ)

“ಅಲ್ಲಾಹನ ನಾಮದೊಂದಿಗೆ ನಾವು (ಈ ಮನೆಯನ್ನು) ಪ್ರವೇಶಿಸಿದ್ದೇವೆ ಮತ್ತು ಅಲ್ಲಾಹನ ನಾಮದೊಂದಿಗೆ ನಾವು (ಇದರಿಂದ) ಹೊರಟಿದ್ದೇವೆ. ಮತ್ತು ನಮ್ಮ ರಬ್ಬ್ ಆದ ಅಲ್ಲಾಹನ ಮೇಲೆ ನಾವು ಭರವಸೆಯನ್ನಿಟ್ಟಿದ್ದೇವೆ.” [32]

## 12. ಮಸೀದಿಯೆಡೆಗೆ ಹೊರಡುವಾಗ

[31] ಅಬೂ ದಾವೂದ್, ಅತ್ತಿರ್ಮಿದಿ, ಇಬ್ನ್ ಮಾಜ ಮತ್ತು ಅನ್ನಸಾಈ. ನೋಡಿ: ಸಹೀಹು ತ್ತಿರ್ಮಿದಿ 3/152 ಮತ್ತು ಸಹೀಹ್ ಇಬ್ನ್ ಮಾಜ 2/336.

[32] ಅಬೂ ದಾವೂದ್ 4/325, ಅಲ್ಲಾಮಾ ಇಬ್ನ್ ಬಾಝ್ ಇದನ್ನು ಸನದನ್ನು ಸಹೀಹ್ ಎಂದಿದ್ದಾರೆ (ತುಹ್ಫತುಲ್ ಅಖ್ಬಾರ್ ಪುಟ 28). [ಶೈಖ್ ಅಲ್‍ಅಲ್ಬಾನೀ ಇದರ ಸನದನ್ನು ಮುನ್ಕತಿಅ್ ಎಂದಿದ್ದಾರೆ. (ನೋಡಿ: ಅದ್ದಈಫ 5606) – ಪರಿಶೀಲಕ]

19– « اللَّهُمَّ اجْعَلْ فِي قَلْبِي نُورًا، وَفِي لِسَانِي نُورًا، وَفِي سَمْعِي نُورًا، وَ فِي بَصَرِي نُورًا، وَمِنْ فَوْقِي نُورًا، وَمِنْ تَحْتِي نُورًا، وَعَنْ يَمِينِي نُورًا، وَعَنْ شِمَالِي نُورًا، وَمِنْ أَمَامِي نُورًا، وَمِنْ خَلْفِي نُورًا، وَاجْعَلْ فِي نَفْسِي نُورًا، وَأَعْظِمْ لِي نُورًا ، وَعَظِّمْ لِي نُورًا ، وَاجْعَلْ لِي نُورًا، وَاجْعَلْنِي نُورًا، اللَّهُمَّ أَعْطِنِي نُورًا، وَاجْعَلْ فِي عَصَبِي نُورًا، وَفِي لَحْمِي نُورًا، وَفِي دَمِي نُورًا، وَفِي شَعْرِي نُورًا، وَفِي بَشَرِي نُورًا» «[اللَّهُمَّ اجْعَلْ لِي نُورًا فِي قَبْرِي، وَنُورًا فِي عِظَامِي]» [«وَزِدْنِي نُورًا وَزِدْنِي نُورًا وَزِدْنِي نُورًا»] [«وَهَبْ لِي نُورًا عَلَى نُورٍ»]

19. (ಅಲ್ಲಾಹುಮ್ಮಜ್‌ಅಲ್ ಫೀ ಕಲ್ಬೀ ನೂರನ್, ವಫೀ ಲಿಸಾನೀ ನೂರನ್, ವಫೀ ಸಮ್‌ಈ ನೂರನ್, ವಫೀ ಬಸರೀ ನೂರನ್, ವಮಿನ್ ಫೌಕೀ ನೂರನ್, ವಮಿನ್ ತಹ್ತೀ ನೂರನ್, ವಅನ್ ಯಮೀನೀ ನೂರನ್, ವಅನ್ ಶಿಮಾಲೀ ನೂರನ್, ವಮಿನ್ ಅಮಾಮೀ ನೂರನ್, ವಮಿನ್ ಖಲ್ಫೀ ನೂರನ್, ವಜ್‌ಅಲ್ ಫೀ ನಫ್ಸೀ ನೂರನ್, ವಅಅ್‌ಝಿಮ್ ಲೀ ನೂರನ್, ವಅಝ್ಝಿಮ್ ಲೀ ನೂರನ್, ವಜ್‌ಅಲ್ ಲೀ ನೂರನ್, ವಜ್‌ಅಲ್‌ನೀ ನೂರನ್, ಅಲ್ಲಾಹುಮ್ಮ ಅಅ್‌ತಿನೀ ನೂರನ್, ವಜ್‌ಅಲ್ ಫೀ ಅಸಬೀ ನೂರನ್, ವಫೀ ಲಹ್ಮೀ ನೂರನ್, ವಫೀ ದಮೀ ನೂರನ್, ವಫೀ ಶಅ್‌ರೀ ನೂರನ್, ವಫೀ ಬಶರೀ ನೂರನ್, ಅಲ್ಲಾಹುಮ್ಮಜ್‌ಅಲ್ ಲೀ ನೂರನ್ ಫೀ ಕಬ್ರೀ, ವನೂರನ್ ಫೀ ಇಝಾಮೀ, ವಝಿದ್‌ನೀ ನೂರನ್, ವಝಿದ್‌ನೀ ನೂರನ್, ವಝಿದ್‌ನೀ ನೂರನ್, ವಹಬ್ ಲೀ ನೂರನ್ ಅಲಾ ನೂರ್)

**“**ಓ ಅಲ್ಲಾಹ್! ನನ್ನ ಹೃದಯದಲ್ಲಿ ಬೆಳಕನ್ನಿಡು, ನನ್ನ ನಾಲಗೆಯಲ್ಲಿ ಬೆಳಕನ್ನಿಡು, ನನ್ನ ಶ್ರವಣದಲ್ಲಿ ಬೆಳಕನ್ನಿಡು, ನನ್ನ ದೃಷ್ಟಿಯಲ್ಲಿ ಬೆಳಕನ್ನಿಡು, ನನ್ನ ಮೇಲ್ಭಾಗದಲ್ಲಿ ಬೆಳಕನ್ನಿಡು, ನನ್ನ ತಳಭಾಗದಲ್ಲಿ ಬೆಳಕನ್ನಿಡು, ನನ್ನ ಬಲಭಾಗದಲ್ಲಿ ಬೆಳಕನ್ನಿಡು, ನನ್ನ ಎಡಭಾಗದಲ್ಲಿ ಬೆಳಕನ್ನಿಡು, ನನ್ನ ಮುಂಭಾಗದಲ್ಲಿ ಬೆಳಕನ್ನಿಡು, ನನ್ನ ಹಿಂಭಾಗದಲ್ಲಿ ಬೆಳಕನ್ನಿಡು, ನನ್ನ ದೇಹದಲ್ಲಿ ಬೆಳಕನ್ನಿಡು, ನನಗೆ ಬೆಳಕನ್ನು ಹಿರಿದಾಗಿಸಿಕೊಡು, ನನಗೆ ಬೆಳಕನ್ನು ದೊಡ್ಡದಾಗಿಸಿ ಕೊಡು, ನನಗೆ ಬೆಳಕನ್ನೂ ನೀಡು, ನನ್ನನ್ನು ಬೆಳಕನ್ನಾಗಿ ಮಾಡು, ಓ ಅಲ್ಲಾಹ್, ನನಗೆ ಬೆಳಕನ್ನು ಕೊಡು, ನನ್ನ ನರನಾಡಿಗಳಲ್ಲಿ ಬೆಳಕನ್ನಿಡು, ನನ್ನ ಮಾಂಸದಲ್ಲಿ ಬೆಳಕನ್ನಿಡು, ನನ್ನ ರಕ್ತದಲ್ಲಿ ಬೆಳಕನ್ನಿಡು, ನನ್ನ ಕೂದಲಲ್ಲಿ ಬೆಳಕನ್ನಿಡು, ನನ್ನ ತ್ವಚೆಯಲ್ಲಿ ಬೆಳಕನ್ನಿಡು, [33] ಓ ಅಲ್ಲಾಹ್, ನನ್ನ ಗೋರಿಯಲ್ಲಿ ನನಗೆ ಬೆಳಕನ್ನಿಡು, ನನ್ನ ಮೂಳೆಗಳಲ್ಲಿ ಬೆಳಕನ್ನಿಡು, [34] ನನಗೆ ಬೆಳಕನ್ನು ಹೆಚ್ಚಿಸಿಕೊಡು, ನನಗೆ ಬೆಳಕನ್ನು ಹೆಚ್ಚಿಸಿಕೊಡು, [35] ನನಗೆ ಬೆಳಕನ್ನು ಹೆಚ್ಚಿಸಿಕೊಡು, ನನಗೆ ಬೆಳಕಿನ ಮೇಲೆ ಬೆಳಕನ್ನು ದಯಪಾಲಿಸು.**”** [36]

## 13. ಮಸೀದಿಯನ್ನು ಪ್ರವೇಶಿಸುವಾಗ

[33] ಅಲ್‌ಬುಖಾರಿ 11/116 (ಸಂಖ್ಯೆ 6316) ಮುಸ್ಲಿಮ್ 1/526, 529, 530 (ಸಂಖ್ಯೆ 763).

[34] ಅತ್ತಿರ್ಮಿದಿ 5/483 (ಸಂಖ್ಯೆ 3419).

[35] ಅಲ್‌ಬುಖಾರಿ ಅದಬುಲ್ ಮುಫ್ರದ್‌ನಲ್ಲಿ ಪುಟ 258 (ಸಂಖ್ಯೆ 695). ಸಹೀಹುಲ್ ಅದಬಿಲ್ ಮುಫ್ರದ್‌ನಲ್ಲಿ ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ (536).

[36] ಇಬ್ನ್ ಹಜರ್ ಫತ್‌ಹುಲ್ ಬಾರಿಯಲ್ಲಿ. 11/118.

**20- «أَعُوذُ بِاللَّهِ الْعَظِيمِ، وَبِوَجْهِهِ الْكَرِيمِ، وَسُلْطَانِهِ الْقَدِيمِ، مِنَ الشَّيْطَانِ الرَّجِيمِ» [بِسْمِ اللَّهِ] [وَالصَّلَاةُ وَالسَّلَامُ عَلَى رَسُولِ اللَّهِ]، «اللَّهُمَّ افْتَحْ لِي أَبْوَابَ رَحْمَتِكَ»**

20. (ಅಊದು ಬಿಲ್ಲಾಹಿಲ್ ಅಝೀಮಿ, ವಬಿವಜ್‌ಹಿಹಿಲ್ ಕರೀಮಿ, ವಸುಲ್ತಾನಿಹಿಲ್ ಕದೀಮಿ, ಮಿನ ಶ್ಶೈತಾನಿ ರ್ರಜೀಮ್. ಬಿಸ್ಮಿಲ್ಲಾಹಿ ವಸ್ಸಲಾತು ವಸ್ಸಲಾಮು ಅಲಾ ರಸೂಲಿಲ್ಲಾಹಿ. ಅಲ್ಲಾಹುಮ್ಮಫ್ತಹ್ ಲೀ ಅಬ್ವಾಬ ರಹ್ಮತಿಕ್)

**“**ಅತ್ಯುನ್ನತನಾದ ಅಲ್ಲಾಹನೊಂದಿಗೆ, ಅವನ ಮಾನ್ಯವಾದ ಮುಖದೊಂದಿಗೆ, ಅವನ ಶಾಶ್ವತವಾದ ಅಧಿಕಾರದೊಂದಿಗೆ, ಶಪಿಸಲ್ಪಟ್ಟ ಶೈತಾನನಿಂದ ನಾನು ರಕ್ಷೆ ಬೇಡುತ್ತಿದ್ದೇನೆ. [37] ಅಲ್ಲಾಹನ ನಾಮದೊಂದಿಗೆ ಮತ್ತು ಅಲ್ಲಾಹನ ಸಂದೇಶವಾಹಕರ ಮೇಲೆ ರಕ್ಷೆ[38] ಮತ್ತು ಶಾಂತಿಯಿರಲಿ,[39] ಓ ಅಲ್ಲಾಹ್! ನಿನ್ನ ಅನುಗ್ರಹದ ಬಾಗಿಲುಗಳನ್ನು ನನಗೆ ತೆರೆದುಕೊಡು.**”** [40]

## 14. ಮಸೀದಿಯಿಂದ ಹೊರಬರುವಾಗ

**21- «بِسْمِ اللَّهِ وَالصَّلَاةُ وَالسَّلَامُ عَلَى رَسُولِ اللَّهِ، اللَّهُمَّ إِنِّي أَسْأَلُكَ مِنْ فَضْلِكَ، اللَّهُمَّ اعْصِمْنِي مِنَ الشَّيْطَانِ الرَّجِيمِ»**

---

[37] ಅಬೂ ದಾವೂದ್. ನೋಡಿ: ಸಹೀಹುಲ್ ಜಾಮಿಅ್ (4591).

[38] ಇಬ್ನು ಸ್ಸುನ್ನೀ (88). ಅಲ್‌ಅಲ್ಬಾನೀ ಇದನ್ನು ಹಸನ್ ಎಂದಿದ್ದಾರೆ.

[39] ಅಬೂ ದಾವೂದ್ 1/126. ನೋಡಿ: ಸಹೀಹುಲ್ ಜಾಮಿಅ್ 1/528.

[40] ಮುಸ್ಲಿಮ್ 1/494.

21. (ಬಿಸ್ಮಿಲ್ಲಾಹಿ ವಸ್ಸಲಾತು ವಸ್ಸಲಾಮು ಅಲಾ ರಸೂಲಿಲ್ಲಾಹಿ, ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಮಿನ್ ಫದ್ಲಿಕ, ಅಲ್ಲಾಹುಮ್ಮಅ್‌ಸಿಮ್ನೀ ಮಿನ ಶ್ಶೈತಾನಿ ರ್ರಜೀಮ್)

“ಅಲ್ಲಾಹನ ನಾಮದೊಂದಿಗೆ ಮತ್ತು ಅಲ್ಲಾಹನ ಸಂದೇಶವಾಹಕರ ಮೇಲೆ ರಕ್ಷೆ ಮತ್ತು ಶಾಂತಿಯಿರಲಿ, ಓ ಅಲ್ಲಾಹ್! ನಾನು ನಿನ್ನ ಔದಾರ್ಯದೊಂದಿಗೆ ನಿನ್ನಲ್ಲಿ ಬೇಡುತ್ತಿದ್ದೇನೆ. ಓ ಅಲ್ಲಾಹ್! ಶಪಿಸಲ್ಪಟ್ಟ ಶೈತಾನನಿಂದ ನನ್ನನ್ನು ಕಾಪಾಡು.” [41]

## 15. ಅದಾನ್ ಆಲಿಸುವಾಗ

ಮುಅದ್ದಿನ್ ಹೇಳುವಂತೆಯೇ ಹೇಳಬೇಕು. ಆದರೆ ಮುಅದ್ದಿನ್ ಹಯ್ಯ ಅಲ ಸ್ಸಲಾತ್ ಮತ್ತು ಹಯ್ಯ ಅಲಲ್ ಫಲಾಹ್ ಎನ್ನುವಾಗ

22– «لَا حَوْلَ وَلَا قُوَّةَ إِلَّا بِاللَّهِ»

22. (ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್)

“ಯಾವುದೇ ಶಕ್ತಿಯಾಗಲಿ, ಸಾಮರ್ಥ್ಯವಾಗಲಿ ಅಲ್ಲಾಹನಲ್ಲಲ್ಲದೆ ಇನ್ನಾರಲ್ಲೂ ಇಲ್ಲ.” ಎಂದು ಹೇಳಬೇಕು. [42]

ಮುಅದ್ದಿನ್ ಶಹಾದತ್ ಕಲಿಮ ಉಚ್ಚರಿಸುವಾಗ[43]

[41] ನೋಡಿ: ಹದೀಸ್ ಸಂಖ್ಯೆ 20. ಅಲ್ಲಾಹುಮ್ಮಅ್‌ಸಿಮ್ನೀ ಮಿನ ಶ್ಶೈತಾನಿ ರ್ರಜೀಮ್ ಎಂಬ ಹೆಚ್ಚುವರಿ ಇಬ್ನ್ ಮಾಜದಲ್ಲಿದೆ. ನೋಡಿ: ಸಹೀಹ್ ಇಬ್ನ್ ಮಾಜ 1/129.

[42] ಅಲ್‌ಬುಖಾರಿ 1/152, ಮುಸ್ಲಿಮ್ 1/288.

[43] ಇಬ್ನ್ ಖುಝೈಮಃ 1/220

**23- «وَأَنَا أَشْهَدُ أَنْ لَا إِلَهَ إِلَّا اللَّهُ وَحْدَهُ شَرِيكَ لَهُ وَأَنَّ مُحَمَّدًا عَبْدُهُ وَرَسُولُهُ، رَضِيتُ بِاللَّهِ رَبًّا، وَبِمُحَمَّدٍ رَسُولًا ، وَبِالْإِسْلَامِ دِينًا»**

23.(ವಅನ ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ವಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹೂ, ರದೀತು ಬಿಲ್ಲಾಹಿ ರಬ್ಬನ್, ವಬಿಮುಹಮ್ಮದಿನ್ ರಸೂಲನ್, ವಬಿಲ್ ಇಸ್ಲಾಮಿ ದೀನಾ)

“ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ, ಅವನು ಏಕೈಕನೂ ಸಹಭಾಗಿರಹಿತನೂ ಆಗಿದ್ದಾನೆ ಎಂದು ಸಾಕ್ಷ್ಯವಹಿಸುತ್ತೇನೆ ಮತ್ತು ಮುಹಮ್ಮದ್ ಅವನ ದಾಸನೂ ಸಂದೇಶವಾಹಕನೂ ಆಗಿದ್ದಾರೆಂದು ನಾನು ಸಾಕ್ಷ್ಯವಹಿಸುತ್ತೇನೆ, ರಬ್ಬ್ ಆಗಿ ಅಲ್ಲಾಹನನ್ನು, ಸಂದೇಶವಾಹಕರಾಗಿ ಮುಹಮ್ಮದ್‌ರನ್ನು ಮತ್ತು ಧರ್ಮವಾಗಿ ಇಸ್ಲಾಮನ್ನು ನಾನು ತೃಪ್ತಿಪಟ್ಟಿದ್ದೇನೆ.”

ಎಂದು ಹೇಳಬೇಕು. [44]

24. ಅದಾನ್‌ಗೆ ಉತ್ತರಿಸಿದ ಬಳಿಕ ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳಬೇಕು. [45]

ನಂತರ

[44] ಮುಸ್ಲಿಮ್ 1/290

[45] ಮುಸ್ಲಿಮ್ 1/288

**25- اللَّهُمَّ رَبَّ هَذِهِ الدَّعْوَةِ التَّامَّةِ وَالصَّلَاةِ الْقَائِمَةِ، آتِ مُحَمَّدًا الْوَسِيلَةَ وَالْفَضِيلَةَ، وَابْعَثْهُ مَقَامًا مَحْمُودًا الَّذِي وَعَدْتَهُ، [إِنَّكَ لَا تُخْلِفُ الْمِيعَادَ]»**

25.(ಅಲ್ಲಾಹುಮ್ಮ ರಬ್ಬ ಹಾದಿಹಿ ದ್ದಅ್‌ವತಿ ತ್ತಾಮ್ಮತಿ ವಸ್ಸಲಾತಿಲ್ ಕಾಇಮತಿ, ಆತಿ ಮುಹಮ್ಮದನಿಲ್ ವಸೀಲತ ವಲ್ ಫದೀಲತ ವಬ್‌ಅಸ್‌ಹೂ ಮಕಾಮನ್ ಮಹ್ಮೂದನಿಲ್ಲದೀ ವಅದ್ತಹು, ಇನ್ನಕ ಲಾ ತುಖ್ಲಿಫುಲ್ ಮೀಆದ್)

"ಓ ಅಲ್ಲಾಹ್! ಈ ಪರಿಪೂರ್ಣವಾದ ಕರೆಯ ಮತ್ತು ಸಂಸ್ಥಾಪಿಸಲ್ಪಡುವ ನಮಾಝ್‌ನ ಒಡೆಯನೇ! ನೀನು ಮುಹಮ್ಮದ್(ﷺ)ರಿಗೆ ವಸೀಲ ಮತ್ತು ಫದೀಲಗಳನ್ನು ನೀಡು. ಮತ್ತು ನೀನು ನೀಡಿದ ವಾಗ್ದಾನದಂತೆ ಅವರನ್ನು ಮಕಾಮ್ ಮಹ್ಮೂದ್‌ಗೆ ಕಳುಹಿಸು. ಖಂಡಿತವಾಗಿಯೂ ನೀನು ವಾಗ್ದಾನ ಉಲ್ಲಂಘಿಸುವವನಲ್ಲ."

ಎಂದು ಹೇಳಬೇಕು. [46]

26. ನಂತರ ಅದಾನ್ ಮತ್ತು ಇಕಾಮತ್‌ಗಳ ಮಧ್ಯೆ ಸ್ವಂತಕ್ಕಾಗಿ ಪ್ರಾರ್ಥಿಸಬೇಕು. ಯಾಕೆಂದರೆ ಆ ಸಮಯದ ಪ್ರಾರ್ಥನೆ ತಿರಸ್ಕೃತವಾಗುವುದಿಲ್ಲ. [47]

[46] ಅಲ್‌ಬುಖಾರಿ 1/152. ಅಲ್‌ಬೈಹಕೀ 1/410. ಅಲ್ಲಾಮಾ ಇಬ್ನ್ ಬಾಝ್ ಇದರ ಸನದನ್ನು ಹಸನ್ ಎಂದಿದ್ದಾರೆ (ತುಹ್ಫತುಲ್ ಅಖ್ಬಾರ್ ಪುಟ 38). [ಇನ್ನಕ ಲಾ ತುಖ್ಲಿಫುಲ್ ಮೀಆದ್ ಎಂಬ ಹೆಚ್ಚುವರಿಯನ್ನು ಶೈಖ್ ಅಲ್‌ಅಲ್ಬಾನೀ ಶಾದ್ದ್ ಎಂದಿದ್ದಾರೆ. (ನೋಡಿ: ಅಲ್‌ಇರ್ವಾಅ್ 1/261) – ಪರಿಶೀಲಕ]

[47] ಅತ್ತಿರ್ಮಿದಿ, ಅಬೂ ದಾವೂದ್, ಅಹ್ಮದ್. ನೋಡಿ: ಇರ್ವಾಉಲ್ ಗಲೀಲ್ 1/262.

## 16. ದುಆಉಲ್ ಇಸ್ತಿಫ್ತಾಹ್

**27- «اللَّهُمَّ بَاعِدْ بَيْنِي وَبَيْنَ خَطَايَايَ كَمَا بَاعَدْتَ بَيْنَ الْمَشْرِقِ وَالْمَغْرِبِ، اللَّهُمَّ نَقِّنِي مِنْ خَطَايَايَ كَمَا يُنَقَّى الثَّوْبُ الْأَبْيَضُ مِنَ الدَّنَسِ، اللَّهُمَّ اغْسِلْنِي مِنْ خَطَايَايَ بِالثَّلْجِ وَالْمَاءِ وَالْبَرَدِ»**

27.(ಅಲ್ಲಾಹುಮ್ಮ ಬಾಇದ್ ಬೈನೀ ವಬೈನ ಖತಾಯಾಯ ಕಮಾ ಬಾಅದ್ತ ಬೈನಲ್ ಮಶ್ರಿಕಿ ವಲ್ ಮಗ್ರಿಬ್, ಅಲ್ಲಾಹುಮ್ಮ ನಕ್ಕಿನೀ ಮಿನ್ ಖತಾಯಾಯ ಕಮಾ ಯುನಕ್ಕ ಸ್ಸೌಬುಲ್ ಅಬ್‌ಯದು ಮಿನ ದ್ದನಸ್, ಅಲ್ಲಾಹುಮ್ಮಗ್‌ಸಿಲ್ನೀ ಮಿನ್ ಖತಾಯಾಯ ಬಿಸ್ಸಲ್ಜಿ ವಲ್ ಮಾಇ ವಲ್ ಬರದ್)

"ಓ ಅಲ್ಲಾಹ್! ಪೂರ್ವ ಮತ್ತು ಪಶ್ಚಿಮ(ದಿಕ್ಕು)ಗಳ ಮಧ್ಯೆ ಅಂತರವಿರಿಸಿದಂತೆ ನನ್ನ ಮತ್ತು ನನ್ನ ಪಾಪಗಳ ಮಧ್ಯೆ ಅಂತರವಿರಿಸು. ಓ ಅಲ್ಲಾಹ್! ಬಿಳಿ ಉಡುಪನ್ನು ಕೊಳೆಯಿಂದ ಶುದ್ಧೀಕರಿಸುವಂತೆ ನನ್ನನ್ನು ನನ್ನ ಪಾಪಗಳಿಂದ ಶುದ್ಧೀಕರಿಸು. ಓ ಅಲ್ಲಾಹ್! ಮಂಜು, ನೀರು ಮತ್ತು ಹಿಮಗಳಿಂದ ನನ್ನನ್ನು ನನ್ನ ಪಾಪಗಳಿಂದ ತೊಳೆದುಬಿಡು." [48]

**28- «سُبْحَانَكَ اللَّهُمَّ وَبِحَمْدِكَ، وَتَبَارَكَ اسْمُكَ وَتَعَالَى جَدُّكَ، وَلَا إِلَهَ غَيْرُكَ»**

[48] ಅಲ್‌ಬುಖಾರಿ 1/181, ಮುಸ್ಲಿಮ್ 1/419.

28.(ಸುಬ್‌ಹಾನಕಲ್ಲಾಹುಮ್ಮ ವಬಿಹಮ್ದಿಕ, ವತಬಾರಕಸ್ಮುಕ ವತಆಲಾ ಜದ್ದುಕ, ವಲಾ ಇಲಾಹ ಗೈರುಕ)

"ಓ ಅಲ್ಲಾಹ್! ನಿನ್ನ ಪರಿಪಾವನತೆಯನ್ನು ಕೊಂಡಾಡುತ್ತಾ ನಿನ್ನ ಸ್ತುತಿಯೊಂದಿಗೆ, ನಿನ್ನ ನಾಮವು ಅನುಗ್ರಹೀತವಾಗಿದೆ, ನಿನ್ನ ಔನ್ನತ್ಯವು ಅತ್ಯುನ್ನತವಾಗಿದೆ ಮತ್ತು ನೀನಲ್ಲದೆ ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ." [49]

**29– «وَجَّهْتُ وَجْهِيَ لِلَّذِي فَطَرَ السَّمَاوَاتِ وَالْأَرْضَ حَنِيفًا وَمَا أَنَا مِنَ الْمُشْرِكِينَ، إِنَّ صَلَاتِي وَنُسُكِي وَمَحْيَايَ وَمَمَاتِي لِلَّهِ رَبِّ الْعَالَمِينَ، لَا شَرِيكَ لَهُ وَبِذَلِكَ أُمِرْتُ وَأَنَا مِنَ الْمُسْلِمِينَ، اللَّهُمَّ أَنْتَ الْمَلِكُ لَا إِلَهَ إِلَّا أَنْتَ، أَنْتَ رَبِّي وَأَنَا عَبْدُكَ، ظَلَمْتُ نَفْسِي وَاعْتَرَفْتُ بِذَنْبِي فَاغْفِرْ لِي ذُنُوبِي جَمِيعًا، إِنَّهُ لَا يَغْفِرُ الذُّنُوبَ إِلَّا أَنْتَ، وَاهْدِنِي لِأَحْسَنِ الْأَخْلَاقِ لَا يَهْدِي لِأَحْسَنِهَا إِلَّا أَنْتَ، وَاصْرِفْ عَنِّي سَيِّئَهَا، لَا يَصْرِفُ عَنِّي سَيِّئَهَا إِلَّا أَنْتَ، لَبَّيْكَ، وَسَعْدَيْكَ وَالْخَيْرُ كُلُّهُ بِيَدَيْكَ، وَالشَّرُّ لَيْسَ إِلَيْكَ، أَنَا بِكَ وَإِلَيْكَ، تَبَارَكْتَ وَتَعَالَيْتَ، أَسْتَغْفِرُكَ وَأَتُوبُ إِلَيْكَ»**

29.(ವಜ್ಜಹ್ತು ವಜ್‌ಹಿಯ ಲಿಲ್ಲದೀ ಫತರ ಸ್ಸಮಾವಾತಿ ವಲ್ ಅರ್‌ದ ಹನೀಫನ್ ವಮಾ ಅನ ಮಿನಲ್ ಮುಶ್ರಿಕೀನ, ಇನ್ನ ಸಲಾತೀ

[49] ಅಬೂ ದಾವೂದ್, ಅತ್ತಿರ್ಮಿದಿ, ಇಬ್ನ್ ಮಾಜ, ಅನ್ನಸಾಈ. ನೋಡಿ: ಸಹೀಹು ತ್ತಿರ್ಮಿದಿ 1/77, ಸಹೀಹ್ ಇಬ್ನ್ ಮಾಜ 1/135.

ವನುಸುಕೀ ವಮಹ್ಯಾಯ ವಮಮಾತೀ ಲಿಲ್ಲಾಹಿ ರಬ್ಬಿಲ್ ಆಲಮೀನ, ಲಾ ಶರೀಕ ಲಹೂ ವಬಿದಾಲಿಕ ಉಮಿರ್ತು ವಅನ ಮಿನಲ್ ಮುಸ್ಲಿಮೀನ, ಅಲ್ಲಾಹುಮ್ಮ ಅನ್ತಲ್ ಮಲಿಕು ಲಾ ಇಲಾಹ ಇಲ್ಲಾ ಅನ್ತ, ಅನ್ತ ರಬ್ಬೀ ವಅನ ಅಬ್ದುಕ ದಲಮ್ತು ನಫ್ಸೀ ವಅ್ತರಫ್ತು ಬಿದಮ್ಬೀ ಫಗ್‌ಫಿರ್ ಲೀ ದುನೂಬೀ ಜಮೀಅನ್, ಇನ್ನಹೂ ಲಾ ಯಗ್‌ಫಿರು ದ್ದುನೂಬ ಇಲ್ಲಾ ಅನ್ತ, ವಹ್ದಿನೀ ಲಿಅಹ್ಸನಿಲ್ ಅಖ್‌ಲಾಕಿ, ಲಾ ಯಹ್ದೀ ಲಿಅಹ್ಸನಿಹಾ ಇಲ್ಲಾ ಅನ್ತ, ವಸ್ರಿಫ್ ಅನ್ನೀ ಸಯ್ಯಿಅಹಾ, ಲಾ ಯಸ್ರಿಫು ಅನ್ನೀ ಸಯ್ಯಿಅಹಾ ಇಲ್ಲಾ ಅನ್ತ, ಲಬ್ಬಯ್ಕ, ವಸಅ್‌ದಯ್ಕ ವಲ್ ಖೈರು ಕುಲ್ಲುಹೂ ಬಿಯದೈಕ, ವಶ್ಶರ್ರು ಲೈಸ ಇಲೈಕ, ಅನ ಬಿಕ ವಇಲೈಕ, ತಬಾರಕ್ತ ವತಆಲೈತ, ಅಸ್ತಗ್‌ಫಿರುಕ ವಅತೂಬು ಇಲೈಕ್)

"ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿದವನೆಡೆಗೆ ನಿಷ್ಕಳಂಕಿತನಾಗಿ ನಾನು ನನ್ನ ಮುಖವನ್ನು ತಿರುಗಿಸಿದೆನು ಮತ್ತು ನಾನು ಬಹುದೈವವಿಶ್ವಾಸಿಗಳಲ್ಲಿ ಸೇರಿದವನಲ್ಲ. ನನ್ನ ನಮಾಝ್, ನನ್ನ ಬಲಿಕರ್ಮ, ನನ್ನ ಜೀವನ ಮತ್ತು ನನ್ನ ಮರಣವು ಸರ್ವಲೋಕಗಳ ರಬ್ಬ್ ಆಗಿರುವ ಅಲ್ಲಾಹನಿಗೆ. ಅವನಿಗೆ ಯಾವುದೇ ಸಹಭಾಗಿಗಳಿಲ್ಲ, ಮತ್ತು ಈ ರೀತಿಯಾಗಿ ನನ್ನೊಂದಿಗೆ ಆಜ್ಞಾಪಿಸಲ್ಪಟ್ಟಿದೆ ಮತ್ತು ನಾನು ಮುಸ್ಲಿಮರಲ್ಲಿ ಸೇರಿದವನಾಗಿದ್ದೇನೆ. ಓ ಅಲ್ಲಾಹ್! ನೀನು ಅಧಿಪತಿಯಾಗಿರುವೆ, ನೀನಲ್ಲದೆ ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ, ನೀನು ನನ್ನ ರಬ್ಬ್ ಮತ್ತು ನಾನು ನಿನ್ನ ದಾಸ. ನಾನು ನನ್ನ ಶರೀರದ ಮೇಲೆ ಅತಿಕ್ರಮವೆಸಗಿದ್ದೇನೆ ಮತ್ತು ನನ್ನ ಪಾಪದೊಂದಿಗೆ ನಿನ್ನಲ್ಲಿ ಪಶ್ಚಾತ್ತಾಪಪಡುತ್ತಿದ್ದೇನೆ. ಆದ್ದರಿಂದ ನನ್ನ ಪಾಪಗಳೆಲ್ಲವನ್ನೂ ಕ್ಷಮಿಸು. ಖಂಡಿತವಾಗಿಯೂ ನೀನಲ್ಲದೆ ಪಾಪಗಳನ್ನು ಕ್ಷಮಿಸುವವರಿಲ್ಲ. ಅತ್ಯುತ್ತಮವಾದ ಸ್ವಭಾವದೆಡೆಗೆ ನನ್ನನ್ನು ಮುನ್ನಡೆಸು. ಖಂಡಿತವಾಗಿಯೂ ಅತ್ಯುತ್ತಮವಾದ ಸ್ವಭಾವದೆಡೆಗೆ ನೀನಲ್ಲದೆ ಮುನ್ನಡೆಸುವವರಿಲ್ಲ. ಹೀನವಾದ ಸ್ವಭಾವವನ್ನು ನನ್ನಿಂದ ದೂರವಾಗಿಸು.

ಹೀನವಾದ ಸ್ವಭಾವವನ್ನು ನೀನಲ್ಲದೆ ದೂರವಾಗಿಸುವವರಿಲ್ಲ. ನಿನ್ನ ಕರೆಗೆ ಉತ್ತರಿಸಲು ನಾನಿಲ್ಲಿದ್ದೇನೆ. ಒಳಿತೆಲ್ಲವೂ ನಿನ್ನ ಕರಗಳಲ್ಲಿದೆ, ಕೆಡುಕು ನಿನಗೆ ಹೇಳಿಸಿದ್ದಲ್ಲ. ನಿನ್ನಿಂದಾಗಿ ನಾನು ಅಸ್ತಿತ್ವವನ್ನು ಪಡೆದಿದ್ದೇನೆ, ಮತ್ತು ನಾನು ನಿನ್ನೆಡೆಗೆ ಮರಳುವವನಾಗಿದ್ದೇನೆ. ನೀನು ಅನುಗ್ರಹೀತನೂ ಅತ್ಯುನ್ನತನೂ ಆಗಿರುವೆ. ನಿನ್ನೊಂದಿಗೆ ಕ್ಷಮಾಪಣೆಯನ್ನು ಬೇಡುತ್ತಾ ನಿನ್ನೆಡೆಗೆ ಪಶ್ಚಾತ್ತಾಪದೊಂದಿಗೆ ಮರಳುತ್ತಿದ್ದೇನೆ.” [50]

**30- «اللَّهُمَّ رَبَّ جَبْرَائِيلَ وَمِيكَائِيلَ وَإِسْرَافِيلَ، فَاطِرَ السَّمَاوَاتِ وَالْأَرْضِ، عَالِمَ الْغَيْبِ وَالشَّهَادَةِ، أَنْتَ تَحْكُمُ بَيْنَ عِبَادِكَ فِيمَا كَانُوا فِيهِ يَخْتَلِفُونَ، اهْدِنِي لِمَا اخْتُلِفَ فِيهِ مِنَ الْحَقِّ بِإِذْنِكَ إِنَّكَ تَهْدِي مَنْ تَشَاءُ إِلَى صِرَاطٍ مُسْتَقِيمٍ»**

30.(ಅಲ್ಲಾಹುಮ್ಮ ರಬ್ಬ ಜಬ್ರಾಈಲ ವಮೀಕಾಈಲ ವಇಸ್ರಾಫೀಲ, ಫಾತಿರ ಸ್ಸಮಾವಾತಿ ವಲ್ ಅರ್ದಿ, ಆಲಿಮಲ್ ಗೈಬಿ ವಶ್ಶಹಾದತಿ, ಅನ್ತ ತಹ್ಕುಮು ಬೈನ ಇಬಾದಿಕ ಫೀಮಾ ಕಾನೂ ಫೀಹಿ ಯಖ್ತಲಿಫೂನ್, ಇಹ್ದಿನೀ ಲಿಮಖ್ತುಲಿಫ ಫೀಹಿ ಮಿನಲ್ ಹಕ್ಕಿ ಬಿಇದ್‌ನಿಕ ಇನ್ನಕ ತಹ್ದೀ ಮನ್ ತಶಾಉ ಇಲಾ ಸಿರಾತಿನ್ ಮುಸ್ತಕೀಮ್)

“ಓ ಅಲ್ಲಾಹ್! ಜಿಬ್ರೀಲರ, ಮೀಕಾಈಲರ ಮತ್ತು ಇಸ್ರಾಫೀಲರ ರಬ್ಬೇ! ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನೇ! ಅಗೋಚರ ಮತ್ತು ಗೋಚರವನ್ನು ಅರಿತವನೇ! ನಿನ್ನ ದಾಸರು ಯಾವ ವಿಷಯದಲ್ಲಿ ಭಿನ್ನರಾಗಿರುವರೋ ಅದರ ಬಗ್ಗೆ ಅವರ ನಡುವೆ ತೀರ್ಪು ನೀಡುವವನು ನೀನು. ಅವರು ಭಿನ್ನರಾಗಿ ಹೋದ ಆ ಸತ್ಯದೆಡೆಗೆ ನನ್ನನ್ನು ಮುನ್ನಡೆಸು.

[50] ಮುಸ್ಲಿಮ್ 1/534

ನೀನಿಚ್ಛಿಸಿದವರನ್ನು ನೀನು ನೇರವಾದ ಮಾರ್ಗದೆಡೆಗೆ ಮುನ್ನಡೆಸುವೆ.” 51

31– «اللَّهُ أَكْبَرُ كَبِيرًا، » اللَّهُ أَكْبَرُ كَبِيرًا، اللَّهُ أَكْبَرُ كَبِيرًا، وَالْحَمْدُ لِلَّهِ كَثِيرًا، وَالْحَمْدُ لِلَّهِ كَثِيرًا، وَالْحَمْدُ لِلَّهِ كَثِيرًا، وَسُبْحَانَ اللَّهِ بُكْرَةً وَأَصِيلًا» ثَلَاثًا «أَعُوذُ بِاللَّهِ مِنَ الشَّيْطَانِ مِنْ نَفْخِهِ وَنَفْثِهِ وَهَمْزِهِ»

31. (ಅಲ್ಲಾಹು ಅಕ್ಬರು ಕಬೀರನ್, ಅಲ್ಲಾಹು ಅಕ್ಬರು ಕಬೀರನ್, ಅಲ್ಲಾಹು ಅಕ್ಬರು ಕಬೀರನ್, ವಲ್‌ಹಮ್ದುಲಿಲ್ಲಾಹಿ ಕಸೀರನ್, ವಲ್‌ಹಮ್ದುಲಿಲ್ಲಾಹಿ ಕಸೀರನ್, ವಲ್‌ಹಮ್ದುಲಿಲ್ಲಾಹಿ ಕಸೀರನ್, ವಸುಬ್‌ಹಾನಲ್ಲಾಹಿ ಬುಕ್ರತನ್ ವಅಸೀಲಾ, ಅಊದು ಬಿಲ್ಲಾಹಿ ಮಿನ ಶ್ಶೈತಾನಿ ಮಿನ್ ನಫ್ಖಿಹೀ ವನಫ್ಸಿಹೀ ವಹಮ್‌ಝಿಹೀ) (ಮೂರು ಬಾರಿ)

“ಅಲ್ಲಾಹು ಮಹಾನನೂ ಮಹೋನ್ನತನೂ ಆಗಿದ್ದಾನೆ, ಅಲ್ಲಾಹು ಮಹಾನನೂ ಮಹೋನ್ನತನೂ ಆಗಿದ್ದಾನೆ, ಅಲ್ಲಾಹು ಮಹಾನನೂ ಮಹೋನ್ನತನೂ ಆಗಿದ್ದಾನೆ, ಅಲ್ಲಾಹನಿಗೆ ಅತ್ಯಧಿಕ ಸ್ತುತಿ, ಅಲ್ಲಾಹನಿಗೆ ಅತ್ಯಧಿಕ ಸ್ತುತಿ, ಅಲ್ಲಾಹನಿಗೆ ಅತ್ಯಧಿಕ ಸ್ತುತಿ, ಪ್ರಭಾತದಲ್ಲಿ ಮತ್ತು ಸಂಧ್ಯಾವೇಳೆಯಲ್ಲಿ ಅಲ್ಲಾಹನ ಪರಿಪಾವನತೆಯನ್ನು ಕೊಂಡಾಡುತ್ತೇನೆ.” 52

---

51 ಮುಸ್ಲಿಮ್ 1/534

52 ಅಬೂದಾವೂದ್ 1/203, ಇಬ್ನ್ ಮಾಜ 1/265, ಅಹ್ಮದ್ 4/85. ಇದರಂತಿರುವ ಹದೀಸನ್ನು ಮುಸ್ಲಿಮ್ (1/420) ಇಬ್ನ್ ಉಮರ್(ರ)ರಿಂದ ವರದಿ ಮಾಡಿದ್ದಾರೆ.

32- «اللَّهُمَّ لَكَ الْحَمْدُ، أَنْتَ نُورُ السَّمَاوَاتِ وَالْأَرْضِ، وَمَنْ فِيهِنَّ، وَلَكَ الْحَمْدُ، أَنْتَ قَيِّمُ السَّمَاوَاتِ وَالْأَرْضِ، وَمَنْ فِيهِنَّ، [وَلَكَ الْحَمْدُ، أَنْتَ رَبُّ السَّمَاوَاتِ وَالْأَرْضِ، وَمَنْ فِيهِنَّ]، [وَلَكَ الْحَمْدُ، لَكَ مُلْكُ السَّمَاوَاتِ وَالْأَرْضِ، وَمَنْ فِيهِنَّ]، [وَلَكَ الْحَمْدُ، أَنْتَ مَلِكُ السَّمَاوَاتِ وَالْأَرْضِ]، [وَلَكَ الْحَمْدُ]، [أَنْتَ الْحَقُّ، وَوَعْدُكَ الْحَقُّ، وَقَوْلُكَ الْحَقُّ، وَلِقَاؤُكَ حَقٌّ، وَالْجَنَّةُ حَقٌّ، وَالنَّارُ حَقٌّ، وَالنَّبِيُّونَ حَقٌّ، وَمُحَمَّدٌ ﷺ حَقٌّ، وَالسَّاعَةُ حَقٌّ]، [اللَّهُمَّ لَكَ أَسْلَمْتُ، وَعَلَيْكَ تَوَكَّلْتُ، وَبِكَ آمَنْتُ، وَإِلَيْكَ أَنَبْتُ، وَبِكَ خَاصَمْتُ، وَإِلَيْكَ حَاكَمْتُ، فَاغْفِرْ لِي مَا قَدَّمْتُ وَمَا أَخَّرْتُ، وَأَسْرَرْتُ وَأَعْلَنْتُ]، [أَنْتَ الْمُقَدِّمُ وَأَنْتَ الْمُؤَخِّرُ لَا إِلَهَ إِلَّا أَنْتَ] [أَنْتَ إِلَهِي لَا إِلَهَ إِلَّا أَنْتَ]»

32.(ಅಲ್ಲಾಹುಮ್ಮ ಲಕಲ್ ಹಮ್ದು, ಅನ್ತ ನೂರು ಸ್ಸಮಾವಾತಿ ವಲ್ ಅರ್‍ದಿ, ವಮನ್ ಫೀಹಿನ್ನ, ವಲಕಲ್ ಹಮ್ದು, ಅನ್ತ ಕಯ್ಯಿಮು ಸ್ಸಮಾವಾತಿ ವಲ್ ಅರ್‍ದಿ, ವಮನ್ ಫೀಹಿನ್ನ, ವಲಕಲ್ ಹಮ್ದು, ಅನ್ತ ರಬ್ಬು ಸ್ಸಮಾವಾತಿ ವಲ್ ಅರ್‍ದಿ, ವಮನ್ ಫೀಹಿನ್ನ, ವಲಕಲ್ ಹಮ್ದು ಅನ್ತ ಮುಲ್ಕು ಸ್ಸಮಾವಾತಿ ವಲ್ ಅರ್‍ದಿ ವಮನ್ ಫೀಹಿನ್ನ, ವಲಕಲ್ ಹಮ್ದು, ಅನ್ತ ಮಲಿಕು ಸ್ಸಮಾವಾತಿ ವಲ್ ಅರ್‍ದಿ, ವಲಕಲ್ ಹಮ್ದು, ಅನ್ತಲ್ ಹಕ್ಕು, ವವಅ್‌ದುಕಲ್ ಹಕ್ಕು, ವಕೌಲುಕಲ್ ಹಕ್ಕು, ವಲಿಕಾಉಕ ಹಕ್ಕುನ್, ವಲ್ ಜನ್ನತು ಹಕ್ಕುನ್, ವನ್ನಾರು ಹಕ್ಕುನ್, ವನ್ನಬಿಯ್ಯೂನ ಹಕ್ಕುನ್, ವಮುಹಮ್ಮದುನ್ ಸಲ್ಲಲ್ಲಾಹು ಅಲೈಹಿ ವಸಲ್ಲಮ ಹಕ್ಕುನ್,

ವಸ್ಸಾಲಅತು ಹಕ್ಕುನ್, ಅಲ್ಲಾಹುಮ್ಮ ಲಕ ಅಸ್ಲಮ್ತು, ವಅಲೈಕ ತವಕ್ಕಲ್ತು, ವಬಿಕ ಆಮನ್ತು, ವಇಲೈಕ ಅನಬ್ತು, ವಬಿಕ ಖಾಸಮ್ತು, ವಇಲೈಕ ಹಾಕಮ್ತು, ಫಗ್‌ಫಿರ್ ಲೀ ಮಾ ಕದ್ದಮ್ತು ವಮಾ ಅಖ್ಖರ್ತು, ವಅಸ್ರರ್ತು ವಅಲ್‌ಲನ್ತು, ಅನ್ತಲ್ ಮುಕದ್ದಿಮು ವಅನ್ತಲ್ ಮುಅಖ್ಖಿರು ಲಾ ಇಲಾಹ ಇಲ್ಲಾ ಅನ್ತ, ಅನ್ತ ಇಲಾಹೀ ಲಾ ಇಲಾಹ ಇಲ್ಲಾ ಅನ್ತ)

"ಓ ಅಲ್ಲಾಹ್! ನಿನಗೆ ಸರ್ವಸ್ತುತಿ.[53] ಆಕಾಶಗಳ ಮತ್ತು ಭೂಮಿಯ ಹಾಗೂ ಅವುಗಳಲ್ಲಿರುವವರ ಬೆಳಕು ನೀನೇ. ಮತ್ತು ನಿನಗೆ ಸರ್ವಸ್ತುತಿ. ಆಕಾಶಗಳ, ಭೂಮಿಯ ಹಾಗೂ ಅವುಗಳಲ್ಲಿರುವವರ ನಿಯಂತ್ರಕನು ನೀನೇ. ಮತ್ತು ನಿನಗೆ ಸರ್ವಸ್ತುತಿ. ಆಕಾಶಗಳ, ಭೂಮಿಯ ಮತ್ತು ಅವುಗಳಲ್ಲಿರುವವರ ರಬ್ಬ್ ನೀನೇ. ಮತ್ತು ನಿನಗೆ ಸರ್ವಸ್ತುತಿ, ಆಕಾಶಗಳ ಮತ್ತು ಭೂಮಿಯ ಹಾಗೂ ಅವುಗಳಲ್ಲಿರುವವರ ಆಧಿಪತ್ಯವು ನಿನ್ನದ್ದು, ಮತ್ತು ನಿನಗೆ ಸರ್ವಸ್ತುತಿ. ಆಕಾಶಗಳ ಮತ್ತು ಭೂಮಿಯ ಸಾಮ್ರಾಟ ನೀನೇ. ಮತ್ತು ನಿನಗೆ ಸರ್ವಸ್ತುತಿ. ನೀನು ಸತ್ಯ, ನಿನ್ನ ವಾಗ್ದಾನವು ಸತ್ಯ, ನಿನ್ನ ಮಾತು ಸತ್ಯ, ನಿನ್ನ ಭೇಟಿಯು ಸತ್ಯ, ಸ್ವರ್ಗವು ಸತ್ಯ ನರಕವು ಸತ್ಯ, ಪ್ರವಾದಿಗಳು ಸತ್ಯ, ಪ್ರವಾದಿ ಮುಹಮ್ಮದ್(ﷺ) ಸತ್ಯ, ಪುನರುತ್ಥಾನವು ಸತ್ಯ, ಓ ಅಲ್ಲಾಹ್! ನಿನಗೆ ನಾನು ಶರಣಾಗಿದ್ದೇನೆ, ನಿನ್ನ ಮೇಲೆ ನಾನು ಭಾರವನ್ನರ್ಪಿಸಿದ್ದೇನೆ, ನಿನ್ನಲ್ಲಿ ನಾನು ವಿಶ್ವಾಸವಿಟ್ಟಿದ್ದೇನೆ, ನಿನ್ನೆಡೆಗೆ ನಾನು (ಪಶ್ಚಾತ್ತಾಪದೊಂದಿಗೆ) ಮರಳಿದ್ದೇನೆ, ನಿನ್ನಿಂದ ನಾನು ತರ್ಕಿಸುತ್ತೇನೆ, ನಾನು ನಿನ್ನನ್ನು ತೀರ್ಪುಗಾರನನ್ನಾಗಿಸುತ್ತೇನೆ. ಆದ್ದರಿಂದ ನನ್ನ ಗತ ಮತ್ತು ಮುಂಬರುವ ಪಾಪಗಳನ್ನು ಕ್ಷಮಿಸು, ನಾನು ಬಚ್ಚಿಟ್ಟಿರುವುದನ್ನು ಮತ್ತು ಜಾಹೀರುಗೊಳಿಸಿರುವುದನ್ನು (ಕ್ಷಮಿಸು). ಮುಂದೂಡುವವನು ಮತ್ತು ಹಿಂದೂಡುವವನು ನೀನೇ. ನೀನಲ್ಲದೆ

[53] ಪ್ರವಾದಿ(ﷺ)ರವರು ಇದನ್ನು ತಹಜ್ಜುದ್ ನಮಾಝ್‌ನಲ್ಲಿ ಹೇಳುತ್ತಿದ್ದರು.

ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ. ನೀನು ನನ್ನ ಆರಾಧ್ಯನು. ನೀನಲ್ಲದೆ ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ." [54]

## 17. ರುಕೂಅ್‌ನಲ್ಲಿ

**33–** «سُبْحَانَ رَبِّيَ الْعَظِيمِ»

33.(ಸುಬ್‌ಹಾನ ರಬ್ಬಿಯಲ್ ಅದೀಮ್) (ಮೂರು ಸಲ)

"ಮಹೋನ್ನತನಾದ ನನ್ನ ರಬ್ಬ್‌ನ ಪರಿಪಾವನತೆಯನ್ನು ಕೊಂಡಾಡುತ್ತೇನೆ." [55]

**34–** «سُبْحَانَكَ اللَّهُمَّ رَبَّنَا وَبِحَمْدِكَ، اللَّهُمَّ اغْفِرْ لِي»

34.(ಸುಬ್‌ಹಾನಕಲ್ಲಾಹುಮ್ಮ ರಬ್ಬನಾ ವಬಿಹಮ್ದಿಕ, ಅಲ್ಲಾಹುಮ್ಮಗ್‌ಫಿರ್ ಲೀ)

"ಓ ಅಲ್ಲಾಹ್! ನಮ್ಮ ರಬ್ಬೇ! ನಿನ್ನ ಸ್ತುತಿಯೊಂದಿಗೆ ನಿನ್ನ ಪರಿಪಾವನತೆಯನ್ನು ಕೊಂಡಾಡುತ್ತೇನೆ. ಓ ಅಲ್ಲಾಹ್! ನನಗೆ ಕ್ಷಮೆ ನೀಡು." [56]

**35–** «سُبُّوحٌ قُدُّوسٌ رَبُّ الْمَلَائِكَةِ وَالرُّوحِ»

---

[54] ಅಲ್‌ಬುಖಾರಿ (ನೋಡಿ: ಫತ್‌ಹುಲ್ ಬಾರಿ 3/3, 11/116, 13/381, 623, 465). ಮುಸ್ಲಿಮ್ 1/532.

[55] ಅಲ್‌ಬುಖಾರಿ, ಮುಸ್ಲಿಮ್, ಅಬೂದಾವೂದ್, ಅತ್ತಿರ್ಮಿದಿ, ಇಬ್ನ್ ಮಾಜ, ಅನ್ನಸಾಈ, ಅಹ್ಮದ್. ನೋಡಿ ಸಹೀಹು ತ್ತಿರ್ಮಿದಿ 1/83

[56] ಅಲ್‌ಬುಖಾರಿ 1/99 ಮುಸ್ಲಿಮ್ 1/350.

35.(ಸುಬ್ಬೂಹುನ್ ಕುದ್ದೂಸುನ್ ರಬ್ಬುಲ್ ಮಲಾಇಕತಿ ವರ್ರೂಹ್)

“ಪರಿಪಾವನನು, ಪವಿತ್ರನು, ಮಲಕ್‌ಗಳ ಮತ್ತು ರೂಹ್(ಜಿಬ್ರೀಲ್)ನ ರಬ್ಬ್." [57]

-36 «اللَّهُمَّ لَكَ رَكَعْتُ، وَبِكَ آمَنْتُ، وَلَكَ أَسْلَمْتُ، خَشَعَ لَكَ سَمْعِي وَبَصَرِي وَمُخِّي وَعَظْمِي وَعَصَبِي، وَمَا اسْتَقَلَّ بِهِ قَدَمِي»

36.(ಅಲ್ಲಾಹುಮ್ಮ ಲಕ ರಕಅ್‌ತು, ವಬಿಕ ಆಮನ್ತು, ವಲಕ ಅಸ್ಲಮ್ತು, ಖಶಅ ಲಕ ಸಮ್‌ಈ ವಬಸರೀ ವಮುಖ್ಖೀ ವಅದ್‌ಮೀ ವಅಸಬೀ, ವಮಸ್ತಕಲ್ಲ ಬಿಹೀ ಕದಮೀ)

“ಓ ಅಲ್ಲಾಹ್! ನಾನು ನಿನಗೆ ತಲೆಬಾಗಿದ್ದೇನೆ, ನಿನ್ನ ಮೇಲೆ ವಿಶ್ವಾಸವಿರಿಸಿದ್ದೇನೆ, ನಿನಗೆ ಶರಣಾಗಿದ್ದೇನೆ, ನನ್ನ ಶ್ರವಣ, ದೃಷ್ಟಿ, ಮಿದುಳು, ಮೂಳೆ, ನರನಾಡಿಗಳು ಮತ್ತು ನನ್ನ ಪಾದ ಏನನ್ನು ಹೊತ್ತುಕೊಂಡಿದೆಯೋ ಅದು ನಿನಗೆ ವಿಧೇಯವಾಗಿವೆ.” [58]

-37 «سُبْحَانَ ذِي الْجَبَرُوتِ وَالْمَلَكُوتِ وَالْكِبْرِيَاءِ وَالْعَظَمَةِ»

37.(ಸುಬ್‌ಹಾನ ದಿಲ್ ಜಬರೂತಿ ವಲ್ ಮಲಕೂತಿ ವಲ್ ಕಿಬ್ರಿಯಾಇ ವಲ್ ಅದಮಃ)

---

[57] ಮುಸ್ಲಿಮ್ 1/353, ಅಬೂದಾವೂದ್ 1/230

[58] ಮುಸ್ಲಿಮ್ 1/354, ಅಬೂದಾವೂದ್, ಅತ್ತಿರ್ಮಿದಿ, ಅನ್ನಸಾಈ.

"ಪ್ರತಾಪಗಳನ್ನು, ಆಧಿಪತ್ಯಗಳನ್ನು, ಅಹಂಭಾವಗಳನ್ನು ಮತ್ತು ಮಹಾತ್ಮೆಗಳನ್ನು ಹೊಂದಿದ ಪರಿಪಾವನನು." [59]

## 18. ರುಕೂಅ್‌ನಿಂದ ಎದ್ದೇಳುವಾಗ

**38- « سَمِعَ اللَّهُ لِمَنْ حَمِدَهُ »**

38.(ಸಮಿಅಲ್ಲಾಹು ಲಿಮನ್ ಹಮಿದಹ್)

"ಸ್ತುತಿಸಿದವನ ಮಾತನ್ನು ಅಲ್ಲಾಹು ಆಲಿಸಲಿ." [60]

**39- «رَبَّنَا وَلَكَ الْحَمْدُ حَمْدًا كَثِيرًا طَيِّبًا مُبَارَكًا فِيهِ»**

39.(ರಬ್ಬನಾ ವಲಕಲ್ ಹಮ್ದು ಹಮ್ದನ್ ತಯ್ಯಿಬನ್ ಮುಬಾರಕನ್ ಫೀಹ್)

"ನಮ್ಮ ರಬ್ಬೇ! ಮತ್ತು ನಿನಗೆ ಸ್ತುತಿ, ಅಧಿಕವಾದ, ಉತ್ತಮವಾದ, ಅನುಗ್ರಹೀತವಾದ ಸ್ತುತಿ." [61]

**40- «مِلْءَ السَّمَاوَاتِ وَمِلْءَ الْأَرْضِ، وَمَا بَيْنَهُمَا، وَمِلْءَ مَا شِئْتَ مِنْ شَيْءٍ بَعْدُ، أَهْلَ الثَّنَاءِ وَالْمَجْدِ، أَحَقُّ مَا قَالَ الْعَبْدُ، وَكُلُّنَا لَكَ عَبْدٌ،**

---

[59] ಅಬೂದಾವೂದ್ 1/230, ಅನ್ನಸಾಈ ಮತ್ತು ಅಹ್ಮದ್ ಹಸನ್ ಆದ ಸನದ್‌ನ ಮೂಲಕ.

[60] ಅಲ್‌ಬುಖಾರಿ (ನೋಡಿ: ಫತ್‌ಹುಲ್ ಬಾರಿ 2/282)

[61] ಅಲ್‌ಬುಖಾರಿ (ನೋಡಿ: ಫತ್‌ಹುಲ್ ಬಾರಿ 2/284)

اللَّهُمَّ لَا مَانِعَ لِمَا أَعْطَيْتَ، وَلَا مُعْطِيَ لِمَا مَنَعْتَ، وَلَا يَنْفَعُ ذَا الْجَدِّ مِنْكَ الْجَدُّ»

40. (ಮಿಲ್‌ಅ ಸ್ಸಮಾವಾತಿ ವಮಿಲ್‌ಅಲ್ ಅರ್‌ದಿ, ವಮಾ ಬೈನಹುಮಾ, ವಮಿಲ್‌ಅ ಮಾ ಶಿಅ್‌ತ ಮಿನ್ ಶೈಇನ್ ಬಅ್‌ದು, ಅಹ್ಲ ಸ್ಸನಾಇ ವಲ್ ಮಜ್‌ದಿ, ಅಹಕ್ಕು ಮಾ ಕಾಲಲ್ ಅಬ್ದು, ವಕುಲ್ಲುನಾ ಲಕ ಅಬ್ದುನ್, ಅಲ್ಲಾಹುಮ್ಮ ಲಾ ಮಾನಿಅ ಲಿಮಾ ಅಅ್‌ತಯ್ತ, ವಲಾ ಮುಅ್‌ತಿಯ ಲಿಮಾ ಮನಅ್‌ತ, ವಲಾ ಯನ್‌ಫಉ ದಲ್ ಜದ್ದಿ ಮಿನ್ಕಲ್ ಜದ್ದ್)

**“**ಆಕಾಶಗಳು ತುಂಬುವಷ್ಟು, ಭೂಮಿ ತುಂಬುವಷ್ಟು ಮತ್ತು ನೀನು ಇಚ್ಛಿಸುವ ಪ್ರತಿಯೊಂದು ವಸ್ತು ತುಂಬುವಷ್ಟು ನಿನಗೆ ಸ್ತುತಿ. ಸ್ತುತಿ ಪ್ರಶಂಸೆಗಳ ಒಡೆಯನೇ! ದಾಸನು ಹೇಳಲು ಇದು ಅತ್ಯಂತ ಅರ್ಹವಾಗಿದೆ ಮತ್ತು ನಾವೆಲ್ಲರೂ ನಿನಗೆ ದಾಸರಾಗಿದ್ದೇವೆ. ಓ ಅಲ್ಲಾಹ್! ನೀನು ನೀಡಿದ್ದನ್ನು ತಡೆಯುವವರಿಲ್ಲ, ನೀನು ತಡೆದುದನ್ನು ನೀಡುವವರಿಲ್ಲ ಮತ್ತು ಸಿರಿವಂತನ ಯಾವುದೇ ಸಂಪತ್ತು ನಿನ್ನ ವಿರುದ್ಧ ಪ್ರಯೋಜನ ನೀಡದು.**”** [62]

## 19. ಸುಜೂದ್‌ನಲ್ಲಿ

**41–** «سُبْحَانَ رَبِّيَ الْأَعْلَى»

41. (ಸುಬ್‌ಹಾನ ರಬ್ಬಿಯಲ್ ಅಅ್‌ಲಾ) (ಮೂರು ಸಲ)

[62] ಮುಸ್ಲಿಮ್ 1/346

“ಮಹೋನ್ನತನಾದ ನನ್ನ ರಬ್ಬ್‌ನ ಪರಿಪಾವನತೆಯನ್ನು ಕೊಂಡಾಡುತ್ತೇನೆ.” [63]

42– «سُبْحَانَكَ اللَّهُمَّ رَبَّنَا وَبِحَمْدِكَ، اللَّهُمَّ اغْفِرْ لِي»

42. (ಸುಬ್‌ಹಾನಕಲ್ಲಾಹುಮ್ಮ ರಬ್ಬನಾ ವಬಿಹಮ್ದಿಕ, ಅಲ್ಲಾಹುಮ್ಮಗ್‌ಫಿರ್ ಲೀ)

“ಓ ಅಲ್ಲಾಹ್! ನಮ್ಮ ರಬ್ಬೇ! ನಿನ್ನ ಸ್ತುತಿಯೊಂದಿಗೆ ನಿನ್ನ ಪರಿಪಾವನತೆಯನ್ನು ಕೊಂಡಾಡುತ್ತೇನೆ. ಓ ಅಲ್ಲಾಹ್! ನನಗೆ ಕ್ಷಮೆ ನೀಡು.” 64

43– «سُبُّوحٌ قُدُّوسٌ رَبُّ الْمَلَائِكَةِ وَالرُّوحِ»

43.(ಸುಬ್ಬೂಹುನ್ ಕುದ್ದೂಸುನ್ ರಬ್ಬುಲ್ ಮಲಾಇಕತಿ ವರ್ರೂಹ್)

“ಪರಿಪಾವನನು, ಪವಿತ್ರನು, ಮಲಕ್‌ಗಳ ಮತ್ತು ರೂಹ್(ಜಿಬ್ರೀಲ್)ನ ರಬ್ಬ್.” [65]

44– «اللَّهُمَّ لَكَ سَجَدْتُ، وَبِكَ آمَنْتُ، وَلَكَ أَسْلَمْتُ، سَجَدَ وَجْهِي لِلَّذِي خَلَقَهُ وَصَوَّرَهُ، وَشَقَّ سَمْعَهُ وَبَصَرَهُ، تَبَارَكَ اللَّهُ أَحْسَنُ الْخَالِقِينَ»

---

[63] ಅಲ್‌ಬುಖಾರಿ, ಮುಸ್ಲಿಮ್, ಅಬೂದಾವೂದ್, ಅತ್ತಿರ್ಮಿದಿ, ಇಬ್ನ್ ಮಾಜ, ಅನ್ನಸಾಈ, ಅಹ್ಮದ್. ನೋಡಿ ಸಹೀಹು ತ್ತಿರ್ಮಿದಿ 1/83

[64] ಅಲ್‌ಬುಖಾರಿ 1/99 ಮುಸ್ಲಿಮ್ 1/350.

[65] ಮುಸ್ಲಿಮ್ 1/533, ಅಬೂದಾವೂದ್ 1/230

44.(ಅಲ್ಲಾಹುಮ್ಮ ಲಕ ಸಜದ್ತು, ವಬಿಕ ಆಮನ್ತು, ವಲಕ ಅಸ್ಲಮ್ತು, ಸಜದ ವಜ್‌ಹೀ ಲಿಲ್ಲದೀ ಖಲಕಹೂ ವಸವ್ವರಹೂ, ವಶಕ್ಕ ಸಮ್‌ಅಹೂ ವಬಸರಹೂ, ತಬಾರಕಲ್ಲಾಹು ಅಹ್ಸನುಲ್ ಖಾಲಿಕೀನ್)

"ಓ ಅಲ್ಲಾಹ್! ನಾನು ನಿನಗೆ ಸಾಷ್ಟಾಂಗವೆರಗಿದ್ದೇನೆ, ನಿನ್ನ ಮೇಲೆ ವಿಶ್ವಾಸವಿರಿಸಿದ್ದೇನೆ, ನಿನಗೆ ಶರಣಾಗಿದ್ದೇನೆ, ನನ್ನ ಮುಖವು ಅದನ್ನು ಸೃಷ್ಟಿಸಿದ, ಅದಕ್ಕೆ ರೂಪವನ್ನು ನೀಡಿದ, ಅದರಲ್ಲಿ ಶ್ರವಣ ಮತ್ತು ದೃಷ್ಟಿಯನ್ನು ನಿರ್ಮಿಸಿದವನಿಗೆ ಸಾಷ್ಟಾಂಗವೆರಗಿದೆ. ಅತ್ಯಂತ ಸುಂದರವಾಗಿ ಸೃಷ್ಟಿಸುವ ಅಲ್ಲಾಹು ಅನುಗ್ರಹೀತನು." [66]

**45- «سُبْحَانَ ذِي الْجَبَرُوتِ وَالْمَلَكُوتِ وَالْكِبْرِيَاءِ وَالْعَظَمَةِ»**

45.(ಸುಬ್‌ಹಾನ ದಿಲ್ ಜಬರೂತಿ ವಲ್ ಮಲಕೂತಿ ವಲ್ ಕಿಬ್ರಿಯಾಇ ವಲ್ ಅದಮಃ)

"ಪ್ರತಾಪಗಳನ್ನು, ಆಧಿಪತ್ಯಗಳನ್ನು, ಅಹಂಭಾವಗಳನ್ನು ಮತ್ತು ಮಹಾತ್ಮೆಗಳನ್ನು ಹೊಂದಿದ ಪರಿಪಾವನನು." [67]

**46- «اللَّهُمَّ اغْفِرْ لِي ذَنْبِي كُلَّهُ دِقَّهُ وَجِلَّهُ، وَأَوَّلَهُ وَآخِرَهُ، وَعَلَانِيَتَهُ وَسِرَّهُ»**

---

[66] ಮುಸ್ಲಿಮ್ 1/534 ಮತ್ತಿತರರು.

[67] ಅಬೂದಾವೂದ್ 1/230, ಅಹ್ಮದ್ ಮತ್ತು ಅನ್ನಸಾಈ. ಸಹೀಹ್ ಅಬೀದಾವೂದ್ 1/166 ನಲ್ಲಿ ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.

46.(ಅಲ್ಲಾಹುಮ್ಮಗ್‌ಫಿರ್ ಲೀ ದಮ್ಬೀ ಕುಲ್ಲಹೂ ದಿಕ್ಕಹೂ ವಜಿಲ್ಲಹೂ, ವಅವ್ವಲಹೂ ವಆಖಿರಹೂ, ವಅಲಾನಿಯತಹೂ ವಸಿರ್ರಹ್)

"ಓ ಅಲ್ಲಾಹ್! ಚಿಕ್ಕದೂ ದೊಡ್ಡದೂ, ಮೊದಲನೆಯದೂ, ಕೊನೆಯದೂ, ಪ್ರತ್ಯಕ್ಷವೂ ಪರೋಕ್ಷವೂ ಆದ ನನ್ನ ಪಾಪಗಳೆಲ್ಲವನ್ನೂ ಕ್ಷಮಿಸು." [68]

**47– «اللَّهُمَّ إِنِّي أَعُوذُ بِرِضَاكَ مِنْ سَخَطِكَ، وَبِمُعَافَاتِكَ مِنْ عُقُوبَتِكَ، أَعُوذُ بِكَ مِنْكَ، لَا أُحْصِي ثَنَاءً عَلَيْكَ، أَنْتَ كَمَا أَثْنَيْتَ عَلَى نَفْسِكَ»**

47.(ಅಲ್ಲಾಹುಮ್ಮ ಇನ್ನೀ ಅಊದು ಬಿರಿದಾಕ ಮಿನ್ ಸಖತಿಕ, ವಬಿಮುಆಫಾತಿಕ ಮಿನ್ ಉಕೂಬತಿಕ, ವಅಊದು ಬಿಕ ಮಿನ್ಕ, ಲಾ ಉಹ್ಸೀ ಸನಾಅನ್ ಅಲೈಕ, ಅನ್ತ ಕಮಾ ಅಸ್ನೈತ ಅಲಾ ನಫ್ಸಿಕ್)

"ಓ ಅಲ್ಲಾಹ್! ನಿನ್ನ ಕ್ರೋಧಕ್ಕೆದುರಾಗಿ ನಿನ್ನ ತೃಪ್ತಿಯೊಂದಿಗೆ, ನಿನ್ನ ಶಿಕ್ಷೆಗೆದುರಾಗಿ ನಿನ್ನ ಕ್ಷಮೆಯೊಂದಿಗೆ ನಾನು ರಕ್ಷೆ ಬೇಡುತ್ತೇನೆ. ನಿನಗೆದುರಾಗಿ ನಿನ್ನೊಂದಿಗೆ ನಾನು ರಕ್ಷೆ ಬೇಡುತ್ತೇನೆ. ನೀನು ನಿನ್ನನ್ನು ಸ್ವತಃ ಪ್ರಶಂಸಿಸಿದಂತೆ ನಿನ್ನನ್ನು ಪ್ರಶಂಸಿಸುವುದು ನನಗೆ ಅಸಾಧ್ಯ." [69]

## 20. ಎರಡು ಸುಜೂದ್‌ಗಳ ಮಧ್ಯೆ

---

[68] ಮುಸ್ಲಿಮ್ 1/350

[69] ಮುಸ್ಲಿಮ್ 1/532

48- «رَبِّ اغْفِرْ لِي رَبِّ اغْفِرْ لِي»

48.(ರಬ್ಬಿಗ್‌ಫಿರ್ ಲೀ, ರಬ್ಬಿಗ್‌ಫಿರ್ ಲೀ)

“ನನ್ನ ರಬ್ಬೇ! ನನ್ನನ್ನು ಕ್ಷಮಿಸು, ನನ್ನ ರಬ್ಬೇ! ನನ್ನನ್ನು ಕ್ಷಮಿಸು.” [70]

49- «اللَّهُمَّ اغْفِرْ لِي وَارْحَمْنِي وَاهْدِنِي وَاجْبُرْنِي وَعَافِنِي وَارْزُقْنِي وَارْفَعْنِي»

49.(ಅಲ್ಲಾಹುಮ್ಮಗ್‌ಫಿರ್ ಲೀ ವರ್ಹಮ್‌ನೀ ವಹ್ದಿನೀ ವಜ್‌ಬುರ್‌ನೀ ವಆಫಿನೀ ವರ್ಝುಕ್‌ನೀ ವರ್‌ಫಅ್‌ನೀ)

“ಓ ಅಲ್ಲಾಹ್! ನನ್ನನ್ನು ಕ್ಷಮಿಸು, ನನಗೆ ಕರುಣೆತೋರು, ನನಗೆ ಮಾರ್ಗದರ್ಶನ ಮಾಡು, ನನಗೆ ಸೌಖ್ಯ ನೀಡು, ನನಗೆ ಅನ್ನಾಧಾರವನ್ನು ನೀಡು ಮತ್ತು ನನ್ನ ಪದವಿಯನ್ನು ಏರಿಸು.” [71]

## 21. ತಿಲಾವತ್ತಿನ ಸುಜೂದ್‌ನಲ್ಲಿ

50- «سَجَدَ وَجْهِي لِلَّذِي خَلَقَهُ وَشَقَّ سَمْعَهُ وَبَصَرَهُ بِحَوْلِهِ وَقُوَّتِهِ [فَتَبَارَكَ اللَّهُ أَحْسَنُ الْخَالِقِينَ]»

[70] ಅಬೂದಾವೂದ್ 1/231. ನೋಡಿ: ಸಹೀಹ್ ಇಬ್ನ್ ಮಾಜ 1/148

[71] ಅಲ್‌ಬುಖಾರಿ, ಮುಸ್ಲಿಮ್, ಅಬೂದಾವೂದ್, ಅತ್ತಿರ್ಮಿದಿ, ಇಬ್ನ್ ಮಾಜ. ನೋಡಿ: ಸಹೀಹು ತ್ತಿರ್ಮಿದಿ 1/90 ಮತ್ತು ಸಹೀಹ್ ಇಬ್ನ್ ಮಾಜ 1/148

50.(ಸಜದ ವಜ್‌ಹೀ ಲಿಲ್ಲದೀ ಖಲಕಹೂ ವಶಕ್ಕ ಸಮ್‌ಅಹೂ ವಬಸರಹೂ ಬಿಹೌಲಿಹೀ ವಕುವ್ವತಿಹೀ ಫತಬಾರಕಲ್ಲಾಹು ಅಹ್ಸನುಲ್ ಖಾಲಿಕೀನ್)

“ತನ್ನ ಶಕ್ತಿ ಮತ್ತು ಸಾಮರ್ಥ್ಯದಿಂದ ನನ್ನ ಮುಖವನ್ನು ಸೃಷ್ಟಿಸಿದ, ಅದರಲ್ಲಿ ಕಿವಿ ಮತ್ತು ಕಣ್ಣನ್ನು ಉಂಟುಮಾಡಿದವನಿಗೆ ಅದು ಸುಜೂದ್ ಮಾಡಿದೆ. ಆದ್ದರಿಂದ ಅತ್ಯಂತ ಸುಂದರವಾಗಿ ಸೃಷ್ಟಿಸುವ ಅಲ್ಲಾಹು ಅನುಗ್ರಹಪೂರ್ಣನು.” [72]

**51– «اللَّهُمَّ اكْتُبْ لِي بِهَا عِنْدَكَ أَجْرًا وَضَعْ عَنِّي بِهَا وِزْرًا وَاجْعَلْهَا لِي عِنْدَكَ ذُخْرًا وَتَقَبَّلْهَا مِنِّي كَمَا تَقَبَّلْتَهَا مِنْ عَبْدِكَ دَاوُدَ»**

51. (ಅಲ್ಲಾಹುಮ್ಮಕ್ತುಬ್ ಲೀ ಬಿಹಾ ಇನ್ದಕ ಅಜ್ರನ್ ವದಅ್ ಅನ್ನೀ ಬಿಹಾ ವಿಝ್ರನ್ ವಜ್‌ಅಲ್‌ಹಾ ಲೀ ಇನ್ದಕ ದುಖ್ರನ್ ವತಕಬ್ಬಲ್‌ಹಾ ಮಿನ್ನೀ ಕಮಾ ತಕಬ್ಬಲ್ತಹಾ ಮಿನ್ ಅಬ್ದಿಕ ದಾವೂದ್)

“ಓ ಅಲ್ಲಾಹ್! ಇದನ್ನು (ಸುಜೂದನ್ನು) ನಿನ್ನ ಬಳಿ (ನನಗಿರುವ) ಪ್ರತಿಫಲವಾಗಿ ದಾಖಲಿಸು. ಇದರಿಂದಾಗಿ ನನ್ನ ಭಾರವನ್ನು ಇಳಿಸು. ಇದನ್ನು ನಿನ್ನ ಬಳಿ ನನಗಾಗಿರುವ ನಿಧಿಯನ್ನಾಗಿಸು. ನಿನ್ನ ದಾಸನಾದ ದಾವೂದ್‌ರಿಂದ ನೀನಿದನ್ನು ಸ್ವೀಕರಿಸಿದಂತೆ ನನ್ನಿಂದ ಇದನ್ನು ಸ್ವೀಕರಿಸು.” [73]

---

[72] ಅತ್ತಿರ್ಮಿದಿ 2/474, ಅಹ್ಮದ್ 6/30 ಮತ್ತು ಅಲ್‌ಹಾಕಿಮ್. ಅಲ್‌ಹಾಕಿಮ್ ಇದನ್ನು ಸಹೀಹ್ ಎಂದಿದ್ದಾರೆ ಮತ್ತು ಅದ್ದಹಬೀ (1/220) ಒಪ್ಪಿಕೊಂಡಿದ್ದಾರೆ. ಹೆಚ್ಚುವರಿ ಅವರ ವರದಿಯಲ್ಲಿರುವುದು.

[73] ಅತ್ತಿರ್ಮಿದಿ 2/473 ಮತ್ತು ಅಲ್‌ಹಾಕಿಮ್. ಅಲ್‌ಹಾಕಿಮ್ ಇದನ್ನು ಸಹೀಹ್ ಎಂದಿದ್ದಾರೆ ಮತ್ತು ಅದ್ದಹಬೀ (1/219) ಒಪ್ಪಿಕೊಂಡಿದ್ದಾರೆ.

# 22. ತಶಹ್ಹುದ್‌ನಲ್ಲಿ

**52- «التَّحِيَّاتُ لِلَّهِ، وَالصَّلَوَاتُ وَالطَّيِّبَاتُ، السَّلَامُ عَلَيْكَ أَيُّهَا النَّبِيُّ وَرَحْمَةُ اللَّهِ وَبَرَكَاتُهُ، السَّلَامُ عَلَيْنَا، وَعَلَى عِبَادِ اللَّهِ الصَّالِحِينَ، أَشْهَدُ أَنْ لَا إِلَهَ إِلَّا اللَّهُ، وَأَشْهَدُ أَنَّ مُحَمَّدًا عَبْدُهُ وَرَسُولُهُ»**

52.(ಅತ್ತಹಿಯ್ಯಾತು ಲಿಲ್ಲಾಹಿ, ವಸ್ಸಲವಾತು ವತ್ತಯ್ಯಿಬಾತು, ಅಸ್ಸಲಾಮು ಅಲೈಕ ಅಯ್ಯುಹ ನ್ನಬಿಯ್ಯು ವರಹ್ಮತುಲ್ಲಾಹಿ ವಬರಕಾತುಹು, ಅಸ್ಸಲಾಮು ಅಲೈನಾ, ವಅಲಾ ಇಬಾದಿಲ್ಲಾಹಿ ಸ್ಸಾಲಿಹೀನ, ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು, ವಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವರಸೂಲುಹ್)

"ಅಭಿವಂದನೆಗಳು, ಪ್ರಾರ್ಥನೆಗಳು ಮತ್ತು ಸತ್ಕರ್ಮಗಳೆಲ್ಲವೂ ಅಲ್ಲಾಹನಿಗೆ. ಓ ಪ್ರವಾದಿಯವರೇ! ತಮ್ಮ ಮೇಲೆ ಅಲ್ಲಾಹನ ಶಾಂತಿ, ಕರುಣೆ ಮತ್ತು ಅನುಗ್ರಹಗಳು ಸದಾ ಇರಲಿ. ನಮ್ಮ ಮೇಲೆ ಮತ್ತು ಅಲ್ಲಾಹನ ಸಜ್ಜನರಾದ ದಾಸರ ಮೇಲೆ ಶಾಂತಿಯಿರಲಿ. ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ, ಮತ್ತು ಮುಹಮ್ಮದ್ ಅವನ ದಾಸನೂ ಸಂದೇಶವಾಹಕನೂ ಆಗಿರುವರೆಂದು ನಾನು ಸಾಕ್ಷ್ಯವಹಿಸುತ್ತೇನೆ" [74]

# 23. ತಶಹ್ಹುದ್‌ನ ನಂತರ ಪ್ರವಾದಿ(ﷺ)ರವರ ಮೇಲೆ ಸಲಾತ್

[74] ಅಲ್‌ಬುಖಾರಿ (ನೋಡಿ: ಫತ್‌ಹುಲ್ ಬಾರಿ 2/311) ಮುಸ್ಲಿಮ್ 1/301

53- «اللَّهُمَّ صَلِّ عَلَى مُحَمَّدٍ وَعَلَى آلِ مُحَمَّدٍ كَمَا صَلَّيْتَ عَلَى إِبْرَاهِيمَ وَعَلَى آلِ إِبْرَاهِيمَ إِنَّكَ حَمِيدٌ مَجِيدٌ، اللَّهُمَّ بَارِكْ عَلَى مُحَمَّدٍ وَعَلَى آلِ مُحَمَّدٍ كَمَا بَارَكْتَ عَلَى إِبْرَاهِيمَ وَعَلَى آلِ إِبْرَاهِيمَ إِنَّكَ حَمِيدٌ مَجِيدٌ»

53.(ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್, ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್ರಾಹೀಮ ವಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್)

**“**ಓ ಅಲ್ಲಾಹ್! ನೀನು ಇಬ್ರಾಹೀಮ್‌ರವರ ಮೇಲೆ ಮತ್ತು ಅವರ ಕುಟುಂಬದ ಮೇಲೆ ಕೃಪೆ ವರ್ಷಿಸಿದಂತೆ ಮುಹಮ್ಮದ್‌ರವರ ಮೇಲೆ ಮತ್ತು ಅವರ ಕುಟುಂಬದ ಮೇಲೆ ಕೃಪೆ ವರ್ಷಿಸು. ಖಂಡಿತವಾಗಿಯೂ ನೀನು ಸ್ತುತ್ಯರ್ಹನೂ ಪ್ರಶಂಸನೀಯನೂ ಆಗಿರುವೆ. ಓ ಅಲ್ಲಾಹ್! ನೀನು ಇಬ್ರಾಹೀಮ್‌ರವರ ಮೇಲೆ ಮತ್ತು ಅವರ ಕುಟುಂಬದ ಮೇಲೆ ಬರಕತ್ ಸುರಿಸಿದಂತೆ ಮುಹಮ್ಮದ್‌ರವರ ಮೇಲೆ ಮತ್ತು ಅವರ ಕುಟುಂಬದ ಮೇಲೆ ಬರಕತ್ ಸುರಿಸು. ಖಂಡಿತವಾಗಿಯೂ ನೀನು ಸ್ತುತ್ಯರ್ಹನೂ ಪ್ರಶಂಸನೀಯನೂ ಆಗಿರುವೆ.**”** [75]

[75] ಅಲ್‌ಬುಖಾರಿ (ನೋಡಿ: ಫತ್‌ಹುಲ್ ಬಾರಿ 6/408)

**54– «اللَّهُمَّ صَلِّ عَلَى مُحَمَّدٍ وَعَلَى أَزْوَاجِهِ وَذُرِّيَّتِهِ كَمَا صَلَّيْتَ عَلَى آلِ إِبْرَاهِيمَ، وَبَارِكْ عَلَى مُحَمَّدٍ وَعَلَى أَزْوَاجِهِ وَذُرِّيَّتِهِ كَمَا بَارَكْتَ عَلَى آلِ إِبْرَاهِيمَ، إِنَّكَ حَمِيدٌ مَجِيدٌ»**

54.(ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವಅಲಾ ಅಝ್ವಾಜಿಹೀ ವದುರ್ರಿಯ್ಯತಿಹೀ ಕಮಾ ಸಲ್ಲೈತ ಅಲಾ ಆಲಿ ಇಬ್ರಾಹೀಮ, ವಬಾರಿಕ್ ಅಲಾ ಮುಹಮ್ಮದಿನ್ ವಅಲಾ ಅಝ್ವಾಜಿಹೀ ವದುರ್ರಿಯ್ಯತಿಹೀ ಕಮಾ ಬಾರಕ್ತ ಅಲಾ ಆಲಿ ಇಬ್ರಾಹೀಮ, ಇನ್ನಕ ಹಮೀದುನ್ ಮಜೀದ್)

"ಓ ಅಲ್ಲಾಹ್! ನೀನು ಇಬ್ರಾಹೀಮ್‌ರವರ ಕುಟುಂಬದ ಮೇಲೆ ಕೃಪೆ ವರ್ಷಿಸಿದಂತೆ ಮುಹಮ್ಮದ್‌ರವರ ಮೇಲೆ ಮತ್ತು ಅವರ ಪತ್ನಿಯರ ಹಾಗೂ ಸಂತಾನದ ಮೇಲೆ ಕೃಪೆ ವರ್ಷಿಸು. ಮತ್ತು ನೀನು ಇಬ್ರಾಹೀಮ್‌ರವರ ಕುಟುಂಬದ ಮೇಲೆ ಬರಕತ್ ಸುರಿಸಿದಂತೆ ಮುಹಮ್ಮದ್‌ರವರ ಮೇಲೆ ಮತ್ತು ಅವರ ಪತ್ನಿಯರ ಹಾಗೂ ಸಂತಾನದ ಮೇಲೆ ಬರಕತ್ ಸುರಿಸು. ಖಂಡಿತವಾಗಿಯೂ ನೀನು ಸ್ತುತ್ಯರ್ಹನೂ ಪ್ರಶಂಸನೀಯನೂ ಆಗಿರುವೆ." [76]

## 24. ತಶಹ್ಹುದ್‌ನ ನಂತರ ಸಲಾಮ್‌ಗೆ ಮುಂಚೆ

[76] ಅಲ್‌ಬುಖಾರಿ (ನೋಡಿ: ಫತ್‌ಹುಲ್ ಬಾರಿ 6/407), ಮುಸ್ಲಿಮ್ 1/306. ಇದು ಮುಸ್ಲಿಮ್‌ರ ವರದಿ.

55- « اللَّهُمَّ إِنِّي أَعُوذُ بِكَ مِنْ عَذَابِ الْقَبْرِ، وَمِنْ عَذَابِ جَهَنَّمَ، وَمِنْ فِتْنَةِ الْمَحْيَا وَالْمَمَاتِ، وَمِنْ شَرِّ فِتْنَةِ الْمَسِيحِ الدَّجَّالِ»

55.(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಅದಾಬಿಲ್ ಕಬ್ರಿ, ವಮಿನ್ ಅದಾಬಿ ಜಹನ್ನಮ, ವಮಿನ್ ಫಿತ್ನತಿಲ್ ಮಹ್ಯಾ ವಲ್ ಮಮಾತಿ, ವಮಿನ್ ಶರ್ರಿ ಫಿತ್ನತಿಲ್ ಮಸೀಹಿ ದ್ದಜ್ಜಾಲ್)

"ಓ ಅಲ್ಲಾಹ್! ಗೋರಿಯ ಶಿಕ್ಷೆಯಿಂದ, ನರಕದ ಶಿಕ್ಷೆಯಿಂದ, ಜೀವನದ ಮತ್ತು ಮರಣದ ಪರೀಕ್ಷೆಯಿಂದ ಮತ್ತು ಮಸೀಹು ದ್ದಜ್ಜಾಲ್‌ನ ಪರೀಕ್ಷೆಯ ಕೆಡುಕಿನಿಂದ ನಾನು ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ." [77]

56- «اللَّهُمَّ إِنِّي أَعُوذُ بِكَ مِنْ عَذَابِ الْقَبْرِ، وَأَعُوذُ بِكَ مِنْ فِتْنَةِ الْمَسِيحِ الدَّجَّالِ، وَأَعُوذُ بِكَ مِنْ فِتْنَةِ الْمَحْيَا وَفِتْنَةِ الْمَمَاتِ، اللَّهُمَّ إِنِّي أَعُوذُ بِكَ مِنَ الْمَأْثَمِ وَالْمَغْرَمِ»

56.(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಅದಾಬಿಲ್ ಕಬ್ರಿ, ವಅಊದು ಬಿಕ ಮಿನ್ ಫಿತ್ನತಿಲ್ ಮಸೀಹಿ ದ್ದಜ್ಜಾಲಿ, ವಅಊದು ಬಿಕ ಮಿನ್ ಫಿತ್ನತಿಲ್ ಮಹ್ಯಾ ವಫಿತ್ನತಿಲ್ ಮಮಾತಿ, ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಮಅ್‌ಸಮಿ ವಲ್ ಮಗ್ರಮ್)

"ಓ ಅಲ್ಲಾಹ್! ಗೋರಿ ಶಿಕ್ಷೆಯಿಂದ ನಾನು ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ, ಮಸೀಹು ದ್ದಜ್ಜಾಲ್‌ನ ಪರೀಕ್ಷೆಯಿಂದ ನಾನು

[77] ಅಲ್‌ಬುಖಾರಿ 2/102 ಮುಸ್ಲಿಮ್ 1/412. ಇದು ಮುಸ್ಲಿಮ್‌ರ ವರದಿ

ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ, ಜೀವನದ ಪರೀಕ್ಷೆಯಿಂದ ಮತ್ತು ಮರಣದ ಪರೀಕ್ಷೆಯಿಂದ ನಾನು ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ, ಓ ಅಲ್ಲಾಹ್! ಪಾಪಕಾರ್ಯಗಳಿಂದ ಮತ್ತು ಋಣಭಾರದಿಂದ ನಾನು ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ.” [78]

“ನಿನ್ನ ಪರಿಪಾವನತೆಯನ್ನು ನಾನು ಕೊಂಡಾಡುತ್ತೇನೆ. ಓ ಅಲ್ಲಾಹ್! ನಿನ್ನ ಸ್ತುತಿಯೊಂದಿಗೆ. ನಿನ್ನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ. ನಿನ್ನೊಂದಿಗೆ ಕ್ಷಮೆಯನ್ನು ಬೇಡುತ್ತಿದ್ದೇನೆ ಮತ್ತು ನಿನ್ನೆಡೆಗೆ ಪಶ್ಚಾತ್ತಾಪದೊಂದಿಗೆ ಮರಳುತ್ತಿದ್ದೇನೆ.” [226]

## 86. ಅಲ್ಲಾಹು ನಿನ್ನನ್ನು ಕ್ಷಮಿಸಲಿ ಎಂದು ಯಾರಾದರೂ ಹೇಳಿದರೆ

197– «وَلَكَ»

197. (ವಲಕ)

“ಅಲ್ಲಾಹು ನಿನನ್ನೂ ಕ್ಷಮಿಸಲಿ.” [227]

---

226 ಅತ್ತಿರ್ಮಿದಿ; ಅಬೂದಾವೂದ್; ಇಬ್ನ್ ಮಾಜ; ಅನ್ನಸಾಈ. ನೋಡಿ: ಸಹೀಹು ತ್ತಿರ್ಮಿದಿ 2/153. ಆಯಿಶಾ(ರ) ಹೇಳುತ್ತಾರೆ: ಪ್ರವಾದಿ(ಸ)ರವರು ಯಾವುದೇ ಒಂದು ಸಭೆಯಿಂದ ಎದ್ದೇಳುವಾಗ, ಕುರ್‌ಆನ್ ಪಾರಾಯಣ ಮಾಡಿ ಏಳುವಾಗ; ಅಥವಾ ನಮಾಝ್ ಮಾಡಿ ಏಳುವಾಗ ಇದನ್ನು ಹೇಳುತ್ತಿದ್ದರು. ಅನ್ನಸಾಈ ಅಮಲುಲ್ ಯೌಮಿ ವಲ್ಲೈಲಃದಲ್ಲಿ (308); ಅಹ್ಮದ್ 6/77. ಡಾ। ಫಾರೂಕ್ ಹಮಾದಃ ಅನ್ನಸಾಈಯವರ ಅಮಲುಲ್ ಯೌಮಿ ವಲ್ಲೈಲಃದ ಪರಿಶೀಲನೆಯಲ್ಲಿ ಇದನ್ನು ಸಹೀಹ್ ಎಂದಿದ್ದಾರೆ (ಪುಟ 273).

227 ಅಹ್ಮದ್ 5/82; ಅನ್ನಸಾಈ ಅಮಲುಲ್ ಯೌಮಿ ವಲ್ಲೈಲಃದಲ್ಲಿ (ಪುಟ 218).

# 87. ಯಾರಾದರೂ ಒಂದು ಉಪಕಾರ ಮಾಡಿದರೆ

198– «جَزَاكَ اللَّهُ خَيْرًا»

198. (ಜಝಾಕಲ್ಲಾಹು ಖೈರನ್)

"ಅಲ್ಲಾಹು ನಿನಗೆ ಉತ್ತಮವಾದುದನ್ನು ಪ್ರತಿಫಲವಾಗಿ ನೀಡಲಿ." [228]

# 88. ದಜ್ಜಾಲ್‌ನಿಂದ ಸಂರಕ್ಷಣೆ ಪಡೆಯಲು

199– « مَنْ حَفِظَ عَشْرَ آيَاتٍ مِنْ أَوَّلِ سُورَةِ الْكَهْفِ عُصِمَ مِنَ الدَّجَّالِ »

199. "ಸೂರಃ ಅಲ್‌ಕಹ್ಫ್‌ನ ಮೊದಲ ಹತ್ತು ಆಯತ್‌ಗಳನ್ನು ಯಾರಾದರೂ ಕಂಠಪಾಠ ಮಾಡಿದರೆ ಅವನನ್ನು ದಜ್ಜಾಲ್‌ನಿಂದ ಸಂರಕ್ಷಿಸಲಾಗುವುದು." [229]

ಎಲ್ಲ ನಮಾಝ್‌ಗಳಲ್ಲೂ ಕೊನೆಯ ತಶಹ್ಹುದಿನ ಬಳಿಕ ಅಲ್ಲಾಹನೊಂದಿಗೆ ದಜ್ಜಾಲ್‌ನ ಪರೀಕ್ಷೆಯಿಂದ ಸಂರಕ್ಷಣೆ ಬೇಡುವುದು. [230]

---

[228] ಅತ್ತಿರ್ಮಿದಿ 2035. ನೋಡಿ: ಸಹೀಹು ತ್ತಿರ್ಮಿದಿ 2/200

[229] ಮುಸ್ಲಿಮ್ 1/555. ಇನ್ನೊಂದು ವರದಿಯಲ್ಲಿ ಕೊನೆಯ ಹತ್ತು ಆಯತ್‌ಗಳು ಎಂದಿದೆ. 1/556

[230] ಈ ಪುಸ್ತಕದ 55 ಮತ್ತು 56ನೇ ಸಂಖ್ಯೆಯ ಪ್ರಾರ್ಥನೆ ನೋಡಿ.

# 89. ಅಲ್ಲಾಹನಿಗೋಸ್ಕರ ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ಯಾರಾದರೂ ಹೇಳಿದರೆ

200– «أَحَبَّكَ الَّذِي أَحْبَبْتَنِي لَهُ»

200. (ಅಹಬ್ಬಕಲ್ಲದೀ ಅಹ್ಬಬ್ತನೀ ಲಹ್)

"ನೀನು ಯಾರಿಗೋಸ್ಕರ ನನ್ನನ್ನು ಪ್ರೀತಿಸಿದ್ದೀಯೋ ಅವನೂ ನಿನ್ನನ್ನು ಪ್ರೀತಿಸಲಿ." [231]

# 90. ಯಾರಾದರೂ ನಿಮಗೆ ಹಣ ಕೊಟ್ಟರೆ

201– «بَارَكَ اللَّهُ لَكَ فِي أَهْلِكَ وَمَالِكَ»

201. (ಬಾರಕಲ್ಲಾಹು ಲಕ ಫೀ ಅಹ್ಲಿಕ ವಮಾಲಿಕ್)

"ನಿನ್ನ ಕುಟುಂಬದಲ್ಲಿ ಮತ್ತು ನಿನ್ನ ಸಂಪತ್ತಿನಲ್ಲಿ ಅಲ್ಲಾಹು ನಿನಗೆ ಬರಕತ್ ನೀಡಲಿ." [232]

# 91. ಸಾಲವನ್ನು ಹಿಂದಿರುಗಿಸುವಾಗ

---

[231] ಅಬೂ ದಾವೂದ್ 4/333. ಸಹೀಹ್ ಸುನನ್ ಅಬೀ ದಾವೂದ್‌ನಲ್ಲಿ (3/965) ಅಲ್‌ಅಲ್ಬಾನೀ ಇದನ್ನು ಹಸನ್ ಎಂದಿದ್ದಾರೆ.

[232] ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 4/288.

**202- «بَارَكَ اللَّهُ لَكَ فِي أَهْلِكَ وَمَالِكَ إِنَّمَا جَزَاءُ السَّلَفِ الْحَمْدُ وَالْأَدَاءُ»**

202. (ಬಾರಕಲ್ಲಾಹು ಲಕ ಫೀ ಅಹ್ಲಿಕ ವಮಾಲಿಕ ಇನ್ನಮಾ ಜಝಾಉ ಸ್ಸಲಫಿ ಅಲ್‌ಹಮ್ದು ವಲ್‌ಅದಾಅ್)

“ನಿನ್ನ ಕುಟುಂಬದಲ್ಲಿ ಮತ್ತು ನಿನ್ನ ಸಂಪತ್ತಿನಲ್ಲಿ ಅಲ್ಲಾಹು ನಿನಗೆ ಬರಕತ್ ನೀಡಲಿ. ಸಲಫ್‌ಗಳ ಪ್ರತಿಫಲವು ಕೇವಲ ಸ್ತುತಿ ಮತ್ತು ಮರುಪಾವತಿ.” [233]

## 92. ಶಿರ್ಕ್‌ನ್ನು ಭಯಪಟ್ಟರೆ

**203- «اللَّهُمَّ إِنِّي أَعُوذُ بِكَ أَنْ أُشْرِكَ بِكَ وَأَنَا أَعْلَمُ وَأَسْتَغْفِرُكَ لِمَا لَا أَعْلَمُ»**

203. (ಅಲ್ಲಾಹುಮ್ಮ ಇನ್ನೀ ಅಊದು ಬಿಕ ಅನ್ ಉಶ್ರಿಕ ಬಿಕ ವಅನ ಅಅ್‌ಲಮು ವಅಸ್ತಗ್ಫಿರುಕ ಲಿಮಾ ಲಾ ಅಅ್‌ಲಮ್)

“ಓ ಅಲ್ಲಾಹ್! ನಾನು ಅರಿತುಕೊಂಡು ನಿನ್ನೊಂದಿಗೆ ಶಿರ್ಕ್ ಮಾಡುವುದರ ಬಗ್ಗೆ ನಾನು ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ ಮತ್ತು

[233] ಅನ್ನಸಾಈ ಅಮಲುಲ್ ಯೌಮಿ ವಲ್ಲಲಿಲಃದಲ್ಲಿ (ಪುಟ 300); ಇಬ್ನ್ ಮಾಜ 2/809. ನೋಡಿ: ಸಹೀಹ್ ಇಬ್ನ್ ಮಾಜ 2/55.

ನಾನು ಅರಿತಿಲ್ಲದಿರುವುದರ ಬಗ್ಗೆ ನಾನು ನಿನ್ನೊಂದಿಗೆ ಕ್ಷಮೆ ಬೇಡುತ್ತಿದ್ದೇನೆ." [234]

## 93. ನಿನಗೆ ಅಲ್ಲಾಹು ಬರಕತ್ ನೀಡಲಿ ಎಂದು ಯಾರಾದರೂ ಹೇಳಿದರೆ

**204– «وَفِيكَ بَارَكَ اللَّهُ»**

204. (ವಫೀಕ ಬಾರಕಲ್ಲಾಹ್)

"ಅಲ್ಲಾಹು ನಿನಗೂ ಬರಕತ್ ನೀಡಲಿ." [235]

## 94. ಅಪಶಕುನವನ್ನು ತಿರಸ್ಕರಿಸುವ ಪ್ರಾರ್ಥನೆ

**205– « اللَّهُمَّ لاَ طَيْرَ إِلاَّ طَيْرُكَ، وَلاَ خَيْرَ إِلاَّ خَيْرُكَ، وَلاَ إِلَهَ غَيْرُكَ »**

205. (ಅಲ್ಲಾಹುಮ್ಮ ಲಾ ತ್ವೈರ ಇಲ್ಲಾ ತ್ವೈರುಕ, ವಲಾ ಖೈರ ಇಲ್ಲಾ ಖೈರುಕ, ವಲಾ ಇಲಾಹ ಗೈರುಕ್)

"ಓ ಅಲ್ಲಾಹ್! ನಿನ್ನ ಶಕುನವಲ್ಲದೆ ಬೇರೆ ಶಕುನವಿಲ್ಲ, ನಿನ್ನ ಒಳಿತಲ್ಲದೆ ಬೇರೆ ಒಳಿತಿಲ್ಲ. ನೀನಲ್ಲದೆ ಬೇರೆ ಆರಾಧ್ಯನಿಲ್ಲ." [236]

---

[234] ಅಹ್ಮದ್ 4/403 ಮತ್ತಿತರರು. ನೋಡಿ: ಸಹೀಹುಲ್ ಜಾಮಿಅ್ 3/233; ಸಹೀಹು ತ್ತರ್ಗೀಬ್ ವತ್ತರ್ಹೀಬ್ 1/19.

[235] ಇಬ್ನು ಸ್ಸುನ್ನಿ (ಪುಟ 138). ನೋಡಿ: ಇಬ್ನುಲ್ ಕಯ್ಯಿಮ್‌ರವರ ಅಲ್‌ವಾಬಿಲು ಸ್ಸಯ್ಯಿಬ್ (ಪುಟ 304).

# 95. ವಾಹನವನ್ನೇರುವಾಗ

206– «بِسْمِ اللَّهِ، وَالْحَمْدُ لِلَّهِ، سُبْحَانَ الَّذِي سَخَّرَ لَنَا هَذَا وَمَا كُنَّا لَهُ مُقْرِنِينَ وَإِنَّا إِلَى رَبِّنَا لَمُنْقَلِبُونَ، الْحَمْدُ لِلَّهِ، الْحَمْدُ لِلَّهِ، الْحَمْدُ لِلَّهِ، اللَّهُ أَكْبَرُ، اللَّهُ أَكْبَرُ، اللَّهُ أَكْبَرُ، سُبْحَانَكَ اللَّهُمَّ إِنِّي ظَلَمْتُ نَفْسِي فَاغْفِرْ لِي فَإِنَّهُ لَا يَغْفِرُ الذُّنُوبَ إِلَّا أَنْتَ»

206. (ಬಿಸ್ಮಿಲ್ಲಾಹಿ, ವಲ್‍ಹಮ್ದುಲಿಲ್ಲಾಹಿ, ಸುಬ್‍ಹಾನಲ್ಲದೀ ಸಖ್ಖರ ಲನಾ ಹಾದಾ ವಮಾ ಕುನ್ನಾ ಲಹೂ ಮುಕ್ರಿನೀನ್, ವಇನ್ನಾ ಇಲಾ ರಬ್ಬಿನಾ ಲಮುನ್ಕಲಿಬೂನ್, ಅಲ್‍ಹಮ್ದುಲಿಲ್ಲಾಹಿ, ಅಲ್‍ಹಮ್ದುಲಿಲ್ಲಾಹಿ, ಅಲ್‍ಹಮ್ದುಲಿಲ್ಲಾಹಿ, ಅಲ್ಲಾಹು ಅಕ್ಬರ್, ಅಲ್ಲಾಹು ಅಕ್ಬರ್, ಅಲ್ಲಾಹು ಅಕ್ಬರ್ ಸುಬ್‍ಹಾನಕಲ್ಲಾಹುಮ್ಮ ಇನ್ನೀ ದಲಮ್ತು ನಫ್ಸೀ ಫಗ್‍ಫಿರ್ ಲೀ ಫಇನ್ನಹೂ ಲಾ ಯಗ್‍ಫಿರು ದ್ದುನೂಬ ಇಲ್ಲಾ ಅನ್ತ)

"ಅಲ್ಲಾಹನ ನಾಮದಿಂದ, ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು, ಇದನ್ನು ನಮಗೆ ಆಧೀನಗೊಳಿಸಿಕೊಟ್ಟವನು ಪರಿಪಾವನನು, ನಾವು ಇದರ ನಿಯಂತ್ರಕರಾಗಿರಲಿಲ್ಲ. ಮತ್ತು ನಾವು ನಮ್ಮ ರಬ್ಬ್‌ನೆಡೆಗೆ ಮರಳುವವರಾಗಿದ್ದೇವೆ. ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು, ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು, ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು, ಅಲ್ಲಾಹು ಮಹಾನನು, ಅಲ್ಲಾಹು ಮಹಾನನು, ಅಲ್ಲಾಹು ಮಹಾನನು, ಪರಮಪಾವನನಾಗಿರುವ ಓ ಅಲ್ಲಾಹ್! ನಾನು ನನ್ನ

[236] ಅಹ್ಮದ್ 2/220; ಇಬ್ನು ಸ್ಸುನ್ನೀ (292); ಅಲ್‍ಅಹಾದೀಸು ಸ್ಸಹೀಹಃದಲ್ಲಿ (3/54) ಅಲ್‍ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.

ಶರೀರದ ಮೇಲೆ ಅನ್ಯಾಯವೆಸಗಿರುವೆನು. ಆದ್ದರಿಂದ ನನಗೆ ಕ್ಷಮಿಸು. ನೀನಲ್ಲದ ಪಾಪಗಳನ್ನು ಕ್ಷಮಿಸುವವರಾರೂ ಇಲ್ಲ." [237]

## 96. ಯಾತ್ರೆಯ ಪ್ರಾರ್ಥನೆ

**207– «اللَّهُ أَكْبَرُ، اللَّهُ أَكْبَرُ، اللَّهُ أَكْبَرُ، سُبْحَانَ الَّذِي سَخَّرَ لَنَا هَذَا وَمَا كُنَّا لَهُ مُقْرِنِينَ وَإِنَّا إِلَى رَبِّنَا لَمُنْقَلِبُونَ اللَّهُمَّ إِنَّا نَسْأَلُكَ فِي سَفَرِنَا هَذَا الْبِرَّ وَالتَّقْوَى وَمِنْ الْعَمَلِ مَا تَرْضَى اللَّهُمَّ هَوِّنْ عَلَيْنَا سَفَرَنَا هَذَا وَاطْوِ عَنَّا بُعْدَهُ اللَّهُمَّ أَنْتَ الصَّاحِبُ فِي السَّفَرِ وَالْخَلِيفَةُ فِي الْأَهْلِ اللَّهُمَّ إِنِّي أَعُوذُ بِكَ مِنْ وَعْثَاءِ السَّفَرِ وَكَآبَةِ الْمَنْظَرِ وَسُوءِ الْمُنْقَلَبِ فِي الْمَالِ وَالْأَهْلِ»**

207. (ಅಲ್ಲಾಹು ಅಕ್ಬರ್ (ಮೂರು ಬಾರಿ), ಸುಬ್‌ಹಾನಲ್ಲದೀ ಸಖ್ಖರ ಲನಾ ಹಾದಾ ವಮಾ ಕುನ್ನಾ ಲಹೂ ಮುಕ್ರಿನೀನ್, ವಇನ್ನಾ ಇಲಾ ರಬ್ಬಿನಾ ಲಮುನ್ಕಲಿಬೂನ್, ಅಲ್ಲಾಹುಮ್ಮ ಇನ್ನಾ ನಸ್‌ಅಲುಕ ಫೀ ಸಫರಿನಾ ಹಾದಲ್ ಬಿರ್‍ರ ವತ್ತಕ್ವಾ ವಮಿನಲ್ ಅಮಲಿ ಮಾ ತರ್ದಾ, ಅಲ್ಲಾಹುಮ್ಮ ಹವ್ವಿನ್ ಅಲೈನಾ ಸಫರನಾ ಹಾದಾ, ವತ್ವಿ ಅನ್ನಾ ಬುಅ್‌ದಹೂ, ಅಲ್ಲಾಹುಮ್ಮ ಅನ್ತ ಸ್ಸಾಹಿಬು ಫಿ ಸ್ಸಫರಿ ವಲ್‌ಖಲೀಫತು ಫಿಲ್ ಅಹ್ಲಿ, ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ವಅ್‌ಸಾಇ ಸ್ಸಫರಿ ವಕಆಬತಿಲ್ ಮನ್ದರಿ ವಸೂಇಲ್ ಮುನ್ಕಲಬಿ ಫಿಲ್ ಮಾಲಿ ವಲ್‌ಅಹ್ಲ್)

[237] ಅಬೂ ದಾವೂದ್ 3/34; ಅತ್ತಿರ್ಮಿದಿ 5/501. ನೋಡಿ: ಸಹೀಹು ತ್ತಿರ್ಮಿದಿ 3/156.

"ಅಲ್ಲಾಹು ಮಹಾನನು. ಇದನ್ನು ನಮಗೆ ಆಧೀನಗೊಳಿಸಿಕೊಟ್ಟವನು ಪರಿಪಾವನನು, ನಾವು ಇದರ ನಿಯಂತ್ರಕರಾಗಿರಲಿಲ್ಲ. ಮತ್ತು ನಾವು ನಮ್ಮ ರಬ್ಬ್‌ನೆಡೆಗೆ ಮರಳುವವರಾಗಿದ್ದೇವೆ. ಓ ಅಲ್ಲಾಹ್! ನಮ್ಮ ಈ ಯಾತ್ರೆಯಲ್ಲಿ ಒಳಿತನ್ನು, ಭಯಭಕ್ತಿಯನ್ನು ಮತ್ತು ಕರ್ಮಗಳಲ್ಲಿ ನೀನು ತೃಪ್ತಿಪಡುವುದನ್ನು ನಾವು ನಿನ್ನೊಂದಿಗೆ ಬೇಡುತ್ತಿದ್ದೇವೆ. ಓ ಅಲ್ಲಾಹ್! ನಮಗೆ ಈ ಯಾತ್ರೆಯನ್ನು ಸುಲಭೀಕರಿಸು ಮತ್ತು ಇದರ ದೂರವನ್ನು ನಮಗೆ ಕಿರಿದಾಗಿಸು. ಓ ಅಲ್ಲಾಹ್! ಯಾತ್ರೆಯಲ್ಲಿ ನೀನು ಜೊತೆಗಾರನಾಗಿರುವೆ ಮತ್ತು (ನಾನು ಬಿಟ್ಟು ಬಂದ) ಕುಟುಂಬದ ಉತ್ತರಾಧಿಕಾರಿಯಾಗಿರುವೆ. ಓ ಅಲ್ಲಾಹ್! ಯಾತ್ರೆಯ ಸಂಕಷ್ಟಗಳಿಂದ, ನೋಟದ ವ್ಯಾಕುಲತೆಯಿಂದ ಮತ್ತು ಸಂಪತ್ತು ಹಾಗೂ ಕುಟುಂಬದಲ್ಲಿ ಕೆಟ್ಟ ಪರಿಣಾಮಗಳಿಂದ ನಾನು ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ."

ಹಿಂದಿರುಗಿ ಬರುವಾಗ ಇದರ ಕೊನೆಯಲ್ಲಿ ಕೆಳಗಿನ ಪ್ರಾರ್ಥನೆಯನ್ನು ಸೇರಿಸಿ ಹೇಳಬೇಕು:

« آيِبُونَ تَائِبُونَ عَابِدُونَ لِرَبِّنَا حَامِدُونَ »

(ಆಯಿಬೂನ ತಾಇಬೂನ ಆಬಿದೂನ ಲಿರಬ್ಬಿನಾ ಹಾಮಿದೂನ್)

"ನಾವು ಮರಳುತ್ತಿದ್ದೇವೆ, ಪಶ್ಚಾತ್ತಾಪ ಪಡುತ್ತಿದ್ದೇವೆ, ಆರಾಧಿಸುತ್ತಿದ್ದೇವೆ ಮತ್ತು ನಮ್ಮ ರಬ್ಬ್‌ಗೆ ನಾವು ಸ್ತುತಿ ಅರ್ಪಿಸುತ್ತಿದ್ದೇವೆ."[238]

[238] ಮುಸ್ಲಿಮ್ 2/998

# 97. ಯಾತ್ರೆಯಲ್ಲಿ ಹಳ್ಳಿಯನ್ನು ಅಥವಾ ಪಟ್ಟಣವನ್ನು ಪ್ರವೇಶಿಸುವಾಗ

**208– «اللَّهُمَّ رَبَّ السَّمَاوَاتِ السَّبْعِ وَمَا أَظْلَلْنَ، وَرَبَّ الْأَرْضِينَ السَّبْعِ وَمَا أَقْلَلْنَ، وَرَبَّ الشَّيَاطِينِ وَمَا أَضْلَلْنَ، وَرَبَّ الرِّيَاحِ وَمَا ذَرَيْنَ، أَسْأَلُكَ خَيْرَ هَذِهِ الْقَرْيَةِ وَخَيْرَ أَهْلِهَا، وَخَيْرَ مَا فِيهَا، وَأَعُوذُ بِكَ مِنْ شَرِّهَا، وَشَرِّ أَهْلِهَا، وَشَرِّ مَا فِيهَا»**

208. (ಅಲ್ಲಾಹುಮ್ಮ ರಬ್ಬ ಸ್ಸಮಾವಾತಿ ಸ್ಸಬ್ಇ ವಮಾ ಅದ್‌ಲಲ್‌ನ, ವರಬ್ಬಲ್ ಅರ್ದೀನ ಸ್ಸಬ್ಇ ವಮಾ ಅಕ್ಲಲ್‌ನ, ವರಬ್ಬ ಶ್ಶಯಾತೀನಿ ವಮಾ ಅದ್‌ಲಲ್‌ನ, ವರಬ್ಬ ರ್‍ರಿಯಾಹಿ ವಮಾ ದರೈನ, ಅಸ್‌ಅಲುಕ ಖೈರ ಹಾದಿಹಿಲ್ ಕರ್ಯತಿ ವಖೈರ ಅಹ್ಲಿಹಾ, ವಖೈರ ಮಾ ಫೀಹಾ, ವಅಊದು ಬಿಕ ಮಿನ್ ಶರ್‍ರಿಹಾ, ವಶರ್‍ರಿ ಅಹ್ಲಿಹಾ, ವಶ್ಶರ್‍ರಿ ಮಾ ಫೀಹಾ)

“ಓ ಅಲ್ಲಾಹ್! ಏಳಾಕಾಶಗಳ ಮತ್ತು ಅವು ನೆರಳಿತ್ತವುಗಳ ಒಡೆಯನೇ! ಏಳು ಭೂಮಿಗಳ ಮತ್ತು ಅವು ಹೊತ್ತಿರುವವುಗಳ ಒಡೆಯನೇ! ಶೈತಾನರ ಮತ್ತು ಅವರು ದಾರಿಗೆಡಿಸಿದವರ ಒಡೆಯನೇ! ಗಾಳಿಯ ಮತ್ತು ಅದು ಝಾಡಿಸಿದವುಗಳ ಒಡೆಯನೇ! ಈ ಗ್ರಾಮದ ಒಳಿತನ್ನು ಮತ್ತು ಇದರ ನಿವಾಸಿಗಳ ಒಳಿತನ್ನು ಮತ್ತು ಇದರಲ್ಲಿರುವ ಒಳಿತನ್ನು ನಾನು ನಿನ್ನೊಂದಿಗೆ ಬೇಡುತ್ತಿದ್ದೇನೆ. ಇದರ ಕೆಡುಕಿನಿಂದ,

ಇದರ ನಿವಾಸಿಗಳ ಕೆಡುಕಿನಿಂದ ಮತ್ತು ಇದರಲ್ಲಿರುವ ಕೆಡುಕಿನಿಂದ ನಾನು ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ.” [239]

## 98. ಪೇಟೆಯನ್ನು ಪ್ರವೇಶಿಸುವಾಗ

**209– «لَا إِلَهَ إِلَّا اللَّهُ وَحْدَهُ لَا شَرِيكَ لَهُ لَهُ الْمُلْكُ وَلَهُ الْحَمْدُ يُحْيِي وَيُمِيتُ وَهُوَ حَيٌّ لَا يَمُوتُ بِيَدِهِ الْخَيْرُ وَهُوَ عَلَى كُلِّ شَيْءٍ قَدِيرٌ»**

209. (ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ ಲಹುಲ್ ಮುಲ್ಕು ವಲಹುಲ್ ಹಮ್ದು ಯುಹ್ಯೀ ವಯುಮೀತು ವಹುವ ಹಯ್ಯುನ್ ಲಾ ಯಮೂತು ಬಿಯದಿಹಿಲ್ ಖೈರು ವಹುವ ಅಲಾ ಕುಲ್ಲಿ ಶೈಇನ್ ಕದೀರ್)

“ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ, ಅವನು ಏಕೈಕನು, ಅವನಿಗೆ ಸಹಭಾಗಿಗಳಾಗಿ ಯಾರೂ ಇಲ್ಲ, ಆಧಿಪತ್ಯವು ಅವನದ್ದು ಮತ್ತು ಸ್ತುತಿಯು ಅವನಿಗೆ, ಅವನು ಬದುಕನ್ನು ನೀಡುವವನು ಮತ್ತು ಮೃತಪಡಿಸುವವನಾಗಿದ್ದಾನೆ, ಅವನು ಎಂದೂ ಮರಣಹೊಂದದವನೂ ನಿರಂತರವಾಗಿ ಜೀವಿಸುವವನೂ ಆಗಿದ್ದಾನೆ, ಒಳಿತು ಅವನ ಕೈಯಲ್ಲಿದೆ ಮತ್ತು ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ.” [240]

---

[239] ಅಲ್‌ಹಾಕಿಮ್. ಇವರು ಇದನ್ನು ಸಹೀಹ್ ಎಂದಿದ್ದಾರೆ ಮತ್ತು ಅದ್ದಹಬೀ (2/100) ಒಪ್ಪಿಕೊಂಡಿದ್ದಾರೆ. ಇಬ್ನು ಸ್ಸುನ್ನಿ (524). ಹಾಫಿಝ್ ಇಬ್ನ್ ಹಜರ್ ತಖ್ರೀಜುಲ್ ಅದ್ಕಾರ್‌ನಲ್ಲಿ (5/154) ಇದನ್ನು ಹಸನ್ ಎಂದಿದ್ದಾರೆ. ಇಬ್ನ್ ಬಾಝ್ ಹೇಳುತ್ತಾರೆ: ಇದನ್ನು ಅನ್ನಸಾಈ ಹಸನ್ ಆದ ಸನದಿನ ಮೂಲಕ ವರದಿ ಮಾಡಿದ್ದಾರೆ. ನೋಡಿ: ತುಹ್ಫತುಲ್ ಅಖ್ಯಾರ್ ಪುಟ 37.

[240] ಅತ್ತಿರ್ಮಿದಿ 5/291; ಅಲ್‌ಹಾಕಿಮ್ 1/538; ಸಹೀಹ್ ಇಬ್ನ್ ಮಾಜದಲ್ಲಿ (2/21) ಮತ್ತು ಸಹೀಹು ತ್ತಿರ್ಮಿದಿಯಲ್ಲಿ (3/152) ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.

## 99. ವಾಹನ ಮೃಗ ಎಡವಿದರೆ

210– «بِسْمِ اللَّهِ»

210. (ಬಿಸ್ಮಿಲ್ಲಾಹ್)

“ಅಲ್ಲಾಹನ ನಾಮದಿಂದ.” [241]

## 100. ಯಾತ್ರೆಗೆ ಹೊರಡುವಾಗ ತಾನು ಅಗಲಿ ಹೋಗುವವರಿಗಾಗಿ

211– «أَسْتَوْدِعُكُمُ اللَّهَ الَّذِي لَا تَضِيعُ وَدَائِعُهُ»

211. (ಅಸ್ತೌದಿಉಕುಮುಲ್ಲಾಹಲ್ಲದೀ ಲಾ ತದೀಉ ವದಾಇಉಹೂ)

“ನಾನು ನಿಮ್ಮನ್ನು ಅಲ್ಲಾಹನ ಸಂರಕ್ಷಣೆಯಲ್ಲಿ ಅರ್ಪಿಸಿದ್ದೇನೆ. ಅವನ ಸಂರಕ್ಷಣೆಯಲ್ಲಿ ಅರ್ಪಿಸಲ್ಪಟ್ಟದ್ದು ಎಂದೂ ನಷ್ಟವಾಗದು.” [242]

## 101. ಯಾತ್ರೆಗಾಗಿ ಬೀಳ್ಕೊಡುವಾಗ

212– «أَسْتَوْدِعُ اللَّهَ دِينَكَ وَأَمَانَتَكَ وَخَوَاتِيمَ عَمَلِكَ»

---

[241] ಅಬೂದಾವೂದ್ 4/296. ಸಹೀಹ್ ಅಬೀ ದಾವೂದ್‌ನಲ್ಲಿ (3/941) ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.

[242] ಅಹ್ಮದ್ 2/403. ಇಬ್ನ್ ಮಾಜ 2/943. ನೋಡಿ: ಸಹೀಹ್ ಇಬ್ನ್ ಮಾಜ (2/133).

212. (ಅಸ್ತೌದಿಉಲ್ಲಾಹ ದೀನಕ ವಅಮಾನತಕ ವಖವಾತೀಮ ಅಮಲಿಕ್)

“ನಾನು ನಿನ್ನ ಧರ್ಮವನ್ನು, ಪ್ರಾಮಾಣಿಕತೆಯನ್ನು ಮತ್ತು ನಿನ್ನ ಕರ್ಮದ ಅಂತ್ಯಗಳನ್ನು ಅಲ್ಲಾಹನ ಸಂರಕ್ಷಣೆಯಲ್ಲಿಡುತ್ತೇನೆ.” [243]

**213– «زَوَّدَكَ اللَّهُ التَّقْوَى وَغَفَرَ ذَنْبَكَ وَيَسَّرَ لَكَ الْخَيْرَ حَيْثُمَا كُنْتَ»**

213. (ಝುವ್ವದಕಲ್ಲಾಹು ತ್ತಕ್ವಾ ವಗಫರ ದಮ್ಬಕ ವಯಸ್ಸರಲ್ ಖೈರ ಹೈಸು ಮಾ ಕುನ್ತ)

“ಅಲ್ಲಾಹು ನಿನಗೆ ತಕ್ವಾವನ್ನು ಅಧಿಕಗೊಳಿಸಲಿ, ನಿನ್ನ ಪಾಪಗಳನ್ನು ಕ್ಷಮಿಸಲಿ ಮತ್ತು ನೀನೆಲ್ಲೇ ಇದ್ದರೂ ನಿನಗೆ ಒಳಿತನ್ನು ಸುಲಭೀಕರಿಸಲಿ.” [244]

## 102. ಯಾತ್ರೆ ಮಧ್ಯೆ ತಕ್ಬೀರ್ ಮತ್ತು ತಸ್ಬೀಹ್ ಹೇಳುವುದು

**214– قَالَ جَابِرٌ : «كُنَّا إِذَا صَعَدْنَا كَبَّرْنَا، وَإِذَا نَزَلْنَا سَبَّحْنَا »**

[243] ಅಹ್ಮದ್ 2/7. ಅತ್ತಿರ್ಮಿದಿ 5/499. ನೋಡಿ: ಸಹೀಹು ತ್ತಿರ್ಮಿದಿ (2/155).

[244] ಅತ್ತಿರ್ಮಿದಿ. ನೋಡಿ: ಸಹೀಹು ತ್ತಿರ್ಮಿದಿ (3/155).

IslamHouse.com

214. ಜಾಬಿರ್(ﷺ) ಹೇಳುತ್ತಾರೆ: “ನಾವು ಯಾತ್ರೆಯಲ್ಲಿ ಮೇಲೆ ಹತ್ತುವಾಗ ತಕ್ಬೀರ್ (ಅಲ್ಲಾಹು ಅಕ್ಬರ್) ಹೇಳುತ್ತಿದ್ದೆವು ಮತ್ತು ಕೆಳಗಿಳಿಯುವಾಗ ತಸ್ಬೀಹ್ (ಸುಬ್‌ಹಾನಲ್ಲಾಹ್) ಹೇಳುತ್ತಿದ್ದೆವು.” [245]

## 103. ಯಾತ್ರೆ ಮಧ್ಯೆ ಪ್ರಭಾತವಾದರೆ

**215– « سَمَّعَ سَامِعٌ بِحَمْدِ اللَّهِ، وَحُسْنِ بَلاَئِهِ عَلَيْنَا، رَبَّنَا صاحِبْنَا، وَأَفْضِلْ عَلَيْنَا، عَائِذاً بِاللَّهِ مِنَ النَّارِ »**

215. (ಸಮ್ಮಅ ಸಾಮಿಉನ್ ಬಿಹಮ್ದಿಲ್ಲಾಹಿ, ವಹುಸ್ನಿ ಬಲಾಇಹೀ ಅಲೈನಾ, ರಬ್ಬನಾ ಸಾಹಿಬ್‌ನಾ, ವಅಫ್ಬಿಲ್ ಅಲೈನಾ, ಆಇದನ್ ಬಿಲ್ಲಾಹಿ ಮಿನನ್ನಾರ್)

“ನಾವು ಅಲ್ಲಾಹನನ್ನು ಸ್ತುತಿಸಿರುವುದಕ್ಕೆ ಮತ್ತು ಅಲ್ಲಾಹು ನಮ್ಮನ್ನು ಅನುಗ್ರಹಿಸಿರುವುದಕ್ಕೆ ಒಬ್ಬ ಸಾಕ್ಷಿ ಸಾಕ್ಷಿಯಾಗಲಿ. ಓ ಅಲ್ಲಾಹ್ ನಮ್ಮನ್ನು ರಕ್ಷಿಸು ಮತ್ತು ನಮ್ಮನ್ನು ನಿನ್ನ ಅನುಗ್ರಹಗಳಿಂದ ಅನುಗ್ರಹಿಸು ಮತ್ತು ಎಲ್ಲ ಅನಿಷ್ಟಗಳನ್ನು ನಮ್ಮಿಂದ ದೂರ ಮಾಡು. ನರಕ ಶಿಕ್ಷೆಯಿಂದ ನಾನು ಅಲ್ಲಾಹನೊಂದಿಗೆ ರಕ್ಷೆ ಬೇಡುತ್ತಿದ್ದೇನೆ.” [246]

## 104. ಯಾತ್ರೆ ಮಧ್ಯೆ ಮನೆಯೊಂದನ್ನು ಅಥವಾ ವಸತಿಗೃಹವನ್ನು ಪ್ರವೇಶಿಸುವಾಗ

[245] ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ (6/135).

[246] ಮುಸ್ಲಿಮ್ 4/2086.

**216– «أَعُوذُ بِكَلِمَاتِ اللَّهِ التَّامَّاتِ مِنْ شَرِّ مَا خَلَقَ»**

216. (ಅಊದು ಬಿಕಲಿಮಾತಿಲ್ಲಾಹಿ ತ್ತಾಮ್ಮಾತಿ ಮಿನ್ ಶರ್‍ರಿ ಮಾ ಖಲಕ್)

“ಅಲ್ಲಾಹನ ಪರಿಪೂರ್ಣವಾದ ವಚನಗಳೊಂದಿಗೆ ಅವನು ಸೃಷ್ಟಿಸಿದ ಕೆಡುಕಿನಿಂದ ನಾನು ರಕ್ಷೆ ಬೇಡುತ್ತಿದ್ದೇನೆ.” [247]

## 105. ಯಾತ್ರೆಯಿಂದ ಮರಳುವಾಗ

217. ಎತ್ತರದ ಎಲ್ಲ ಸ್ಥಳಗಳಲ್ಲೂ ಮೂರು ಮೂರು ಬಾರಿ ಅಲ್ಲಾಹು ಅಕ್ಬರ್ ಎಂದು ಹೇಳಬೇಕು. ತರುವಾಯ ಈ ಪ್ರಾರ್ಥನೆ ಹೇಳಬೇಕು:

**«لاَ إِلَهَ إِلاَّ اللَّهُ وَحْدَهُ لاَ شَرِيكَ لَهُ، لَهُ الْمُلْكُ، وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ، آيِبُونَ، تَائِبُونَ، عَابِدُونَ، لِرَبِّنَا حَامِدُونَ، صَدَقَ اللَّهُ وَعْدَهُ، وَنَصَرَ عَبْدَهُ، وَهَزَمَ الْأَحْزَابَ وَحْدَهُ»**

(ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್. ಆಯಿಬೂನ ತಾಇಬೂನ ಆಬಿದೂನ ಲಿರಬ್ಬಿನಾ ಹಾಮಿದೂನ್. ಸದಕಲ್ಲಾಹು ವಅ್‌ದಹೂ, ವನಸರ ಅಬ್ದಹೂ, ವಹಝಮಲ್ ಅಹ್‌ಝಾಬ ವಹ್ದಹೂ)

---

[247] ಮುಸ್ಲಿಮ್ 4/2080.

“ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ, ಅವನು ಏಕೈಕನು, ಅವನಿಗೆ ಸಹಭಾಗಿಗಳು ಯಾರೂ ಇಲ್ಲ, ಆಧಿಪತ್ಯವು ಅವನದ್ದು, ಸ್ತುತಿಯು ಅವನಿಗೆ ಮತ್ತು ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು. ನಾವು ಮರಳುತ್ತಿದ್ದೇವೆ, ಪಶ್ಚಾತ್ತಾಪ ಪಡುತ್ತಿದ್ದೇವೆ, ಆರಾಧಿಸುತ್ತಿದ್ದೇವೆ ಮತ್ತು ನಮ್ಮ ರಬ್ಬ್‌ಗೆ ನಾವು ಸ್ತುತಿ ಅರ್ಪಿಸುತ್ತಿದ್ದೇವೆ. ಅಲ್ಲಾಹು ತನ್ನ ವಾಗ್ದಾನವನ್ನು ಸತ್ಯಪಡಿಸಿದ್ದಾನೆ ಮತ್ತು ತನ್ನ ದಾಸನಿಗೆ ಸಹಾಯವಿತ್ತಿದ್ದಾನೆ. ಮತ್ತು ಅವನು (ಅವಿಶ್ವಾಸಿಗಳ) ಪಕ್ಷಗಳನ್ನು ಒಬ್ಬಂಟಿಯಾಗಿ ಸೋಲಿಸಿದ್ದಾನೆ.” [248]

## 106. ಇಷ್ಟವಾಗಿರುವುದನ್ನು ಮತ್ತು ಅನಿಷ್ಟವಾಗಿರುವುದನ್ನು ಕಂಡರೆ

218. ಪ್ರವಾದಿ(ﷺ)ರವರು ತಮಗೆ ಇಷ್ಟವಾದುದನ್ನು ಕಂಡರೆ ಹೀಗೆ ಹೇಳುತ್ತಿದ್ದರು:

«الْحَمْدُ لِلَّهِ الَّذِي بِنِعْمَتِهِ تَتِمُّ الصَّالِحَاتُ»

(ಅಲ್‌ಹಮ್ದು ಲಿಲ್ಲಾಹಿಲ್ಲದೀ ಬಿನಿಅ್‌ಮತಿಹೀ ತತಿಮ್ಮು ಸ್ಸಾಲಿಹಾತ್)

“ಅಲ್ಲಾಹನಿಗೆ ಸ್ತುತಿ, ಅವನ ಅನುಗ್ರಹದೊಂದಿಗೆ ಸತ್ಕರ್ಮಗಳು ಪೂರ್ಣವಾಗುತ್ತವೆ.”

ಅನಿಷ್ಟವಾದುದನ್ನು ಕಂಡರೆ ಹೀಗೆ ಹೇಳುತ್ತಿದ್ದರು:

---

[248] ಯುದ್ಧದಿಂದ ಅಥವಾ ಹಜ್ಜಿನಿಂದ ಮರಳಿ ಬರುವಾಗ ಪ್ರವಾದಿಯವರು ಇದನ್ನು ಹೇಳುತ್ತಿದ್ದರು. ಅಲ್‌ಬುಖಾರಿ 7/163; ಮುಸ್ಲಿಮ್ 2/980.

«الْحَمْدُ لِلَّهِ عَلَى كُلِّ حَالٍ»

(ಅಲ್‌ಹಮ್ದು ಲಿಲ್ಲಾಹಿ ಅಲಾ ಕುಲ್ಲಿ ಹಾಲ್)

“ಎಲ್ಲಾ ಸ್ಥಿತಿಗಳಲ್ಲಿಯೂ ಅಲ್ಲಾಹನಿಗೆ ಸರ್ವಸ್ತುತಿ.” [249]

## 107. ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳುವುದರ ಮಹತ್ವ

219- « مَنْ صَلَّى عَلَيَّ صَلاَةً صَلَّى اللَّهُ عَلَيْهِ بِهَا عَشْراً »

219. ಪ್ರವಾದಿ(ﷺ) ಹೇಳಿದರು: “ಯಾರು ನನ್ನ ಮೇಲೆ ಒಂದು ಸಲಾತ್ ಹೇಳುತ್ತಾನೋ ಅವನ ಮೇಲೆ ಅಲ್ಲಾಹು ಹತ್ತು ಸಲಾತ್ ಹೇಳುವನು.” [250]

220- « لاَ تَجْعَلُوا قَبْرِي عِيداً وَصَلُّوا عَلَيَّ؛ فَإِنَّ صَلاَتَكُم تَبْلُغُنِي حَيْثُ كُنْتُمْ »

[249] ಇಬ್ನು ಸ್ಸುನ್ನಿ ಅಮಲುಲ್ ಯೌಮಿ ವಲ್ಲೈಲಃದಲ್ಲಿ; ಅಲ್‌ಹಾಕಿಮ್, ಇವರು ಇದನ್ನು ಸಹೀಹ್ ಎಂದಿದ್ದಾರೆ (1/499); ಅಲ್‌ಅಲ್ಬಾನೀ ತಮ್ಮ ಸಹೀಹುಲ್ ಜಾಮಿಅ್‌ನಲ್ಲಿ (4/201) ಇದನ್ನು ಸಹೀಹ್ ಎಂದಿದ್ದಾರೆ.

[250] ಮುಸ್ಲಿಮ್ 1/288

220. ಪ್ರವಾದಿ(ﷺ) ಹೇಳಿದರು: “ನನ್ನ ಗೋರಿಯನ್ನು ಉತ್ಸವ ಸ್ಥಳವನ್ನಾಗಿ ಮಾಡಬೇಡಿ. ನನ್ನ ಮೇಲೆ ಸಲಾತ್ ಹೇಳಿರಿ. ನೀವೆಲ್ಲೇ ಇದ್ದರೂ ನಿಮ್ಮ ಸಲಾತ್ ನನಗೆ ತಲುಪುತ್ತದೆ.” [251]

**221– « الْبَخِيلُ مَنْ ذُكِرْتُ عِنْدَهُ فَلَمْ يُصَلِّ عَلَيَّ »**

221. ಪ್ರವಾದಿ(ﷺ) ಹೇಳಿದರು: “ನನ್ನ ಹೆಸರು ಪ್ರಸ್ತಾಪಿಸಲಾದಾಗ ನನ್ನ ಮೇಲೆ ಸಲಾತ್ ಹೇಳದವನೇ ಜಿಪುಣ.” [252]

**222– « إِنَّ لِلَّهِ مَلاَئِكَةً سَيَّاحِينَ فِي الْأَرْضِ يُبَلِّغُونِي مِنْ أُمَّتِي السَّلاَمَ »**

222. ಪ್ರವಾದಿ(ﷺ) ಹೇಳಿದರು: “ಭೂಮಿಯಲ್ಲಿ ಸಂಚರಿಸುವ ಮಲಕ್‌ಗಳು ಅಲ್ಲಾಹನಿಗಿದ್ದಾರೆ. ಅವರು ನನ್ನ ಸಮುದಾಯದ ಸಲಾತನ್ನು ನನಗೆ ತಲುಪಿಸುತ್ತಾರೆ.” [253]

**223– « مَا مِنْ أَحَدٍ يُسَلِّمُ عَلَيَّ إِلاَّ رَدَّ اللَّهُ عَلَيَّ رُوحِي حَتَّى أَرُدَّ عَلَيْهِ السَّلاَمَ »**

---

251 ಅಬೂ ದಾವೂದ್ 2/218; ಅಹ್ಮದ್ 2/367. ಸಹೀಹ್ ಅಬೀ ದಾವೂದ್‌ನಲ್ಲಿ (2/383) ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.

252 ಅತ್ತಿರ್ಮಿದಿ 5/551 ಮತ್ತಿತರರು. ನೋಡಿ: ಸಹೀಹುಲ್ ಜಾಮಿಅ್ 3/25 ಮತ್ತು ಸಹೀಹು ತ್ತಿರ್ಮಿದಿ 3/177.

253 ಅನ್ನಸಾಈ, ಅಲ್‌ಹಾಕಿಮ್ 2/421; ಸಹೀಹು ನ್ನಸಾಈಯಲ್ಲಿ 1/274 ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.

223. ಪ್ರವಾದಿ(ﷺ) ಹೇಳಿದರು: "ನನ್ನ ಮೇಲೆ ಒಬ್ಬ ವ್ಯಕ್ತಿ ಸಲಾಮ್ ಹೇಳುವಾಗಲೆಲ್ಲ ಆ ಸಲಾಮಿಗೆ ನಾನು ಉತ್ತರಿಸುವ ತನಕ ಅಲ್ಲಾಹು ನನ್ನ ಆತ್ಮವನ್ನು ನನಗೆ ಮರಳಿಸುತ್ತಾನೆ." [254]

## 108. ಸಲಾಮ್ ಹೇಳುವುದನ್ನು ವ್ಯಾಪಕಗೊಳಿಸುವುದು

**224- « لاَ تَدْخُلُوا الْجَنَّةَ حَتَّى تُؤْمِنُوا، وَلاَ تُؤْمِنُوا حَتَّى تَحَابُّوا، أَوَلاَ أَدُلُّكُم عَلَى شَيْءٍ إِذَا فَعَلْتُمُوهُ تَحَابَبْتُم، أَفْشُوا السَّلاَمَ بَيْنَكُمْ »**

224. ಪ್ರವಾದಿ(ﷺ) ಹೇಳಿದರು: "ನೀವು ವಿಶ್ವಾಸವಿಡುವ ತನಕ ನೀವು ಸ್ವರ್ಗವನ್ನು ಪ್ರವೇಶಿಸಲಾರಿರಿ. ನೀವು ಪರಸ್ಪರ ಪ್ರೀತಿಸುವ ತನಕ ನೀವು ವಿಶ್ವಾಸವಿಡಲಾರಿರಿ. ನಾನೊಂದು ವಿಷಯವನ್ನು ನಿಮಗೆ ತಿಳಿಸಿಕೊಡಲೇ? ಅದನ್ನು ಮಾಡಿದರೆ ನೀವು ಪರಸ್ಪರ ಪ್ರೀತಿಸುವಿರಿ. ನಿಮ್ಮ ಮಧ್ಯೆ ಸಲಾಮ್ ಹೇಳುವುದನ್ನು ವ್ಯಾಪಕಗೊಳಿಸಿರಿ." [255]

**225- « ثَلاَثٌ مَنْ جَمَعَهُنَّ فَقَدْ جَمَعَ الْإِيمَانَ: الْإِنْصَافُ مِنْ نَفْسِكَ، وَبَذْلُ السَّلاَمِ لِلْعَالَمِ، وَالْإِنْفَاقُ مِنَ الْإِقْتَارِ »**

225. "ಮೂರು ವಿಷಯಗಳನ್ನು ಯಾರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೋ ಅವರು ವಿಶ್ವಾಸವನ್ನು ತಮ್ಮ ಜೀವನದಲ್ಲಿ

[254] ಅಬೂ ದಾವೂದ್ (2041). ಸಹೀಹ್ ಅಬೀ ದಾವೂದ್‌ನಲ್ಲಿ (1/283) ಅಲ್‌ಅಲ್ಬಾನೀ ಇದನ್ನು ಹಸನ್ ಎಂದಿದ್ದಾರೆ.

[255] ಮುಸ್ಲಿಮ್ 1/74 ಮತ್ತಿತರರು.

ಅಳವಡಿಸಿಕೊಂಡರು. ನ್ಯಾಯ ಪಾಲಿಸುವುದು, ಎಲ್ಲ ಜನರಿಗೂ ಸಲಾಮ್ ಹೇಳುವುದು ಮತ್ತು ಬಡತನದಲ್ಲೂ ಖರ್ಚು ಮಾಡುವುದು.” 256

226– عَنْ عَبْدِ اللَّهِ بْنِ عُمَرَ رَضِيَ اللَّهُ عَنْهُمَا: أَنَّ رَجُلاً سَأَلَ النَّبِيَّ ﷺ أَيُّ الْإِسْلاَمِ خَيْرٌ قَالَ: «تُطْعِمُ الطَّعَامَ، وَتَقْرَأُ السَّلاَمَ عَلَى مَنْ عَرَفْتَ وَمَنْ لَمْ تَعْرِفْ»

226. ಅಬ್ದುಲ್ಲಾಹ್ ಇಬ್ನ್ ಅಮ್ರ್(ﷺ) ಹೇಳುತ್ತಾರೆ: “ಒಬ್ಬ ವ್ಯಕ್ತಿ ಪ್ರವಾದಿ(ﷺ)ರವರ ಬಳಿ ಬಂದು ಕೇಳಿದರು: ಯಾವ ಇಸ್ಲಾಮ್ ಅತ್ಯುತ್ತಮವಾದುದು? ಪ್ರವಾದಿ(ﷺ)ರವರು ಉತ್ತರಿಸಿದರು: ಆಹಾರ ಉಣಿಸುವುದು ಮತ್ತು ಪರಿಚಯದವರಿಗೂ ಪರಿಚಯವಿಲ್ಲದವರಿಗೂ ಸಲಾಮ್ ಹೇಳುವುದು.” 257

## 109. ಅವಿಶ್ವಾಸಿ ಸಲಾಮ್ ಹೇಳಿದರೆ

227– « إِذَا سَلَّمَ عَلَيْكُمْ أَهْلُ الْكِتَابِ فَقُولُوا: وَعَلَيْكُمْ »

227. “ಅಹ್ಲುಲ್ ಕಿತಾಬಿನವರು (ಯಹೂದ ಕ್ರೈಸ್ತರು) ನಿಮಗೆ ಸಲಾಮ್ ಹೇಳಿದರೆ, ‘ವಅಲೈಕುಮ್’ ಎಂದು ಹೇಳಿರಿ.” 258

---

256 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 1/82

257 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 1/55. ಮುಸ್ಲಿಮ್ 1/65

258 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 11/42. ಮುಸ್ಲಿಮ್ 4/1705

# 110. ಕೋಳಿ ಕೂಗುವುದನ್ನು ಮತ್ತು ಕತ್ತೆ ಅರಚುವುದನ್ನು ಕೇಳಿದರೆ

**228-** « إِذَا سَمِعْتُمْ صِيَاحَ الدِّيَكَةِ فَاسْأَلُوا اللَّهَ مِنْ فَضْلِهِ؛ فَإِنَّهَا رَأَتْ مَلَكاً وَإِذَا سَمِعْتُمْ نَهِيقَ الْحِمَارِ فَتَعَوَّذُوا بِاللَّهِ مِنَ الشَّيطَانِ؛ فَإِنَّهُ رَأَى شَيْطَاناً»

228. "ನೀವು ಕೋಳಿ ಕೂಗುವುದನ್ನು ಆಲಿಸಿದರೆ ಅಲ್ಲಾಹನೊಂದಿಗೆ ಅವನ ಔದಾರ್ಯದಿಂದ ಬೇಡಿಕೊಳ್ಳಿರಿ. ಯಾಕೆಂದರೆ ಅದು (ಕೋಳಿ) ಮಲಕ್‌ನ್ನು ಕಂಡಿದೆ. ನೀವು ಕತ್ತೆ ಅರಚುವುದನ್ನು ಆಲಿಸಿದರೆ ಶೈತಾನನಿಂದ ಅಲ್ಲಾಹನೊಂದಿಗೆ ರಕ್ಷೆ ಬೇಡಿರಿ. ಯಾಕೆಂದರೆ ಅದು ಶೈತಾನನನ್ನು ಕಂಡಿದೆ." [259]

# 111. ರಾತ್ರಿ ನಾಯಿ ಬೊಗಳುವುದನ್ನು ಆಲಿಸಿದರೆ

**229-** « إِذَا سَمِعْتُمْ نُبَاحَ الْكِلاَبِ وَنَهِيقَ الْحَمِيرِ بِاللَّيْلِ فَتَعَوَّذُوا بِاللَّهِ مِنْهُنَّ؛ فَإِنَّهُنَّ يَرَيْنَ مَا لاَ تَرَوْنَ »

[259] ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 6/350. ಮುಸ್ಲಿಮ್ 4/2096

229. “ನೀವು ರಾತ್ರಿ ವೇಳೆಯಲ್ಲಿ ನಾಯಿ ಬೊಗಳುವುದನ್ನು ಮತ್ತು ಕತ್ತೆಗಳು ಅರಚುವುದನ್ನು ಆಲಿಸಿದರೆ ಅಲ್ಲಾಹನೊಂದಿಗೆ ರಕ್ಷೆ ಬೇಡಿರಿ. ಯಾಕೆಂದರೆ ನೀವು ಕಾಣದುದನ್ನು ಅವು ಕಾಣುತ್ತಿವೆ.” [260]

## 112. ನೀವು ಯಾರನ್ನಾದರೂ ನಿಂದಿಸಿದರೆ ಏನು ಹೇಳಬೇಕು?

230– « اللَّهُمَّ فَأَيُّمَا مُؤْمِنٍ سَبَبْتُهُ فَاجْعَلْ ذَلِكَ لَهُ قُرْبَةً إِلَيْكَ يَوْمَ الْقِيَامَةِ »

230. ಪ್ರವಾದಿ(ﷺ) ಹೇಳಿದರು: “ಓ ಅಲ್ಲಾಹ್! ನಾನು ವಿಶ್ವಾಸಿಯಾಗಿರುವ ಯಾರನ್ನಾದರೂ ನಿಂದಿಸಿದ್ದರೆ ಪುನರುತ್ಥಾನ ದಿನದಂದು ಅದನ್ನು ಅವನಿಗೊಂದು ಪುಣ್ಯಕರ್ಮವನ್ನಾಗಿ ಮಾಡಿ ಸ್ವೀಕರಿಸು.” [261]

## 113. ಯಾರನ್ನಾದರೂ ಹೊಗಳುವುದಾದರೆ

231– « إِذَا كَانَ أَحَدُكُم مَادِحاً صَاحِبَهُ لاَ مَحَالَةَ فَلْيَقُلْ: أَحْسِبُ فُلاَناً وَاللَّهُ حَسِيبُهُ، وَلاَ أُزَكِّي عَلَى اللَّهِ أَحَداً، أَحْسِبُهُ – إِنْ كَانَ يَعْلَمُ ذَاكَ – كَذَا وَكَذَا »

[260] ಅಬೂ ದಾವೂದ್ 4/327; ಅಹ್ಮದ್ 3/306. ಸಹೀಹ್ ಅಬೀ ದಾವೂದ್‌ನಲ್ಲಿ (3/961) ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.

[261] ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 11/171. ಮುಸ್ಲಿಮ್ 4/2007

231. ಪ್ರವಾದಿ(ﷺ) ಹೇಳಿದರು: "ನಿಮ್ಮಲ್ಲೊರ್ವನು ತನ್ನ ಗೆಳೆಯನನ್ನು ಅನಿವಾರ್ಯವಾಗಿ ಹೊಗಳಬೇಕಾಗಿ ಬಂದರೆ ಅವನು ಹೇಳಲಿ: ನಾನು ಅವನನ್ನು ಈ ರೀತಿ ಭಾವಿಸುತ್ತೇನೆ. ಅವನ ಬಗ್ಗೆ ಹೆಚ್ಚು ಅರಿವುಳ್ಳವನು ಅಲ್ಲಾಹು. ಅಲ್ಲಾಹನಿಗೆ ವಿರುದ್ಧವಾಗಿ ನಾನು ಯಾರನ್ನೂ ಶುದ್ಧೀಕರಿಸುವುದಿಲ್ಲ. -ಅವನು ಆತನ ಕುರಿತು ಏನನ್ನಾದರೂ ತಿಳಿದಿದ್ದರೆ- ನಾನು ಅವನ ಬಗ್ಗೆ ಹೀಗೆ ಹೀಗೆ ಭಾವಿಸುತ್ತೇನೆ (ಎಂದು ಹೇಳಲಿ)." [262]

## 114. ಯಾರಾದರೂ ತನ್ನನ್ನು ಹೊಗಳಿದರೆ

**232- «اللَّهُمَّ لَا تُؤَاخِذْنِي بِمَا يَقُولُونَ وَاغْفِرْ لِي مَا لَا يَعْلَمُونَ، وَاجْعَلْنِي خَيْرًا مِمَّا يَظُنُّونَ»**

232. (ಅಲ್ಲಾಹುಮ್ಮ ಲಾ ತುಆಖಿದ್‌ನೀ ಬಿಮಾ ಯಕೂಲೂನ ವಗ್ಫಿರ್ ಲೀ ಮಾ ಲಾ ಯಅ್‌ಲಮೂನ್, ವಜ್‌ಅಲ್‌ನೀ ಖೈರನ್ ಮಿಮ್ಮಾ ಯದುನ್ನೂನ್)

"ಓ ಅಲ್ಲಾಹ್! ಅವರು ಹೇಳುತ್ತಿರುವುದರಿಂದಾಗಿ ನೀನು ನನ್ನನ್ನು ಶಿಕ್ಷಿಸದಿರು ಮತ್ತು ಅವರು ಅರಿತಿಲ್ಲದಿರುವುದರ ಬಗ್ಗೆ ನನಗೆ ಕ್ಷಮೆ ನೀಡು. ಅವರು ಭಾವಿಸಿದ್ದಕ್ಕಿಂತಲೂ ನನ್ನನ್ನು ಉತ್ತಮನನ್ನಾಗಿ ಮಾಡು." **263**

---

[262] ಮುಸ್ಲಿಮ್ 4/2296

[263] ಅಲ್‌ಬುಖಾರಿ ಅಲ್‌ಅದಬುಲ್ ಮುಫ್ರದ್‌ನಲ್ಲಿ (761); ಅಲ್‌ಅಲ್ಬಾನೀ ಸಹೀಹುಲ್ ಅದಬಿಲ್ ಮುಫ್ರದ್‌ನಲ್ಲಿ (585) ಇದರ ಸನದನ್ನು ಸಹೀಹ್ ಎಂದಿದ್ದಾರೆ. ಹೆಚ್ಚುವರಿಯನ್ನು ಅಲ್‌ಬೈಹಕೀ ತಮ್ಮ ಶುಅಬುಲ್ ಈಮಾನ್‌ನಲ್ಲಿ 4/228 ವರದಿ ಮಾಡಿದ್ದಾರೆ.

# 115. ಹಜ್ಜ್ ಮತ್ತು ಉಮ್ರಾದ ತಲ್ಬಿಯತ್

233– «لَبَّيْكَ اللَّهُمَّ لَبَّيْكَ، لَبَّيْكَ لَا شَرِيكَ لَكَ لَبَّيْكَ، إِنَّ الْحَمْدَ وَالنِّعْمَةَ لَكَ وَالْمُلْكَ، لَا شَرِيكَ لَكَ»

233. (ಲಬ್ಬೈಕಲ್ಲಾಹುಮ್ಮ ಲಬ್ಬೈಕ್, ಲಬ್ಬೈಕ ಲಾ ಶರೀಕ ಲಕ ಲಬ್ಬೈಕ್, ಇನ್ನಲ್ ಹಮ್ದ ವನ್ನಿಅ್‌ಮತ ಲಕ ವಲ್‌ಮುಲ್ಕ್, ಲಾ ಶರೀಕ ಲಕ್)

"ನಾನು ಓಗೊಡುತ್ತಿದ್ದೇನೆ, ಓ ಅಲ್ಲಾಹ್! ನಾನು ಓಗೊಡುತ್ತಿದ್ದೇನೆ. ನಾನು ಓಗೊ ಡುತ್ತಿದ್ದೇನೆ, ನಿನಗೆ ಯಾವ ಸಹಭಾಗಿಗಳೂ ಇಲ್ಲ, ನಾನು ಓಗೊಡುತ್ತಿದ್ದೇನೆ. ಸ್ತುತಿ, ಅನುಗ್ರಹ ಮತ್ತು ಆಧಿಪತ್ಯಗಳು ನಿನ್ನದ್ದು. ನಿನಗೆ ಯಾವ ಸಹಭಾಗಿಗಳೂ ಇಲ್ಲ." [264]

# 116. ಅಲ್‌ಹಜರುಲ್ ಅಸ್ವದ್‌ನ ಬಳಿ ಬಂದರೆ ತಕ್ಬೀರ್ ಹೇಳುವುದು

234– « طَافَ النَّبِيُّ ﷺ بِالْبَيْتِ عَلَى بَعِيرٍ كُلَّمَا أَتَى الرُّكْنَ أَشَارَ إِلَيْهِ بِشَيْءٍ عِنْدَهُ وَكَبَّرَ »

234. "ಪ್ರವಾದಿ(ﷺ)ರವರು ಒಂಟೆಯ ಮೇಲೆ ಕುಳಿತು ಕಅ್‌ಬಾಲಯಕ್ಕೆ ತವಾಫ್ ಮಾಡಿದರು. ಅಲ್‌ಹಜರುಲ್ ಅಸ್ವದ್‌ನ ಬಳಿ

[264] ಅಲ್‌ಬುಖಾರಿ ನೋಡಿ: ಫತ್‌ಹುಲ್ ಬಾರಿ 3/408; ಮುಸ್ಲಿಮ್ 2/841

ಬರುವಾಗಲೆಲ್ಲ ಅವರು ತಮ್ಮ ಕೈಯಲ್ಲಿರುವ ವಸ್ತುವಿನಿಂದ ಅದರ ಕಡೆಗೆ ಸನ್ನೆ ಮಾಡಿ ತಕ್ಬೀರ್ (ಅಲ್ಲಾಹು ಅಕ್ಬರ್) ಹೇಳುತ್ತಿದ್ದರು.” [265]

## 117. ಅರ್ರುಕ್ನುಲ್ ಯಮಾನೀ ಮತ್ತು ಅಲ್‌ಹಜರುಲ್ ಅಸ್ವದ್‌ನ ಮಧ್ಯೆ

**235– «رَبَّنَا آتِنَا فِي الدُّنْيَا حَسَنَةً وَفِي الْآخِرَةِ حَسَنَةً وَقِنَا عَذَابَ النَّارِ»**

235. (ರಬ್ಬನಾ ಆತಿನಾ ಫಿದ್ದುನ್ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಖಿನಾ ಅದಾಬನ್ನಾರ್)

“ನಮ್ಮ ರಬ್ಬೇ! ನಮಗೆ ಇಹಲೋಕದಲ್ಲಿ ಒಳಿತನ್ನು ಮತ್ತು ಪರಲೋಕದಲ್ಲಿ ಒಳಿತನ್ನು ನೀಡು. ಮತ್ತು ನಮ್ಮನ್ನು ನರಕ ಶಿಕ್ಷೆಯಿಂದ ಪಾರು ಮಾಡು.” [266]

## 118. ಸಫಾ ಮತ್ತು ಮರ್ವಾಗಳ ಮೇಲೆ

236. ಪ್ರವಾದಿ(ﷺ)ರವರು ಸಫಾದ ಬಳಿ ಬಂದಾಗ ಈ ಆಯತ್ ಪಾರಾಯಣ ಮಾಡಿದರು:

---

[265] ಅಲ್‌ಬುಖಾರಿ ನೋಡಿ: ಫತ್‌ಹುಲ್ ಬಾರಿ 3/476; ವಸ್ತು ಎಂಬುದರ ಉದ್ದೇಶ ಕೋಲು ಆಗಿದೆ. ನೋಡಿ: ಫತ್‌ಹುಲ್ ಬಾರಿ 3/472

[266] ಅಬೂ ದಾವೂದ್ 2/179; ಅಹ್ಮದ್ 3/411; ಅಲ್‌ಬಗವೀ ಶರ್ಹುಸ್ಸುನ್ನಃದಲ್ಲಿ (7/128). ಸಹೀಹ್ ಅಬೀ ದಾವೂದ್‌ನಲ್ಲಿ (1/354) ಅಲ್‌ಅಲ್ಬಾನೀ ಇದನ್ನು ಹಸನ್ ಎಂದಿದ್ದಾರೆ.

﴿إِنَّ ٱلصَّفَا وَٱلۡمَرۡوَةَ مِن شَعَآئِرِ ٱللَّهِۖ﴾

(ಇನ್ನ ಸ್ಸಫಾ ವಲ್‌ಮರ್ವತ ಮಿನ್ ಶಆಇರಿಲ್ಲಾಹ್)

“ನಿಶ್ಚಯವಾಗಿಯೂ ಸಫಾ ಮತ್ತು ಮರ್ವಾ ಅಲ್ಲಾಹನ ಚಿಹ್ನೆಗಳಲ್ಲಿ ಸೇರಿದ್ದಾಗಿವೆ.”

ಅಲ್ಲಾಹು ಪ್ರಾರಂಭಿಸಿದ್ದಲ್ಲಿಂದಲೇ ನಾನೂ ಪ್ರಾರಂಭಿಸುವೆನು. ನಂತರ ಅವರು ಸಫಾ ಬೆಟ್ಟವನ್ನೇರಿ ನಂತರ ಕಅ್‌ಬಾಲಯ ಕಾಣುವಂತೆ ಅದರೆಡೆಗೆ ತಿರುಗಿದರು. ನಂತರ ತಕ್ಬೀರ್ ಹೇಳಿದ ಈ ಪ್ರಾರ್ಥನೆಯನ್ನು ಹೇಳಿದರು:

«لَا إِلَهَ إِلَّا اللَّهُ وَحْدَهُ لَا شَرِيكَ لَهُ لَهُ الْمُلْكُ وَلَهُ الْحَمْدُ وَهُوَ عَلَى كُلِّ شَيْءٍ قَدِيرٌ لَا إِلَهَ إِلَّا اللَّهُ وَحْدَهُ أَنْجَزَ وَعْدَهُ وَنَصَرَ عَبْدَهُ وَهَزَمَ الْأَحْزَابَ وَحْدَهُ»

(ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು, ವಹುವ ಅಲಾ ಕುಲ್ಲಿ ಶೈಇನ್ ಕದೀರ್, ಲಾ ಇಲಾಹ ಇಲ್ಲಲ್ಲಾಹು ವಹ್ದಹೂ, ಅನ್ಜಝ ವಅ್‌ದಹೂ, ವನಸರ ಅಬ್ದಹೂ, ವಹಝಮಲ್ ಅಹ್‌ಝಾಬ ವಹ್ದಹೂ)

“ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ. ಅವನು ಏಕೈಕನು. ಅವನಿಗೆ ಸಹಭಾಗಿಗಳಿಲ್ಲ. ಆಧಿಪತ್ಯವು ಅವನದ್ದು ಮತ್ತು ಸ್ತುತಿಯು ಅವನಿಗೆ. ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವಿರುವವನಾಗಿದ್ದಾನೆ. ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ. ಅವನು ಏಕೈಕನು. ಅವನು ತನ್ನ

ವಾಗ್ದಾನವನ್ನು ಈಡೇರಿಸಿದ್ದಾನೆ ಮತ್ತು ತನ್ನ ದಾಸನಿಗೆ ಸಹಾಯವಿತ್ತಿದ್ದಾನೆ. ಮತ್ತು ಅವನು (ಅವಿಶ್ವಾಸಿಗಳ) ಪಕ್ಷಗಳನ್ನು ಒಬ್ಬಂಟಿಯಾಗಿ ಸೋಲಿಸಿದ್ದಾನೆ."

ನಂತರ ಅವರು ಅಲ್ಲಾಹನೊಂದಿಗೆ ಪ್ರಾರ್ಥಿಸಿದರು. ಇದನ್ನು ಅವರು ಮೂರು ಸಲ ಪುನರಾವರ್ತಿಸಿದರು... ನಂತರ ಮರ್ವಾ ಬೆಟ್ಟವನ್ನೇರಿ ಅಲ್ಲೂ ಹೀಗೆಯೇ ಮಾಡಿದರು." [267]

## 119. ಅರಫಾ ದಿನದಂದು

**237– «خَيْرُ الدُّعَاءِ دُعَاءُ يَوْمِ عَرَفَةَ، وَخَيْرُ مَا قُلْتُ أَنَا وَالنَّبِيُّونَ مِنْ قَبْلِي: لاَ إِلَهَ إِلاَّ اللَّهُ وَحْدَهُ لاَ شَرِيكَ لَهُ، لَهُ الْمُلْكُ وَلَهُ الْحَمْدُ وَهُوَ عَلَى كُلِّ شَيْءٍ قَدِيرٌ»**

237. "ಪ್ರಾರ್ಥನೆಗಳಲ್ಲಿ ಅತ್ಯುತ್ತಮವಾದುದು ಅರಫಾ ದಿನದ ಪ್ರಾರ್ಥನೆ. ನಾನು ಮತ್ತು ನನಗಿಂತ ಮುಂಚಿನ ಪ್ರವಾದಿಗಳು ಹೇಳಿದ ಅತ್ಯುತ್ತಮ ಮಾತು: ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು, ವಹುವ ಅಲಾ ಕುಲ್ಲಿ ಶೈಇನ್ ಕದೀರ್." [268]

## 120. ಅಲ್‌ಮಶ್‌ಅರುಲ್ ಹರಾಮ್‌ನಲ್ಲಿ

[267] ಮುಸ್ಲಿಮ್ 2/888

[268] ಅತ್ತಿರ್ಮಿದಿ. ಸಹೀಹು ತ್ತಿರ್ಮಿದಿಯಲ್ಲಿ (3/184) ಮತ್ತು ಅಲ್‌ಅಹಾದೀಸು ಸ್ಸಹೀಹಃದಲ್ಲಿ (4/6) ಅಲ್‌ಅಲ್ಬಾನೀ ಇದನ್ನು ಹಸನ್ ಎಂದಿದ್ದಾರೆ.

238- «رَكِبَ النَّبِيُّ ﷺ الْقَصْوَاءَ حَتَّى أَتَى الْمَشْعَرَ الْحَرَامَ فَاسْتَقْبَلَ الْقِبْلَةَ (فَدَعَاهُ، وَكَبَّرَهُ، وَهَلَّلَهُ، وَوَحَّدَهُ) فَلَمْ يَزَلْ وَاقِفاً حَتَّى أَسْفَرَ جِدّاً فَدَفَعَ قَبْلَ أَنْ تَطْلُعَ الشَّمْسُ»

238. “ಪ್ರವಾದಿ(ﷺ)ರವರು ಕಸ್ವಾ ಒಂಟೆಯನ್ನೇರಿ ಅಲ್‌ಮಶ್‌ಅರುಲ್ ಹರಾಮ್‌ಗೆ ಬಂದು, ಅಲ್ಲಿ ಕಿಬ್ಲಕ್ಕೆ ಅಭಿಮುಖವಾಗಿ ಪ್ರಾರ್ಥಿಸಿದರು, ತಕ್ಬೀರ್ (ಅಲ್ಲಾಹು ಅಕ್ಬರ್) ಹೇಳಿದರು, ತಹ್ಲೀಲ್ (ಲಾ ಇಲಾಹ ಇಲ್ಲಲ್ಲಾಹ್) ಹೇಳಿದರು, ಹೀಗೆ ಪ್ರಭಾತದ ಬೆಳಕು ವ್ಯಾಪಕವಾಗುವ ತನಕ ಪ್ರಾರ್ಥಿಸಿದರು. ನಂತರ ಸೂರ್ಯೋದಯಕ್ಕೆ ಮುಂಚೆ ಅಲ್ಲಿಂದ ತೆರಳಿದರು.” [269]

## 121. ಜಮರಾತ್‌ಗೆ ಕಲ್ಲೆಸೆಯುವಾಗ ತಕ್ಬೀರ್ ಹೇಳುವುದು

239- «يُكَبِّرُ كُلَّمَا رَمَى بِحَصَاةٍ عِنْدَ الْجِمَارِ الثَّلاَثِ، ثُمَّ يَتَقَدَّمُ، وَيَقِفُ يَدْعُو مُسْتَقْبِلَ الْقِبلَةِ، رَافِعاً يَدَيْهِ بَعْدَ الْجَمْرَةِ الْأُولَى وَالثَّانِيَةِ. أَمَّا جَمْرَةُ الْعَقَبَةِ فَيَرْمِيهَا وَيُكَبِّرُ عِنْدَ كُلِّ حَصَاةٍ وَيَنْصَرِفُ وَلاَ يَقِفُ عِنْدَهَا»

[269] ಮುಸ್ಲಿಮ್ 2/891

239. “ಪ್ರವಾದಿ(ﷺ)ರವರು ಮೂರು ಜಮ್ರಃಗಳಿಗೆ ಕಲ್ಲೆಸೆಯುವಾಗಲೂ, ಪ್ರತಿಯೊಂದು ಎಸೆತದೊಂದಿಗೆ ಅಲ್ಲಾಹು ಅಕ್ಬರ್ ಎನ್ನುತ್ತಿದ್ದರು. ಮೊದಲನೆ ಜಮ್ರಃಕ್ಕೆ ಕಲ್ಲೆಸೆದ ಬಳಿಕ ಸ್ವಲ್ಪ ಮುಂದೆ ಹೋಗಿ ಕಿಬ್ಲಃಕ್ಕೆ ತಿರುಗಿ ನಿಂತು ಕೈಗಳನ್ನೆತ್ತಿ ಪ್ರಾರ್ಥಿಸುತ್ತಿದ್ದರು. ಹೀಗೆಯೇ ಎರಡನೆ ಜಮ್ರಃಕ್ಕೆ ಕಲ್ಲೆಸೆದ ಬಳಿಕವೂ ಮಾಡುತ್ತಿದ್ದರು. ಆದರೆ ಜಮ್ರತುಲ್ ಅಕಬಃಕ್ಕೆ ತಕ್ಬೀರ್ ಹೇಳುತ್ತಾ ಕಲ್ಲೆಸೆದ ಬಳಿಕ ಅಲ್ಲಿ ನಿಲ್ಲುತ್ತಿರಲಿಲ್ಲ.” [270]

## 122. ಅದ್ಭುತವಾದುದನ್ನು ಅಥವಾ ಇಷ್ಟಕರವಾದುದನ್ನು ಕಂಡರೆ

**240- «سُبْحَانَ اللَّهِ»**

240. (ಸುಬ್‌ಹಾನಲ್ಲಾಹ್)

“ಅಲ್ಲಾಹು ಪರಮಪಾವನನು.” [271]

**241- «اللَّهُ أَكْبَرُ»**

241. (ಅಲ್ಲಾಹು ಅಕ್ಬರ್)

“ಅಲ್ಲಾಹು ಮಹಾನನು.” [272]

---

[270] ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 3/583 ಮತ್ತು 3/584. ಮುಸ್ಲಿಮ್‌ನಲ್ಲೂ ಇದನ್ನು ಕಾಣಬಹುದು.

[271] ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 1/210 ಮತ್ತು 1/390 ಮತ್ತು 1/414; ಮುಸ್ಲಿಮ್ 4/1857

## 123. ಇಷ್ಟಕರವಾದ ವಿಷಯವನ್ನು ಕಂಡರೆ ಏನು ಮಾಡಬೇಕು?

242- « كَانَ النَّبِيُّ ﷺ إِذَا أَتَاهُ أَمْرٌ يَسُرُّهُ أَوْ يُسَرُّ بِهِ خَرَّ سَاجِدًا شُكْرًا لِلَّهِ تَبَارَكَ وَتَعَالَى »

242. "ಪ್ರವಾದಿ(ﷺ)ರಿಗೆ ಇಷ್ಟಕರವಾದ ವಿಷಯ ತಲುಪಿದರೆ ಅವರು ಅಲ್ಲಾಹನಿಗೆ ಕೃತಜ್ಞತೆಯಾಗಿ ಸಾಷ್ಟಾಂಗ ಬೀಳುತ್ತಿದ್ದರು." [273]

## 124. ದೇಹದಲ್ಲಿ ನೋವು ಕಂಡುಬಂದರೆ

243. "ನಿಮ್ಮ ಕೈಯನ್ನು ದೇಹದ ನೋವಿರುವ ಭಾಗದಲ್ಲಿಟ್ಟು ಮೂರು ಸಲ ಬಿಸ್ಮಿಲ್ಲಾಹ್ ಎಂದು ಹೇಳಿ, ನಂತರ ಏಳು ಸಲ ಹೀಗೆ ಹೇಳಬೇಕು:

«أَعُوذُ بِاللَّهِ وَقُدْرَتِهِ مِنْ شَرِّ مَا أَجِدُ وَأُحَاذِرُ»

(ಅಊದು ಬಿಲ್ಲಾಹಿ ವಕುದ್ರತಿಹೀ ಮಿನ್ ಶರ್ರಿ ಮಾ ಅಜಿದು ವಉಹಾದಿರು)

---

[272] ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 8/441. ನೋಡಿ: ಸಹೀಹು ತ್ತಿರ್ಮಿದಿ 2/103 ಮತ್ತು 2/235; ಮುಸ್ನದ್ ಅಹ್ಮದ್ 5/218

[273] ಅಬೂದಾವೂದ್, ಅತ್ತಿರ್ಮಿದಿ, ಇಬ್ನ್ ಮಾಜ. ನೋಡಿ: ಸಹೀಹ್ ಇಬ್ನ್ ಮಾಜ 1/233 ಮತ್ತು ಇರ್ವಾಉಲ್ ಗಲೀಲ್ 2/226

"ಅಲ್ಲಾಹನ ನಾಮದಿಂದ. ನಾನು ಕಾಣುತ್ತಿರುವ ಮತ್ತು ಬಳಲುತ್ತಿರುವ ಕೆಡುಕಿನಿಂದ ನಾನು ಅಲ್ಲಾಹನೊಂದಿಗೆ ಮತ್ತು ಅವನ ಸಾಮರ್ಥ್ಯದೊಂದಿಗೆ ರಕ್ಷೆ ಬೇಡುತ್ತಿದ್ದೇನೆ." [274]

## 125. ದೃಷ್ಟಿ ತಾಗಬಹುದೆಂದು ಭಯಪಟ್ಟರೆ

244– « إِذَا رَأَى أَحَدُكُم مِنْ أَخِيهِ، أَوْ مِنْ نَفْسِهِ، أَوْ مِنْ مَالِهِ مَا يُعْجِبُهُ [فَلْيَدْعُ لَهُ بِالْبَرَكَةِ] فَإِنَّ الْعَيْنَ حَقٌّ »

244. "ನೀವು ನಿಮ್ಮ ಸಹೋದರನಲ್ಲಿ, ಅಥವಾ ಸ್ವತಃ ನಿಮ್ಮ ಶರೀರದಲ್ಲಿ, ಅಥವಾ ನಿಮ್ಮ ಸಂಪತ್ತಿನಲ್ಲಿ ಅದ್ಭುತವನ್ನು ಕಂಡರೆ, ಬರಕತ್‌ಗಾಗಿ ಪ್ರಾರ್ಥಿಸಿರಿ. ಯಾಕೆಂದರೆ ದೃಷ್ಟಿಯು ಸತ್ಯ." [275]

## 126. ಭಯವುಂಟಾದರೆ

245– «لَا إِلَهَ إِلَّا اللَّهُ»

245. (ಲಾ ಇಲಾಹ ಇಲ್ಲಲ್ಲಾಹ್)

"ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ." [276]

---

[274] ಮುಸ್ಲಿಮ್ 4/1728

[275] ಮುಸ್ನದ್ ಅಹ್ಮದ್ 4/447; ಇಬ್ನ್ ಮಾಜ; ಮಾಲಿಕ್. ಸಹೀಹುಲ್ ಜಾಮಿಅ್‌ನಲ್ಲಿ (1/212) ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ. ನೋಡಿ: ಅಲ್‌ಅರ್ನಾಊತ್‌ರವರ ತಹ್ಕೀಕು ಝಾದಿಲ್ ಮಆದ್ 4/170.

[276] ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 6/181. ಮುಸ್ಲಿಮ್ 4/2208

## 127. ಪ್ರಾಣಿಯನ್ನು ಕೊಯ್ಯುವಾಗ ಅಥವಾ ಬಲಿಯರ್ಪಿಸುವಾಗ

**246**– «بِسْمِ اللَّهِ وَاللَّهُ أَكْبَرُ ، اللَّهُمَّ مِنْكَ وَلَكَ، اللَّهُمَّ تَقَبَّلْ مِنِّي»

246. (ಬಿಸ್ಮಿಲ್ಲಾಹಿ ವಲ್ಲಾಹು ಅಕ್ಬರ್, ಅಲ್ಲಾಹುಮ್ಮ ಮಿನ್ಕ ವಲಕ, ಅಲ್ಲಾಹುಮ್ಮ ತಕಬ್ಬಲ್ ಮಿನ್ನೀ)

**"ಅಲ್ಲಾಹನ ನಾಮದಿಂದ, ಅಲ್ಲಾಹು ಮಹಾನನು, ಓ ಅಲ್ಲಾಹ್! ನಿನ್ನಿಂದ ಮತ್ತು ನಿನಗೆ, ಓ ಅಲ್ಲಾಹ್! ನನ್ನಿಂದ ಸ್ವೀಕರಿಸು."** [277]

## 128. ಹಟಮಾರಿ ಶೈತಾನರ ಉಪದ್ರವಗಳನ್ನು ತಡೆಗಟ್ಟಲು

**247**– «أَعُوذُ بِكَلِمَاتِ اللَّهِ التَّامَّاتِ الَّتِي لاَ يُجَاوِزُهُنَّ بَرٌّ وَلاَ فَاجِرٌ: مِنْ شَرِّ مَا خَلَقَ، وَبَرَأَ وَذَرَأَ، وَمِنْ شَرِّ مَا يَنْزِلُ مِنَ السَّمَاءِ، وَمِنْ شَرِّ مَا يَعْرُجُ فيهَا، وَمِنْ شَرِّ مَا ذَرَأَ فِي الْأَرْضِ، وَمِنْ شَرِّ مَا يَخْرُجُ مِنْهَا، وَمِنْ شَرِّ فِتَنِ اللَّيْلِ وَالنَّهَارِ، وَمِنْ شَرِّ كُلِّ طَارِقٍ إِلاَّ طَارِقاً يَطْرُقُ بِخَيْرٍ يَا رَحْمَنُ»

---

[277] ಮುಸ್ಲಿಮ್ 3/1557; ಅಲ್‌ಬೈಹಕೀ 9/287.

IslamHouse.com

247. (ಅಊದು ಬಿಕಲಿಮಾತಿಲ್ಲಾಹಿ ತ್ತಾಮ್ಮಾತಿಲ್ಲತೀ ಲಾ ಯುಜಾವಿಝುಹುನ್ನ ಬರ್ರುನ್ ವಲಾ ಫಾಜಿರುನ್, ಮಿನ್ ಶರ್ರಿ ಮಾ ಖಲಕ, ವಬರಅ ವದರಅ, ವಮಿನ್ ಶರ್ರಿ ಮಾ ಯನ್‌ಝಿಲು ಮಿನ ಸ್ಸಮಾಇ, ವಮಿನ್ ಶರ್ರಿ ಮಾ ಯಅ್‌ರುಜು ಫೀಹಾ, ವಮಿನ್ ಶರ್ರಿ ಮಾ ದರಅ ಫಿಲ್ ಅರ್ದಿ, ವಮಿನ್ ಶರ್ರಿ ಮಾ ಯಖ್ರುಜು ಮಿನ್‌ಹಾ, ವಮಿನ್ ಶರ್ರಿ ಫಿತನಿಲ್ಲೈಲಿ ವನ್ನಹಾರಿ, ವಮಿನ್ ಶರ್ರಿ ಕುಲ್ಲಿ ತಾರಿಕಿನ್ ಇಲ್ಲಾ ತಾರಿಕನ್ ಅತ್‌ರುಕು ಬಿಖೈರಿನ್ ಯಾ ರಹ್ಮಾನ್)

“ಸಜ್ಜನರಾಗಲಿ, ದುರ್ಜನರಾಗಲಿ ದಾಟಿ ಹೋಗಲು ಸಾಧ್ಯವಿಲ್ಲದಂತಹ ಅಲ್ಲಾಹನ ಪರಿಪೂರ್ಣ ವಚನಗಳೊಂದಿಗೆ, ಅವನು ಸೃಷ್ಟಿಸಿದ ಎಲ್ಲ ಕೆಡುಕುಗಳಿಂದ, ಆಕಾಶದಿಂದ ಇಳಿಯುವ ಕೆಡುಕುಗಳಿಂದ, ಆಕಾಶಕ್ಕೆ ಏರಿ ಹೋಗುವ ಕೆಡುಕುಗಳಿಂದ, ಭೂಮಿಯಲ್ಲುಂಟಾಗುವ ಕೆಡುಕುಗಳಿಂದ, ಭೂಮಿಯಿಂದ ಹೊರಬರುವ ಕೆಡುಕುಗಳಿಂದ, ರಾತ್ರಿ ಮತ್ತು ಹಗಲಿನ ಪರೀಕ್ಷೆಯ ಕೆಡುಕಿನಿಂದ, ಉತ್ತಮವಾದ ಉದ್ದೇಶದೊಂದಿಗೆ ಹೊರತು ರಾತ್ರಿ ಬರುವ ಎಲ್ಲರ ಕೆಡುಕಿನಿಂದ, ಓ ಪರಮ ದಯಾಮಯನೇ! ನಾನು ನಿನ್ನೊಂದಿಗೆ ರಕ್ಷೆ ಬೇಡುತ್ತಿದ್ದೇನೆ.” [278]

## 129. ಇಸ್ತಿಗ್ಫಾರ್ ಮತ್ತು ತೌಬಾ

**248– « وَاللَّهِ إِنِّي لَأَسْتَغْفِرُ اللَّهَ وَأَتُوبُ إِلَيْهِ فِي الْيَوْمِ أَكْثَرَ مِنْ سَبْعِينَ مَرَّةً »**

[278] ಅಹ್ಮದ್ 3/419 ಸಹೀಹಾದ ಸನದಿನ ಮೂಲಕ; ಇಬ್ನು ಸ್ಸುನ್ನೀ (637). ಅತ್ತಹಾವಿಯ್ಯದ ತಖ್ರೀಜಿನಲ್ಲಿ (ಪುಟ 133) ಅಲ್‌ಅರ್ನಾಊತ್ ಇದರ ಸನದನ್ನು ಸಹೀಹ್ ಎಂದಿದ್ದಾರೆ. ನೋಡಿ: ಮಜ್ಮಉ ಝ್ಝವಾಇದ್ 10/127

248. ಪ್ರವಾದಿ(ﷺ) ಹೇಳಿದರು: "ಅಲ್ಲಾಹನ ಮೇಲಾಣೆ! ನಾನು ದಿನದಲ್ಲಿ ಎಪ್ಪತ್ತಕ್ಕಿಂತಲೂ ಹೆಚ್ಚು ಬಾರಿ ಅಲ್ಲಾಹನೊಂದಿಗೆ ಇಸ್ತಿಗ್ಫಾರ್ ಮಾಡಿ ಅವನೆಡೆಗೆ ತೌಬಾ ಮಾಡುತ್ತೇನೆ." [279]

**249– « يَا أَيُّهَا النَّاسُ تُوبُوا إِلَى اللَّهِ فَإِنِّي أَتُوبُ فِي الْيَوْمِ إِلَيْهِ مِائَةَ مَرَّةٍ »**

249. ಪ್ರವಾದಿ(ﷺ) ಹೇಳಿದರು: "ಓ ಜನರೇ! ಅಲ್ಲಾಹನೆಡೆಗೆ ತೌಬಾ ಮಾಡಿರಿ. ಖಂಡಿತವಾಗಿಯೂ ನಾನು ದಿನದಲ್ಲಿ ನೂರು ಬಾರಿ ತೌಬಾ ಮಾಡುತ್ತೇನೆ." [280]

250. ಪ್ರವಾದಿ(ﷺ) ಹೇಳಿದರು: "ಯಾರು ಈ ದಿಕ್ರನ್ನು ಹೇಳುತ್ತಾನೋ, ಅವನು ಯುದ್ಧದಿಂದ ಓಡಿಹೋದವನಾದರೂ ಅಲ್ಲಾಹು ಅವನಿಗೆ ಕ್ಷಮಿಸುವನು:

**« أَسْتَغْفِرُ اللَّهَ الْعَظِيمَ الَّذِي لاَ إِلَهَ إِلاَّ هُوَ الْحَيُّ الْقَيّومُ وَأَتُوبُ إِلَيهِ »**

(ಅಸ್ತಗ್ಫಿರುಲ್ಲಾಹಲ್ ಅದೀಮಲ್ಲದೀ ಲಾ ಇಲಾಹ ಇಲ್ಲಾ ಹುವಲ್ ಹಯ್ಯುಲ್ ಕಯ್ಯೂಮು ವಅತೂಬು ಇಲೈಹಿ)

"ನಾನು ಮಹೋನ್ನತನಾದ ಅಲ್ಲಾಹನೊಂದಿಗೆ ಕ್ಷಮೆ ಬೇಡುತ್ತಿದ್ದೇನೆ. ಅವನ ಹೊರತು ಅನ್ಯ ಆರಾಧ್ಯರಿಲ್ಲ. ಅವನು ಎಂದೆಂದಿಗೂ

[279] ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 11/101

[280] ಮುಸ್ಲಿಮ್ 4/2076

ಜೀವಿಸಿರುವವನೂ ಎಲ್ಲವನ್ನೂ ನಿಯಂತ್ರಿಸುವವನೂ ಆಗಿದ್ದಾನೆ. ನಾನು ಅವನೆಡೆಗೆ ತೌಬಾ ಮಾಡುತ್ತಿದ್ದೇನೆ.” [281]

**251– « أَقْرَبُ مَا يَكُونُ الرَّبُّ مِنَ الْعَبْدِ فِي جَوْفِ اللَّيْلِ الآخِرِ فَإِنِ اسْتَطَعْتَ أَنْ تَكُونَ مِمَّنْ يَذْكُرُ اللَّهَ فِي تِلْكَ السَّاعَةِ فَكُنْ »**

251. ಪ್ರವಾದಿ(ﷺ) ಹೇಳಿದರು: “ಒಬ್ಬ ವ್ಯಕ್ತಿ ಅಲ್ಲಾಹನಿಗೆ ಹೆಚ್ಚು ನಿಕಟನಾಗುವುದು ರಾತ್ರಿಯ ಕೊನೆಯ ಹಂತದಲ್ಲಿ. ಆದ್ದರಿಂದ ಆ ಸಮಯದಲ್ಲಿ ಅಲ್ಲಾಹನನ್ನು ಸ್ಮರಿಸುವ ಜನರೊಂದಿಗೆ ಸೇರಲು ನಿನಗೆ ಸಾಧ್ಯವಾದರೆ ಸೇರು.” [282]

**252– « أَقْرَبُ مَا يَكُونُ الْعَبْدُ مِنْ رَبِّهِ وَهُوَ سَاجِدٌ فَأَكْثِرُوا الدُّعَاءَ »**

252. ಪ್ರವಾದಿ(ﷺ) ಹೇಳಿದರು: “ದಾಸನು ತನ್ನ ರಬ್ಬ್‌ನೊಂದಿಗೆ ಅತಿ ನಿಕಟನಾಗುವುದು ಅವನು ಸುಜೂದ್ ಮಾಡುವ ಸಂದರ್ಭದಲ್ಲಾಗಿದೆ. ಆದ್ದರಿಂದ (ಆ ಸಂದರ್ಭದಲ್ಲಿ) ಪ್ರಾರ್ಥನೆಯನ್ನು ಹೆಚ್ಚಿಸಿರಿ.” [283]

---

[281] ಅಬೂ ದಾವೂದ್ 2/85; ಅತ್ತಿರ್ಮಿದಿ 5/569; ಅಲ್‌ಹಾಕಿಮ್; ಇವರು ಇದನ್ನು ಸಹೀಹ್ ಎಂದಿದ್ದಾರೆ ಮತ್ತು ಅದ್ದಹಬೀ (1/511) ಒಪ್ಪಿಕೊಂಡಿದ್ದಾರೆ. ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ. ನೋಡಿ: ಸಹೀಹು ತ್ತಿರ್ಮಿದಿ 3/182; ಜಾಮಿಉಲ್ ಉಸೂಲ್ ಲಿಅಹಾದೀಸಿ ರ್ರಸೂಲ್ 4/389–390

[282] ಅತ್ತಿರ್ಮಿದಿ; ಅನ್ನಸಾಈ 1/279; ಅಲ್‌ಹಾಕಿಮ್. ನೋಡಿ: ಸಹೀಹು ತ್ತಿರ್ಮಿದಿ 3/183; ಜಾಮಿಉಲ್ ಉಸೂಲ್ 4/144

[283] ಮುಸ್ಲಿಮ್ 1/350

253- « إِنَّهُ لَيُغَانُ عَلَى قَلْبِي وَإِنِّي لأَسْتَغْفِرُ اللَّهَ فِي الْيَوْمِ مِائَةَ مَرَّةٍ »

253. ಪ್ರವಾದಿ(ﷺ) ಹೇಳಿದರು: "ನನ್ನ ಹೃದಯದಲ್ಲಿ ಮರೆವುಂಟಾಗುತ್ತದೆ. ನಾನು ದಿನನಿತ್ಯ ನೂರು ಬಾರಿ ಅಲ್ಲಾಹನೆಡೆಗೆ ತೌಬಾ ಮಾಡುತ್ತೇನೆ." [284]

# 130. ತಸ್ಬೀಹ್, ತಹ್ಮೀದ್, ತಹ್ಲೀಲ್ ಮತ್ತು ತಕ್ಬೀರ್‌ಗಳ ಮಹತ್ವ

254- « مَنْ قَالَ: سُبْحَانَ اللَّهِ وَبِحَمْدِهِ فِي يَوْمٍ مِائَةَ مَرَّةٍ حُطَّتْ خَطَايَاهُ وَلَوْ كَانَتْ مِثْلَ زَبَدِ الْبَحْرِ »

254. ಪ್ರವಾದಿ(ﷺ) ಹೇಳಿದರು: "ಯಾರು ಸುಬ್‌ಹಾನಲ್ಲಾಹಿ ವಬಿಹಮ್ದಿಹೀ ಎಂದು ದಿನದಲ್ಲಿ ನೂರು ಬಾರಿ ಹೇಳುತ್ತಾನೋ ಅವನ ಪಾಪಗಳೆಲ್ಲವನ್ನೂ ಅಳಿಸಲಾಗುವುದು. ಅವು ಸಮುದ್ರದ ನೊರೆಗಳ ಸಂಖ್ಯೆಯಲ್ಲಿದ್ದರೂ ಸಹ." [285]

255- «مَنْ قَالَ لاَ إِلَهَ إِلاَّ اللَّهُ وَحْدَهُ لاَ شَرِيكَ لَهُ، لَهُ الْمُلْكُ، وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ عَشْرَ مِرَارٍ، كَانَ كَمَنْ أَعْتَقَ أَرْبَعَةَ أَنْفُسٍ مِنْ وَلَدِ إِسْمَاعِيلَ»

[284] ಮುಸ್ಲಿಮ್ 4/2075. ನೋಡಿ: ಜಾಮಿಉಲ್ ಉಸೂಲ್ 4/386

[285] ಅಲ್‌ಬುಖಾರಿ 7/168; ಮುಸ್ಲಿಮ್ 4/2071.

255. ಪ್ರವಾದಿ(ﷺ) ಹೇಳಿದರು: “ಯಾರು ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್ ಎಂದು ಹತ್ತು ಸಲ ಹೇಳಿದರೆ, ಅವನಿಗೆ ಇಸ್ಮಾಈಲ್(ؑ)ರವರ ಸಂತತಿಯಲ್ಲಿ ಸೇರಿದ ನಾಲ್ಕು ಜನರನ್ನು ವಿಮೋಚನೆಗೊಳಿಸಿದ ಪುಣ್ಯವಿದೆ.” [286]

**256– « كَلِمَتَانِ خَفِيفَتَانِ عَلَى اللِّسَانِ، ثَقِيلَتَانِ فِي الْمِيزَانِ، حَبِيبَتَانِ إِلَى الرَّحْمَنِ: سُبْحَانَ اللَّهِ وَبِحَمْدِهِ، سُبْحَانَ اللَّهِ الْعَظِيمِ »**

256. ಪ್ರವಾದಿ(ﷺ) ಹೇಳಿದರು: “ಎರಡು ವಚನಗಳು, ಅವು ನಾಲಗೆಯಲ್ಲಿ ಹಗುರವಾಗಿವೆ, ತಕ್ಕಡಿಯಲ್ಲಿ ಭಾರವಾಗಿವೆ, ಅಲ್ಲಾಹನಿಗೆ ಇಷ್ಟವಾಗಿವೆ. ಅವು: ಸುಬ್‌ಹಾನಲ್ಲಾಹಿ ವಬಿಹಮ್ದಿಹೀ ಸುಬ್‌ಹಾನಲ್ಲಾಹಿಲ್ ಅದೀಮ್.” [287]

**257– « لَأَنْ أَقُولَ سُبْحَانَ اللَّهِ، وَالْحَمْدُ لِلَّهِ، وَلاَ إِلَهَ إِلاَّ اللَّهُ، وَاللَّهُ أَكْبَرُ، أَحَبُّ إِلَيَّ مِمَّا طَلَعَتْ عَلَيْهِ الشَّمْسُ »**

257. ಪ್ರವಾದಿ(ﷺ) ಹೇಳಿದರು: “ಸೂರ್ಯ ಯಾವೆಲ್ಲ ವಸ್ತುಗಳ ಮೇಲೆ ಬೆಳಕು ಚೆಲ್ಲುತ್ತಾನೋ ಅವೆಲ್ಲಕ್ಕಿಂತಲೂ ನನಗೆ ಇಷ್ಟವಾದುದು ಸುಬ್‌ಹಾನಲ್ಲಾಹಿ, ವಲ್‌ಹಮ್ದುಲಿಲ್ಲಾಹಿ, ವಲಾ ಇಲಾಹ ಇಲ್ಲಲ್ಲಾಹು, ವಲ್ಲಾಹು ಅಕ್ಬರ್ ಎಂದು ಹೇಳುವುದಾಗಿದೆ.” [288]

---

[286] ಅಲ್‌ಬುಖಾರಿ 7/67; ಮುಸ್ಲಿಮ್ 4/2071

[287] ಅಲ್‌ಬುಖಾರಿ 7/168; ಮುಸ್ಲಿಮ್ 4/2072

[288] ಮುಸ್ಲಿಮ್ 4/2072

**258- «أَيَعْجِزُ أَحَدُكُم أَنْ يَكْسِبَ كُلَّ يَوْمٍ أَلْفَ حَسَنَةٍ» فَسَأَلَهُ سَائِلٌ مِنْ جُلَسَائِهِ كَيْفَ يَكْسِبُ أَحَدُنَا أَلْفَ حَسَنَةٍ؟ قَالَ: «يُسَبِّحُ مِائَةَ تَسْبِيحَةٍ، فَيُكتَبُ لَهُ أَلْفُ حَسَنَةٍ أَوْ يُحَطُّ عَنْهُ أَلْفُ خَطِيئَةٍ»**

258. ಪ್ರವಾದಿ(ﷺ) ಹೇಳಿದರು: “ನಿಮ್ಮಲ್ಲೊಬ್ಬನು ಪ್ರತಿದಿನ ಒಂದು ಸಾವಿರ ಒಳಿತುಗಳನ್ನು ಸಂಪಾದಿಸಲು ಶಕ್ತನಾಗಿರುವನೇ? ಅವರ ಬಳಿ ಕುಳಿತವರಲ್ಲೊಬ್ಬರು ಕೇಳಿದರು: ‘ನಮ್ಮಲ್ಲೊಬ್ಬನು ಒಂದು ಸಾವಿರ ಒಳಿತುಗಳನ್ನು ಹೇಗೆ ಸಂಪಾದಿಸುವನು?’ ಪ್ರವಾದಿ(ﷺ)ರವರು ಹೇಳಿದರು: ‘ಅವನು ನೂರು ತಸ್ಬೀಹ್‌ಗಳನ್ನು ಹೇಳಲಿ. ಆಗ ಅವನಿಗೆ ಒಂದು ಸಾವಿರ ಒಳಿತುಗಳನ್ನು ಲಿಖಿತಗೊಳಿಸಲಾಗುವುದು ಅಥವಾ ಅವನಿಂದ ಒಂದು ಸಾವಿರ ಪಾಪಗಳನ್ನು ಅಳಿಸಲಾಗುವುದು’.” [289]

**259- « مَنْ قَالَ: سُبْحَانَ اللَّهِ الْعَظِيمِ وَبِحَمْدِهِ غُرِسَتْ لَهُ نَخْلَةٌ فِي الْجَنَّةِ »**

259. ಪ್ರವಾದಿ(ﷺ) ಹೇಳಿದರು: “ಸುಬ್‌ಹಾನಲ್ಲಾಹಿಲ್ ಅದೀಮಿ ವಬಿಹಮ್ದಿಹೀ ಎಂದು ಯಾರಾದರೂ ಹೇಳಿದರೆ, ಅವನಿಗೆ ಸ್ವರ್ಗದಲ್ಲೊಂದು ಖರ್ಜೂರದ ಮರವನ್ನು ನೆಡಲಾಗುವುದು.” [290]

---

[289] ಮುಸ್ಲಿಮ್ 4/2073

[290] ಅತ್ತಿರ್ಮಿದಿ 5/511; ಅಲ್‌ಹಾಕಿಮ್ 1/501. ಅಲ್‌ಹಾಕಿಮ್ ಇದನ್ನು ಸಹೀಹ್ ಎಂದಿದ್ದಾರೆ ಮತ್ತು ಅದ್ದಹಬೀ ಒಪ್ಪಿಕೊಂಡಿದ್ದಾರೆ. ನೋಡಿ: ಸಹೀಹುಲ್ ಜಾಮಿಅ್ 5/531; ಸಹೀಹು ತ್ತಿರ್ಮಿದಿ 3/160

**260- « يَا عَبْدَ اللَّهِ بْنَ قَيْسٍ أَلاَ أَدُلُّكَ عَلَى كَنْزٍ مِنْ كُنُوزِ الْجَنَّةِ»؟ فَقُلْتُ: بَلَى يَا رَسُولَ اللَّهِ، قَالَ: «قُلْ لاَ حَوْلَ وَلاَ قُوَّةَ إِلاَّ بِاللَّهِ»**

260. ಪ್ರವಾದಿ(ﷺ) ಹೇಳಿದರು: "ಓ ಅಬ್ದುಲ್ಲಾಹ್ ಇಬ್ನ್ ಕೈಸ್! ಸ್ವರ್ಗದ ನಿಧಿಗಳಲ್ಲಿ ಸೇರಿದ ಒಂದು ನಿಧಿಯನ್ನು ನಾನು ನಿಮಗೆ ತಿಳಿಸಿಕೊಡಲೇ? ನಾನು ಹೇಳಿದೆ: ಓ ಅಲ್ಲಾಹನ ರಸೂಲರೇ! ತಿಳಿಸಿಕೊಡಿ. ಅವರು ಹೇಳಿದರು: "ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್ ಎಂದು ಹೇಳು." [291]

**261- « أَحَبُّ الْكَلاَمِ إِلَى اللَّهِ أَرْبَعٌ: سُبْحَانَ اللَّهِ، وَالْحَمْدُ لِلَّهِ، وَلاَ إِلَهَ إِلاَّ اللَّهُ، وَاللَّهُ أَكْبَرُ، لاَ يَضُرُّكَ بِأَيِّهِنَّ بَدَأْتَ »**

261. ಪ್ರವಾದಿ(ﷺ) ಹೇಳಿದರು: "ಅಲ್ಲಾಹನಿಗೆ ಇಷ್ಟವಾದ ವಚನಗಳು ನಾಲ್ಕು: ಸುಬ್‌ಹಾನಲ್ಲಾಹ್, ವಲ್‌ಹಮ್ದುಲಿಲ್ಲಾಹ್, ವಲಾಇಲಾಹ ಇಲ್ಲಲ್ಲಾಹ್, ವಲ್ಲಾಹು ಅಕ್ಬರ್. ನೀನು ಯಾವುದರಿಂದ ಆರಂಭಿಸಿದರೂ ತೊಂದರೆಯಿಲ್ಲ." [292]

**262- جَاءَ أَعْرَابِيٌّ إِلَى رَسُولِ اللَّهِ ﷺ فَقَالَ: عَلِّمْنِي كَلاماً أَقُولُهُ: قَالَ: «قُلْ: لاَ إِلَهَ إِلاَّ اللَّهُ وَحْدَهُ لاَ شَرِيكَ لَهُ، اللَّهُ أَكْبَرُ كَبِيراً، وَالْحَمْدُ لِلَّهِ كَثِيراً، سُبْحَانَ اللَّهِ رَبِّ الْعَالَمِينَ، لاَ حَوْلَ وَلاَ قُوَّةَ إِلاَّ بِاللَّهِ الْعَزِيزِ**

---

[291] ಅಲ್‌ಬುಖಾರಿ ನೋಡಿ: ಫತ್‌ಹುಲ್ ಬಾರಿ 11/213; ಮುಸ್ಲಿಮ್ 4/2076

[292] ಮುಸ್ಲಿಮ್ 4/1685

الْحَكِيمِ» قَالَ: فَهَؤُلاَءِ لِرَبِّي، فَمَا لِي؟ قَالَ: «قُلْ: اللَّهُمَّ اغْفِرْ لِي، وَارْحَمْنِي، وَاهْدِنِي، وَارْزُقْنِي»

262. ಒಬ್ಬ ಗ್ರಾಮೀಣ ವ್ಯಕ್ತಿ ಪ್ರವಾದಿ(ﷺ)ರವರ ಬಳಿ ಬಂದು ಕೇಳಿದರು: "ನನಗೆ ಒಂದು ದಿಕ್ರನ್ನು ಹೇಳಿಕೊಡಿ." ಪ್ರವಾದಿ(ﷺ) ಹೇಳಿದರು: "ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಅಲ್ಲಾಹು ಅಕ್ಬರು ಕಬೀರಾ, ವಲ್‍ಹಮ್ದುಲಿಲ್ಲಾಹಿ ಕಸೀರಾ, ಸುಬ್‍ಹಾನಲ್ಲಾಹಿ ರಬ್ಬಿಲ್ ಆಲಮೀನ್, ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹಿಲ್ ಅಝೀಝಿಲ್ ಹಕೀಮ್ ಎಂದು ಹೇಳು." ಆ ವ್ಯಕ್ತಿ ಹೇಳಿದರು: "ಇವು ನನ್ನ ರಬ್ಬಿಗೆ? ನನಗಿರುವುದನ್ನು ಹೇಳಿರಿ." ಪ್ರವಾದಿ(ﷺ) ಹೇಳಿದರು: "ಅಲ್ಲಾಹುಮ್ಮಗ್‍ಫಿರ್ ಲೀ, ವರ್ಹಮ್‍ನೀ, ವಹ್ದಿನೀ, ವರ್‍ಝುಕ್‍ನೀ ಎಂದು ಹೇಳು." [293]

263- كَانَ الرَّجُلُ إِذَا أَسْلَمَ عَلَّمَهُ النَّبِيُّ ﷺ الصَّلاَةَ ثُمَّ أَمَرَهُ أَنْ يَدْعُوَ بِهَؤُلاَءِ الْكَلِمَاتِ: «اللَّهُمَّ اغْفِرْ لِي، وَارْحَمْنِي، وَاهْدِنِي، وَعَافِنِي وَارْزُقْنِي »

263. ಒಬ್ಬ ವ್ಯಕ್ತಿ ಮುಸ್ಲಿಮ್ ಆದರೆ ಪ್ರವಾದಿ(ﷺ)ರವರು ಆತನಿಗೆ ನಮಾಝನ್ನು ಕಲಿಸಿಕೊಟ್ಟು ನಂತರ ಈ ಪ್ರಾರ್ಥನೆಯನ್ನು ಪ್ರಾರ್ಥಿಸುವಂತೆ ಹೇಳುತ್ತಿದ್ದರು: "ಅಲ್ಲಾಹುಮ್ಮಗ್‍ಫಿರ್ ಲೀ, ವರ್ಹಮ್‍ನೀ, ವಹ್ದಿನೀ, ವಆಫಿನೀ, ವರ್‍ಝುಕ್‍ನೀ." [294]

[293] ಮುಸ್ಲಿಮ್ 4/2072

[294] ಮುಸ್ಲಿಮ್ 4/2073

264- « إِنَّ أَفْضَلَ الدُّعَاءِ الْحَمْدُ لِلَّهِ، وَأَفْضَلَ الذِّكْرِ لاَ إِلَهَ إِلاَّ اللَّهُ »

264. ಪ್ರವಾದಿ(ﷺ) ಹೇಳಿದರು: "ಅತಿಶ್ರೇಷ್ಠ ಪ್ರಾರ್ಥನೆ: ಅಲ್‌ಹಮ್ದುಲಿಲ್ಲಾಹ್. ಅತಿಶ್ರೇಷ್ಠ ದಿಕ್ರ್: ಲಾ ಇಲಾಹ ಇಲ್ಲಲ್ಲಾಹ್." [295]

265- « الْبَاقِيَاتُ الصَّالِحَاتُ: سُبْحَانَ اللَّهِ، وَالْحَمْدُ لِلَّهِ، وَلاَ إِلَهَ إِلاَّ اللَّهُ، وَاللَّهُ أَكْبَرُ، وَلاَ حَوْلَ وَلاَ قُوَّةَ إِلاَّ بِاللَّهِ»

265. ಪ್ರವಾದಿ(ﷺ) ಹೇಳಿದರು: "ಶಾಶ್ವತವಾಗಿ ಉಳಿಯುವ ಸತ್ಕರ್ಮಗಳು: ಸುಬ್‌ಹಾನಲ್ಲಾಹ್, ವಲ್‌ಹಮ್ದುಲಿಲ್ಲಾಹ್, ವಲಾ ಇಲಾಹ ಇಲ್ಲಲ್ಲಾಹ್, ವಲ್ಲಾಹು ಅಕ್ಬರ್, ವಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್." [296]

## 131. ಪ್ರವಾದಿ(ﷺ)ರವರು ಹೇಗೆ ತಸ್ಬೀಹ್ ಹೇಳುತ್ತಿದ್ದರು?

266- « عَنْ عَبْدِ اللَّهِ بْنِ عَمْرٍو رضي الله عنه قَالَ: رَأَيْتُ النَّبِيَّ ﷺ يَعْقِدُ التَّسْبِيحَ بِيَمِينِهِ »

[295] ಅತ್ತಿರ್ಮಿದಿ 5/462; ಇಬ್ನ್ ಮಾಜ 2/1249; ಅಲ್‌ಹಾಕಿಮ್ 1/503. ಅಲ್‌ಹಾಕಿಮ್ ಇದನ್ನು ಸಹೀಹ್ ಎಂದಿದ್ದಾರೆ ಮತ್ತು ಅದ್ದಹಬೀ ಒಪ್ಪಿಕೊಂಡಿದ್ದಾರೆ. ನೋಡಿ: ಸಹೀಹುಲ್ ಜಾಮಿಅ್ 1/362

[296] ಅಹ್ಮದ್ (513) ಅಹ್ಮದ್ ಶಾಕಿರ್‌ರವರ ಕ್ರಮೀಕರಣದ ಮೂಲಕ. ಇದರ ಸನದ್ ಸಹೀಹ್ ಆಗಿದೆ. ನೋಡಿ: ಮಜ್ಮಉ ಝ್ಝವಾಇದ್ 1/297.

266. “ಅಬ್ದುಲ್ಲಾಹ್ ಇಬ್ನ್ ಅಮ್ರ್‌ರಿಂದ: ಪ್ರವಾದಿ(ﷺ)ರವರು ಬಲಗೈಯಿಂದ ತಸ್ಬೀಹ್‌ಗಳನ್ನು ಎಣಿಸುವುದನ್ನು ನಾನು ಕಂಡಿದ್ದೇನೆ.” [297]

## 132. ಒಳಿತು ಮತ್ತು ಶಿಷ್ಟಾಚಾರದ ಸಂಗ್ರಹ ರೂಪ

**267- «إِذَا كَانَ جُنْحُ اللَّيْلِ – أَوْ أَمْسَيْتُم – فَـكُفُّوا صِبْيانَـكُم، فَإِنَّ الشَّيَاطِينَ تَنْتَشِرُ حِينَئِذٍ، فَإِذَا ذَهَبَ سَاعَةٌ مِنَ اللَّيلِ فَخَلُّوهُمْ، وَأَغْلِقُوا الأَبْوَابَ وَاذْكُرُوا اسْمَ اللَّهِ؛ فَإِنَّ الشَّيطَانَ لاَ يَفْتَحُ بَاباً مُغلَقاً، وَأَوْكُوا قِرَبَكُمْ، وَاذْكُرُوا اسْمَ اللَّهِ، وَخَمِّرُوا آنِيَتَكُم، وَاذْكُرُوا اسْمَ اللَّهِ، وَلَوْ أَنْ تَعْرُضُوا عَلَيْهَا شَيْئاً، وَأَطْفِئُوا مَصَابِيحَكُمْ»**

267. ಪ್ರವಾದಿ(ﷺ) ಹೇಳಿದರು: “ಮುಸ್ಸಂಜೆಯಾಗುವಾಗ ನಿಮ್ಮ ಮಕ್ಕಳನ್ನು ಮನೆಯೊಳಗೆ ಸೇರಿಸಿ. ಯಾಕೆಂದರೆ ಆ ಸಮಯದಲ್ಲಿ ಶೈತಾನರು ಹಬ್ಬಿಕೊಳ್ಳುತ್ತಾರೆ. ರಾತ್ರಿಯ ಒಂದು ತಾಸಿನ ಬಳಿಕ ಅವರನ್ನು ಬಿಟ್ಟುಬಿಡಿರಿ. ಬಾಗಿಲುಗಳನ್ನು ಮುಚ್ಚಿರಿ ಮತ್ತು ಅಲ್ಲಾಹನ ಹೆಸರನ್ನು ಉಚ್ಚರಿಸಿ. ಯಾಕೆಂದರೆ ಶೈತಾನನು ಮುಚ್ಚಿದ ಬಾಗಿಲನ್ನು ತೆರೆಯಲಾರನು. ಮಡಕೆಗಳನ್ನು ಮುಚ್ಚಿರಿ ಮತ್ತು ಅಲ್ಲಾಹನ ಹೆಸರನ್ನು ಉಚ್ಚರಿಸಿ. ನಿಮ್ಮ ಪಾತ್ರೆಗಳನ್ನು ಮುಚ್ಚಿರಿ ಮತ್ತು ಅಲ್ಲಾಹನ ಹೆಸರನ್ನು

[297] ಅಬೂ ದಾವೂದ್ 2/81; ಅತ್ತಿರ್ಮಿದಿ 5/521. ನೋಡಿ: ಸಹೀಹುಲ್ ಜಾಮಿಅ್ 4/271.

ಸ್ಮರಿಸಿರಿ. ಅವುಗಳ ಮೇಲೆ ಏನಾದರೂ ವಸ್ತು ಇಟ್ಟು ಬಿಡಿರಿ. ದೀಪಗಳನ್ನು ಆರಿಸಿರಿ.” [298]

**وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أَجْمَعِين .**

*********

298 ಅಲ್‌ಬುಖಾರಿ. ನೋಡಿ: ಫತ್‌ಹುಲ್ ಬಾರಿ 10/88; ಮುಸ್ಲಿಮ್ 3/1595

# ಒಳಪುಟಗಳಲ್ಲಿ



| م | العنوان | الصفحة |
|---|---|---|
| | ಪ್ರಸ್ತಾವನೆ | 1 |
| | ದಿಕ್ರ್‌ನ ಶ್ರೇಷ್ಠತೆ | 4 |
| 1 | ನಿದ್ದೆಯಿಂದ ಎದ್ದೇಳುವಾಗ ಹೇಳುವ ದಿಕ್ರ್‌ಗಳು | 12 |
| 2 | ಉಡುಪು ಧರಿಸುವಾಗ ಹೇಳುವುದು | 17 |
| 3 | ಹೊಸ ಉಡುಪು ಧರಿಸುವಾಗ | 17 |
| 4 | ಇತರರು ಹೊಸ ಉಡುಪು ಧರಿಸಿರುವುದನ್ನು ಕಂಡಾಗ | 18 |
| 5 | ಉಡುಪನ್ನು ಕಳಚುವಾಗ | 19 |
| 6 | ಮಲಮೂತ್ರ ವಿಸರ್ಜನಾ ಸ್ಥಳವನ್ನು ಪ್ರವೇಶಿಸುವಾಗ | 19 |
| 7 | ಮಲಮೂತ್ರ ವಿಸರ್ಜನಾ ಸ್ಥಳದಿಂದ ಹೊರಬರುವಾಗ | 20 |
| 8 | ವುದೂ ಮಾಡಲು ಪ್ರಾರಂಭಿಸುವಾಗ | 20 |
| 9 | ವುದೂ ಪೂರ್ತೀಕರಿಸಿದ ನಂತರ | 21 |
| 10 | ಮನೆಯಿಂದ ಹೊರಡುವಾಗ | 22 |
| 11 | ಮನೆಯನ್ನು ಪ್ರವೇಶಿಸುವಾಗ | 23 |
| 12 | ಮಸೀದಿಯೆಡೆಗೆ ಹೊರಡುವಾಗ | 24 |
| 13 | ಮಸೀದಿಯನ್ನು ಪ್ರವೇಶಿಸುವಾಗ | 26 |
| 14 | ಮಸೀದಿಯಿಂದ ಹೊರಬರುವಾಗ | 27 |
| 15 | ಅದಾನ್ ಆಲಿಸುವಾಗ | 27 |
| 16 | ದುಆಉಲ್ ಇಸ್ತಿಫ್ತಾಹ್ | **30** |
| 17 | ರುಕೂಅ್‌ನಲ್ಲಿ | **37** |
| 18 | ರುಕೂಅ್‌ನಿಂದ ಎದ್ದೇಳುವಾಗ | **39** |
| 19 | ಸುಜೂದ್‌ನಲ್ಲಿ | **40** |
| 20 | ಎರಡು ಸುಜೂದ್‌ಗಳ ಮಧ್ಯೆ | **44** |
| 21 | ತಿಲಾವತ್ತಿನ ಸುಜೂದ್‌ನಲ್ಲಿ | **44** |

| | | |
|---|---|---|
| 22 | ತಶಹ್ಹುದ್‌ನಲ್ಲಿ | 46 |
| 23 | ತಶಹ್ಹುದ್‌ನ ನಂತರ ಪ್ರವಾದಿ(ﷺ)ರವರ ಮೇಲೆ ಸಲಾತ್ | 47 |
| 24 | ತಶಹ್ಹುದ್‌ನ ನಂತರ ಸಲಾಮ್‌ಗೆ ಮುಂಚೆ | 48 |
| 25 | ಸಲಾಮ್ ಹೇಳಿದ ನಂತರ | 57 |
| 26 | ಇಸ್ತಿಖಾರಃ ನಮಾಝಿನ ದುಆ | 64 |
| 27 | ಬೆಳಗ್ಗೆ ಮತ್ತು ಸಂಜೆ | 66 |
| 28 | ಮಲಗುವಾಗ | 84 |
| 29 | ರಾತ್ರಿ ಅತ್ತಿತ್ತ ಹೊರಳಾಡಿದರೆ | 96 |
| 30 | ರಾತ್ರಿ ನಿದ್ದೆಯಲ್ಲಿ ಭಯವಾದರೆ ಅಥವಾ ಏಕಾಂಗಿಯಾಗಿ ನಿದ್ದೆ ಮಾಡುವಾಗ ಭಯವಾದರೆ | 96 |
| 31 | ಒಳ್ಳೆಯ ಅಥವಾ ಕೆಟ್ಟ ಕನಸನ್ನು ಕಂಡರೆ | 97 |
| 32 | ವಿತ್ರ್‌ನ ಕುನೂತ್ | 98 |
| 33 | ವಿತ್ರ್‌ನಲ್ಲಿ ಸಲಾಮ್ ಹೇಳಿದ ನಂತರ | 100 |
| 34 | ದುಃಖ ಮತ್ತು ವ್ಯಥೆಯುಂಟಾಗುವಾಗ | 101 |
| 35 | ತೊಂದರೆ ಎದುರಾಗುವಾಗ | 103 |
| 36 | ಶತ್ರುಗಳನ್ನು ಅಥವಾ ಅಧಿಕಾರವುಳ್ಳ ಜನರನ್ನು ಭಯಪಟ್ಟರೆ | 105 |
| 37 | ಆಡಳಿತಗಾರರ ಅಕ್ರಮವನ್ನು ಭಯಪಟ್ಟರೆ | 106 |
| 38 | ಶತ್ರುವಿನ ವಿರುದ್ಧ ಪ್ರಾರ್ಥನೆ | 108 |
| 39 | ಜನರನ್ನು ಭಯಪಟ್ಟರೆ | 109 |
| 40 | ವಿಶ್ವಾಸದಲ್ಲಿ ಸಂಶಯವುಂಟಾದರೆ | 109 |
| 41 | ಸಾಲದಿಂದ ಮುಕ್ತನಾಗಲು | 110 |
| 42 | ನಮಾಝ್ ಮಾಡುವಾಗ ಅಥವಾ ಕುರ್‌ಆನ್ ಪಾರಾಯಣ ಮಾಡುವಾಗ ವಸ್ವಾಸ್ ಉಂಟಾದರೆ | 111 |
| 43 | ಯಾವುದೇ ವಿಷಯ ಕ್ಲಿಷ್ಟಕರವಾದಾಗ | 112 |
| 44 | ಪಾಪ ಮಾಡಿದರೆ ಹೇಳುವುದು ಮತ್ತು ಮಾಡುವುದು | 113 |
| 45 | ಶೈತಾನನನ್ನು ಮತ್ತು ಅವನ ವಸ್ವಾಸನ್ನು ದೂರಮಾಡಲು | 113 |
| 46 | ಅಪ್ರಿಯ ಘಟನೆಯು ಜರುಗುವಾಗ | 114 |
| 47 | ಮಗು ಹುಟ್ಟಿದವನಿಗೆ ಶುಭಕೋರುವುದು ಮತ್ತು ಅದಕ್ಕೆ | 114 |

| | | |
|---|---|---|
| | ಉತ್ತರಿಸುವುದು | |
| 48 | ಮಕ್ಕಳನ್ನು ಅಲ್ಲಾಹನ ರಕ್ಷಣೆಯಲ್ಲಿಡುವುದು | **115** |
| 49 | ರೋಗಿಯನ್ನು ಸಂದರ್ಶಿಸುವಾಗ | **116** |
| 50 | ರೋಗಿಯನ್ನು ಸಂದರ್ಶನದ ಶ್ರೇಷ್ಠತೆ | **117** |
| 51 | ಬದುಕಿನ ಬಗ್ಗೆ ನಿರಾಶನಾದ ರೋಗಿಯ ಪ್ರಾರ್ಥನೆ | **118** |
| 52 | ಮರಣಶಯ್ಯೆಯಲ್ಲಿರುವವನಿಗೆ ಹೇಳಿಕೊಡುವುದು | **119** |
| 53 | ಮರಣ ದುರಂತ ಸಂಭವಿಸಿದಾಗ | **119** |
| 54 | ಮೃತ ವ್ಯಕ್ತಿಯ ಕಣ್ಣುಗಳನ್ನು ಮುಚ್ಚುವಾಗ | **120** |
| 55 | ಜನಾಝ ನಮಾಝ್‌ನಲ್ಲಿ | **121** |
| 56 | ಮಕ್ಕಳಿಗಾಗಿ ಜನಾಝ ನಮಾಝ್ ಮಾಡುವಾಗ | **124** |
| 57 | ತಅ್‌ಝಿಯಃ | **127** |
| 58 | ಮೃತದೇಹವನ್ನು ಗೋರಿಯೊಳಗಡೆ ಇಡುವಾಗ | **128** |
| 59 | ದಫನ ಮಾಡಿದ ನಂತರ | **128** |
| 60 | ಗೋರಿ ಸಂದರ್ಶಿಸುವಾಗ | **129** |
| 61 | ಗಾಳಿ ಬೀಸುವಾಗ | **129** |
| 62 | ಗುಡುಗಿನ ಶಬ್ದವನ್ನು ಆಲಿಸಿದಾಗ | **130** |
| 63 | ಮಳೆಗಾಗಿ ಪ್ರಾರ್ಥನೆ | **131** |
| 64 | ಮಳೆ ಸುರಿಯುವಾಗ | **132** |
| 65 | ಮಳೆ ಸುರಿದ ನಂತರ | **133** |
| 66 | ಮಳೆ ಅತಿಯಾದರೆ | **133** |
| 67 | ಚಂದ್ರ ದರ್ಶನವಾದರೆ | **134** |
| 68 | ಉಪವಾಸ ತೊರೆಯುವಾಗ | **134** |
| 69 | ಆಹಾರ ಸೇವಿಸುವುದಕ್ಕೆ ಮುಂಚೆ | **135** |
| 70 | ಆಹಾರ ಸೇವಿಸಿದ ನಂತರ | **136** |
| 71 | ಆತಿಥೇಯನಿಗಾಗಿ | **137** |
| 72 | ತನಗೆ ಆಹಾರ ಅಥವಾ ಪಾನೀಯವನ್ನು ನೀಡಿದವರಿಗಾಗಿ | **138** |
| 73 | ಒಂದು ಕುಟುಂಬದೊಂದಿಗೆ ಉಪವಾಸ ತೊರೆಯುವಾಗ | **138** |
| 74 | ಉಪವಾಸವಿರುವ ವ್ಯಕ್ತಿಯನ್ನು ಔತಣಕ್ಕೆ ಆಹ್ವಾನಿಸಿದರೆ | **139** |

| | | |
|---|---|---|
| 75 | ಉಪವಾಸವಿರುವಾಗ ಯಾರಾದರೂ ನಿಂದಿಸಿದರೆ | 139 |
| 76 | ಅವಧಿಪೂರ್ವ ಫಲವನ್ನು ದರ್ಶಿಸಿದಾಗ | 140 |
| 77 | ಸೀನಿದರೆ | 140 |
| 78 | ಅವಿಶ್ವಾಸಿ ಸೀನಿದ ನಂತರ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರೆ | 141 |
| 79 | ನೂತನ ವಧುವರರಿಗಾಗಿ | 141 |
| 80 | ವಿವಾಹವಾದಾಗ ಅಥವಾ ಮೃಗವನ್ನು ಖರೀದಿಸಿದಾಗ | 142 |
| 81 | ಸಂಭೋಗಿಸುವುದಕ್ಕೆ ಮೊದಲು | 142 |
| 82 | ಕೋಪ ಬರುವಾಗ | 143 |
| 83 | ಪರೀಕ್ಷಿಸಲ್ಪಟ್ಟವನನ್ನು ಕಂಡರೆ | 143 |
| 84 | ಸಭೆಯಲ್ಲಿ ಕುಳಿತಿರುವಾಗ | 144 |
| 85 | ಸಭೆಯ ಪ್ರಾಯಶ್ಚಿತ್ತ | 145 |
| 86 | ಅಲ್ಲಾಹು ನಿನ್ನನ್ನು ಕ್ಷಮಿಸಲಿ ಎಂದು ಯಾರಾದರೂ ಹೇಳಿದರೆ | 146 |
| 87 | ಯಾರಾದರೂ ಒಂದು ಉಪಕಾರ ಮಾಡಿದರೆ | 146 |
| 88 | ದಜ್ಜಾಲ್‌ನಿಂದ ಸಂರಕ್ಷಣೆ ಪಡೆಯಲು | 146 |
| 89 | ಅಲ್ಲಾಹನಿಗೋಸ್ಕರ ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ಯಾರಾದರೂ ಹೇಳಿದರೆ | 147 |
| 90 | ಯಾರಾದರೂ ನಿಮಗೆ ಹಣ ಕೊಟ್ಟರೆ | 148 |
| 91 | ಸಾಲವನ್ನು ಹಿಂದಿರುಗಿಸುವಾಗ | 148 |
| 92 | ಶಿರ್ಕ್‌ನ್ನು ಭಯಪಟ್ಟರೆ | 148 |
| 93 | ನಿನಗೆ ಅಲ್ಲಾಹು ಬರಕತ್ ನೀಡಲಿ ಎಂದು ಯಾರಾದರೂ ಹೇಳಿದರೆ | 149 |
| 94 | ಅಪಶಕುನವನ್ನು ತಿರಸ್ಕರಿಸುವ ಪ್ರಾರ್ಥನೆ | 149 |
| 95 | ವಾಹನವನ್ನೇರುವಾಗ | 150 |
| 96 | ಯಾತ್ರೆಯ ಪ್ರಾರ್ಥನೆ | 151 |
| 97 | ಯಾತ್ರೆಯಲ್ಲಿ ಹಳ್ಳಿಯನ್ನು ಅಥವಾ ಪಟ್ಟಣವನ್ನು ಪ್ರವೇಶಿಸುವಾಗ | 153 |
| 98 | ಪೇಟೆಯನ್ನು ಪ್ರವೇಶಿಸುವಾಗ | 154 |

| | | |
|---|---|---|
| 99 | ವಾಹನ ಮೃಗ ಎಡವಿದರೆ | 155 |
| 100 | ಯಾತ್ರೆಗೆ ಹೊರಡುವಾಗ ತಾನು ಅಗಲಿ ಹೋಗುವವರಿಗಾಗಿ | 155 |
| 101 | ಯಾತ್ರೆಗಾಗಿ ಬೀಳ್ಕೊಡುವಾಗ | 156 |
| 102 | ಯಾತ್ರೆ ಮಧ್ಯೆ ತಕ್ಬೀರ್ ಮತ್ತು ತಸ್ಬೀಹ್ ಹೇಳುವುದು | 156 |
| 103 | ಯಾತ್ರೆ ಮಧ್ಯೆ ಪ್ರಭಾತವಾದರೆ | 157 |
| 104 | ಯಾತ್ರೆ ಮಧ್ಯೆ ಮನೆಯೊಂದನ್ನು ಅಥವಾ ವಸತಿಗೃಹವನ್ನು ಪ್ರವೇಶಿಸುವಾಗ | 158 |
| 105 | ಯಾತ್ರೆಯಿಂದ ಮರಳುವಾಗ | 158 |
| 106 | ಇಷ್ಟವಾಗಿರುವುದನ್ನು ಮತ್ತು ಅನಿಷ್ಟವಾಗಿರುವುದನ್ನು ಕಂಡರೆ | 159 |
| 107 | ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳುವುದರ ಮಹತ್ವ | 160 |
| 108 | ಸಲಾಮ್ ಹೇಳುವುದನ್ನು ವ್ಯಾಪಕಗೊಳಿಸುವುದು | 162 |
| 109 | ಅವಿಶ್ವಾಸಿ ಸಲಾಮ್ ಹೇಳಿದರೆ | 163 |
| 110 | ಕೋಳಿ ಕೂಗುವುದನ್ನು ಮತ್ತು ಕತ್ತೆ ಅರಚುವುದನ್ನು ಕೇಳಿದರೆ | 164 |
| 111 | ರಾತ್ರಿ ನಾಯಿ ಬೊಗಳುವುದನ್ನು ಆಲಿಸಿದರೆ | 164 |
| 112 | ನೀವು ಯಾರನ್ನಾದರೂ ನಿಂದಿಸಿದರೆ ಏನು ಹೇಳಬೇಕು? | 165 |
| 113 | ಯಾರನ್ನಾದರೂ ಹೊಗಳುವುದಾದರೆ | 165 |
| 114 | ಯಾರಾದರೂ ತನ್ನನ್ನು ಹೊಗಳಿದರೆ | 166 |
| 115 | ಹಜ್ಜ್ ಮತ್ತು ಉಮ್ರಾದ ತಲ್ಬಿಯತ್ | 167 |
| 116 | ಅಲ್‌ಹಜರುಲ್ ಅಸ್ವದ್‌ನ ಬಳಿ ಬಂದರೆ ತಕ್ಬೀರ್ ಹೇಳುವುದು | 167 |
| 117 | ಅರ್ರುಕ್ನುಲ್ ಯಮಾನೀ ಮತ್ತು ಅಲ್‌ಹಜರುಲ್ ಅಸ್ವದ್‌ನ ಮಧ್ಯೆ | 168 |
| 118 | ಸಫಾ ಮತ್ತು ಮರ್ವಾಗಳ ಮೇಲೆ | 169 |
| 119 | ಅರಫಾ ದಿನದಂದು | 170 |
| 120 | ಅಲ್‌ಮಶ್‌ಅರುಲ್ ಹರಾಮ್‌ನಲ್ಲಿ | 171 |
| 121 | ಜಮರಾತ್‌ಗೆ ಕಲ್ಲೆಸೆಯುವಾಗ ತಕ್ಬೀರ್ ಹೇಳುವುದು | 171 |
| 122 | ಅದ್ಭುತವಾದುದನ್ನು ಅಥವಾ ಇಷ್ಟಕರವಾದುದನ್ನು ಕಂಡರೆ | 172 |
| 123 | ಇಷ್ಟಕರವಾದ ವಿಷಯವನ್ನು ಕಂಡರೆ ಏನು ಮಾಡಬೇಕು? | 173 |
| 124 | ದೇಹದಲ್ಲಿ ನೋವು ಕಂಡುಬಂದರೆ | 173 |

| | | |
|---|---|---|
| 125 | ದೃಷ್ಟಿ ತಾಗಬಹುದೆಂದು ಭಯಪಟ್ಟರೆ | **174** |
| 126 | ಭಯವುಂಟಾದರೆ | **175** |
| 127 | ಪ್ರಾಣಿಯನ್ನು ಕೊಯ್ಯುವಾಗ ಅಥವಾ ಬಲಿಯರ್ಪಿಸುವಾಗ | **175** |
| 128 | ಹಟಮಾರಿ ಶೈತಾನರ ಉಪದ್ರವಗಳನ್ನು ತಡೆಗಟ್ಟಲು | **175** |
| 129 | ಇಸ್ತಿಗ್ಫಾರ್ ಮತ್ತು ತೌಬಾ | **177** |
| 130 | ತಸ್ಬೀಹ್, ತಹ್ಮೀದ್, ತಹ್ಲೀಲ್ ಮತ್ತು ತಕ್ಬೀರ್‌ಗಳ ಮಹತ್ವ | **179** |
| 131 | ಪ್ರವಾದಿ(ﷺ)ರವರು ಹೇಗೆ ತಸ್ಬೀಹ್ ಹೇಳುತ್ತಿದ್ದರು? | **185** |
| 132 | ಒಳಿತು ಮತ್ತು ಶಿಷ್ಟಾಚಾರದ ಸಂಗ್ರಹ ರೂಪ | **185** |

IslamHouse.com